

ಪೂಜನೀಯ ಶ್ರೀ ಸ್ವಾಮಿ ಶಾಂತಾನಂದ ಪುರಿ ಮಹಾಸ್ವಾಮಿಗಳು ಪುಣ್ಯಭೂಮಿ ಭಾರತದ ಋಷಿ-ಮುನಿಗಳ ಭವ್ಯ ಪರಂಪರೆಯ ಪ್ರತೀಕ. ಹಿಮಾಲಯದ ವಶಿಷ್ಠಗುಹೆ ಅವರ ಸಾಧನೆ ಹಾಗೂ ಸಿದ್ಧಿ ಕ್ಷೇತ್ರ. ಇವರು ಪರಮಪೂಜ್ಯ ಶ್ರೀ ಸ್ವಾಮಿ ಪುರುಷೋತ್ತಮಾನಂದಜೀ ಅವರ ಅಂತರಂಗ ಶಿಷ್ಯರು.

ಶ್ರೀ ಸ್ವಾಮಿಗಳು ಜ್ಞಾನ ವೈರಾಗ್ಯಗಳ ಸಾಕಾರ ಮೂರ್ತಿಗಳು. ಗಾಢ ತಪಸ್ಸಿನ ತೇಜಸ್ಸು , ಸಂತಶ್ರೇಷ್ಠನ ಸ್ನೇಹಮಯ ವ್ಯಕ್ತಿತ್ವ ಅವರಲ್ಲಿ ಅಪೂರ್ವ ರೀತಿಯಲ್ಲಿ ಸಂಗಮಿಸಿದೆ. ಶಿಶು ಸಹಜ ಸರಳತೆ, ಸ್ಫಟಿಕಶುದ್ಧ ಚಾರಿತ್ರ್ಯ, ದೈವ ಶ್ರದ್ಧೆ ಜ್ಞಾನನಿಷ್ಠೆಗಳು ಮತ್ತು ಸಂಪೂರ್ಣ ಆತ್ಮ ಸಮರ್ಪಣಾಭಾವ ಅವರಲ್ಲಿ ಏಕೀಭವಿಸಿವೆ. ತಮ್ಮ ಈ ಅನನ್ಯಗುಣ-ಸ್ವಭಾವಗಳಿಂದ ಅವರು ದೇಶದಾದ್ಯಂತ ಹಾಗೂ ವಿದೇಶಗಳಲ್ಲಿ ಅಪಾರ ಸಂಖ್ಯೆಯ ಶಿಷ್ಯರನ್ನು ಹೊಂದಿದ್ದಾರೆ.


ತಮ್ಮ ಗುರುಗಳ ಆದೇಶದಂತೆ ಶ್ರೀಮದ್ ಭಾಗವತ ಪುರಾಣದ ಪ್ರವಚನ ಸಪ್ತಾಹಗಳನ್ನು ದೇಶದಾದ್ಯಂತ ಕೈಗೊಂಡಿದ್ದಾರೆ. ಪೂಜ್ಯರು ಲಿಂಗಪುರಾಣದಲ್ಲಿ ಬರುವ ಶಿವ ಸಹಸ್ರನಾಮಕ್ಕೆ ಹಿಂದಿ ಮತ್ತು ತಮಿಳಿನಲ್ಲಿ ವ್ಯಾಖ್ಯಾನವನ್ನು ರಚಿಸಿದ್ದಾರೆ ಹಾಗೂ ಸಂಸ್ಕೃತದಲ್ಲಿ ರಚಿಸಿರುವ 'ರಮಣ ಸುಪ್ರಭಾತಂ' ಅನ್ನು ತಿರುವಣ್ಣಾಮಲೈಯ ಶ್ರೀ ರಮಣಾಶ್ರಮದವರು ಧ್ವನಿಮುದ್ರಣ ಮಾಡಿದ್ದಾರೆ.

ಸ್ವಾಮೀಜಿಯವರ ಕೃತಿಗಳಾದ 'ಶ್ರೀಮದ್ ಭಾಗವತಂ: ಆಧುನಿಕ ಮಾನವನಿಗೆ ಅದರ ಸಂದೇಶ', 'ಸಾಧನೆಗಳು : ಭಗವದ್ಗೀತೆಯ ಬೆಳಕಿನಲ್ಲಿ', 'ಪರತತ್ತ್ವಕ್ಕೆ ನೇರ ಜಿಗಿತ' (ಅಷ್ಟಾವಕ್ರ ಗೀತೆಯ ತಿರುಳು), 'ಜೀವನ್ಮುಕ್ತಿ' (ಬಂಧ ವಿಮೋಚನೆ ಇಲ್ಲಿಯೇ, ಈಗಲೇ) ತುಂಬಾ ಜನಪ್ರಿಯವಾಗಿವೆ. ಇವೇ ಅಲ್ಲದೆ ಸ್ವಾಮೀಜಿಯವರ 'Fragrant Flowers', 'Stories for Meditation', 'Answers to Basic Spiritual Questions', 'Sri Lalita Sahasranama Stotram - An Insight', 'Sadhanas according to yoga vasishta', 'Infallible Vedic Remedies', 'Musings of a Himalayan Monk' ಮತ್ತು 'Stories for Inspiration' ಅಧ್ಯಾತ್ಮದ ಒಳನೋಟಗಳ ಕೈಗನ್ನಡಿಗಳಾಗಿವೆ.

ಪ್ರಕೃತ ಈ ಕೃತಿಯಲ್ಲಿ ಪೂಜ್ಯ ಸ್ವಾಮೀಜಿಯವರು ಸ್ಫೂರ್ತಿದಾಯಕವೂ, ಅರ್ಥಪೂರ್ಣವೂ ಆದ ನೀತಿ ಕಥೆಗಳನ್ನು ಅನೇಕ ಮೂಲಗಳಿಂದ ಸಂಗ್ರಹಿಸಿ, ಅವುಗಳನ್ನು ಮನಮೋಹಕವಾದ ಮತ್ತು ಆತ್ಮೀಯವಾದ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಇವುಗಳು ಕೇವಲ ಕಥೆಗಳನ್ನು ಕೇಳಲು ಬಯಸುವ ಬಾಲಕರಿಗೆ ಮಾತ್ರವೇ ಅಲ್ಲದೆ ಅಧ್ಯಾತ್ಮ ಜ್ಞಾನವನ್ನು ತೀವ್ರವಾಗಿ ಬಯಸಿ ಸಾಧನೆಯಲ್ಲಿ ನಿರತರಾಗಿರುವವರಿಗೂ ಫಲಕಾರಿಯಾಗಿ ಮಾರ್ಗದರ್ಶನ ನೀಡುವುದರಲ್ಲಿ ಅತ್ಯಂತ ಉಪಯುಕ್ತವಾಗಿವೆ.

# ಪ್ರೇರಣೆಗಾಗಿ ಕತೆಗಳು



ಸ್ವಾಮಿ ಶಾಂತಾನಂದ ಪುರಿ

# ಪ್ರೇರಣೆಗಾಗಿ ಕಥೆಗಳು

ಶ್ರೀ ಸ್ವಾಮಿ ಶಾಂತಾನಂದ ಪುರಿ

ಅನುವಾದ

ಎ.ಎಸ್. ವೇಣುಗೋಪಾಲ ರಾವ್
ಭದ್ರಾವತಿ

ಪ್ರಕಾಶಕರು
ಪಾರ್ವತಮ್ಮ ಸಿ.ಪಿ. ಸುಬ್ಬರಾಜು ಶೆಟ್ಟಿ
ಚಾರಿಟಬಲ್ ಟ್ರಸ್ಟ್
13/8, ಪಿ.ಎಂ.ಕೆ. ರೋಡ್, ಶಂಕರಪುರಂ
ಬೆಂಗಳೂರು – 560 004.

**PRERANEGAGI KATHEGALU** - A collection of interesting and spiritually elevating stories of faith, humanity, Gods Love etc.,


© ಪ್ರಕಾಶಕರು : **ಪಾರ್ವತಮ್ಮ ಸಿ.ಪಿ. ಸುಬ್ಬರಾಜು ಶೆಟ್ಟಿ ಚಾರಿಟಬಲ್ ಟ್ರಸ್ಟ್**
13/8, ಪಿ.ಎಂ.ಕೆ. ರೋಡ್, ಶಂಕರಪುರಂ
ಬೆಂಗಳೂರು - 560 004.

ಮೊದಲನೇ ಮುದ್ರಣ : ಮೇ 2007

ಮುಖಪುಟ ವಿನ್ಯಾಸ : ಶ್ರೀಮತಿ ಅಪರ್ಣ ಕೌರ್

ಮುದ್ರಕರು :
**ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್**
3/4, 1ನೇ ಮುಖ್ಯರಸ್ತೆ , ಎನ್.ಟಿ.ಪೇಟೆ
ಬೆಂಗಳೂರು - 560 002.
ಟೆಲಿಫ್ಯಾಕ್ಸ್ : 26708186, 26709026
e-mail : omkaroffset@gmail.com
website : www.omkarprinters.com






*H.H. Srimad Swami Purushottamanandaji Maharaj*

ಓಂ ನಮೋ ಭಗವತೇ ಶ್ರೀ ರಮಣಾಯ

# ಮುನ್ನುಡಿ

ಪ್ರತಿದಿನದ ಸಮಾಚಾರಗಳೂ, ಹಿಂಸೆ, ನೈತಿಕ ಅಧಃಪತನ, ಲಂಚಕುಸುವತ್ತು, ಸಾರ್ವಜನಿಕ ಹಣದ ದುರುಪಯೋಗ ಮುಂತಾದವುಗಳು ಸಾಮಾನ್ಯ ಸೇವಕನಿಂದ ಮಂತ್ರಿಗಳವರೆಗಿನ ಎಲ್ಲ ಹಂತಗಳಲ್ಲೂ ಹೆಚ್ಚುತ್ತಲೇ ಇರುವುದಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ. ವಿದ್ಯಾ ಸಂಸ್ಥೆಗಳಲ್ಲಿಯೂ ವಿದ್ಯಾರ್ಥಿಗಳಲ್ಲಿ ಅಶಿಸ್ತು, ಸ್ವಚ್ಛಂದತೆ, ಮತ್ತು ಹಿಂಸೆ ಹಬ್ಬಿದೆ. ಈ ಅಪಾಯಕರ ಪ್ರವೃತ್ತಿ ಬದಲಾಗಬೇಕಾದರೆ, ಈ ರಾಷ್ಟ್ರದ ಮಕ್ಕಳು ಹಾಗೂ ತರುಣರಲ್ಲಿ ಸಮಸ್ತ ವಿಶ್ವವನ್ನೆಲ್ಲ ನಿಯಂತ್ರಿಸುತ್ತಿರುವ ಮಹಾಶಕ್ತಿಯಲ್ಲಿ ಮೂಲಭೂತ ಶ್ರದ್ಧೆಯನ್ನು ಬೆಳೆಸುವುದು ಮತ್ತು ಈ ದೇಶದ ಭವ್ಯ ಸಾಂಸ್ಕೃತಿಕ ಪರಂಪರೆಯ ಅರಿವನ್ನು ಮೂಡಿಸುವುದೂ ಅತ್ಯಗತ್ಯ. ಜನರು ಭಗವಂತನಲ್ಲಿ ಪ್ರೀತಿಯನ್ನೂ ಧರ್ಮದಲ್ಲಿ ಗೌರವವನ್ನೂ ಅವರು ಯಾವುದೇ ಮತವನ್ನು ಅವಲಂಬಿಸಿರಲಿ - ಹೊಂದುವಂತೆ ಪ್ರೇರೇಪಿಸಬೇಕು. 'ಪ್ರೇರಣೆಗಾಗಿ ಕಥೆಗಳು' ಎಂಬ ಈ ಕೃತಿ ಇಂದಿನ ತರುಣ ಜನಾಂಗದಲ್ಲಿ ಗಾಢವಾದ ದೈವಭಕ್ತಿಯನ್ನು ಪ್ರಚೋದಿಸಿ ಅವರ ನೈತಿಕ ಮೌಲ್ಯಗಳನ್ನು ದೃಢಪಡಿಸುವುದರ ಜೊತೆಗೆ ಕೊಂಚ ಮನರಂಜನೆಯನ್ನೂ ನೀಡುವಂತಾದೀತು ಎಂದು ನಂಬಲಾಗಿದೆ. ಹ್ಯಾರಿ ಪಾಟರ್, ತನ್ನ ಮಾಂತ್ರಿಕತೆಯ ದಟ್ಟವಾದ ರುಚಿಕಟ್ಟು, ಹಾಗೂ ಅತೀಂದ್ರಿಯ

ಶಕ್ತಿಗಳ ಚಿತ್ರಣದಿಂದ ಅದೆಷ್ಟು ಜನಪ್ರಿಯವಾಗಿದೆ ಎಂದರೆ, ಈ ಕಥಾಮಾಲಿಕೆಯಲ್ಲಿ ಒಂದು ಹೊಸ ಸಂಪುಟ ಬಿಡುಗಡೆಯಾಗುತ್ತಿದ್ದಂತೆಯೇ ಹುಡುಗ-ಹುಡುಗಿಯರು ತಮ್ಮ ತಂದೆ ತಾಯಿಗಳೊಡನೆ ಪುಸ್ತಕದ ಮಳಿಗೆಗಳಿಗೆ ಹೋಗಿ ಉದ್ದವಾದ ಕ್ಯೂನಲ್ಲಿ ಗಂಟೆಗಟ್ಟಲೆ ಪುಸ್ತಕದ ಪ್ರತಿಗಾಗಿ ನಿಲ್ಲುತ್ತಾರೆ ! ಭಗವಂತನ ಪವಾಡಗಳು, ದಯೆ, ಪ್ರೀತಿ, ಸತ್ಯ, ಶ್ರದ್ಧೆಗಳನ್ನು ಒಳಗೊಂಡ ಕಥೆಗಳನ್ನು ಹೆಕ್ಕಿ ತೆಗೆದು ಪ್ರಕಟಿಸಿದರೆ ಅವು ಇನ್ನೂ ಆರೋಗ್ಯದ ಹಾಗೂ ಪ್ರಯೋಜನಕರವಾಗುವುದಿಲ್ಲವೆ? ಸಂಚಾರದ ಸುರಕ್ಷತೆಗಾಗಿ ನಾವು ಬಳಸಿಕೊಳ್ಳುತ್ತಿರುವ ಎಲ್ಲ ಮಾರ್ಗ ನಿಯಂತ್ರಣಗಳಿದ್ದೂ ಅದೆಷ್ಟು ವಾಹನ ಅಪಘಾತಗಳು ದಿನದಿನವೂ ಸಂಭವಿಸಿ ತರುಣರು ಚಿಂತಾಜನಕವಾಗಿ ಮರಣಿಸುತ್ತಿದ್ದಾರೆ. ಧ್ಯಾನ ಹಾಗೂ ಕ್ರಮಬದ್ಧವಾದ ಪ್ರಾರ್ಥನೆಗಳನ್ನು ಪರಮಾತ್ಮನಲ್ಲಿ ದೃಢವಾದ ಶ್ರದ್ಧೆ ಹಾಗೂ ದೃಢತೆಯಿಂದ ಕೈಗೊಳ್ಳುವುದರಿಂದ ಮಾತ್ರ ಇಂತಹ ಅಪಘಾತಗಳು, ದುರ್ಘಟನೆಗಳ ವಿರುದ್ಧದ ವಿಮೆ ಸಾಧ್ಯ. ಅಂತಹ ಹಲವಾರು ಸಂದರ್ಭಗಳನ್ನು ನಾನು ವೈಯಕ್ತಿಕವಾಗಿ ಕಂಡುಕೊಂಡಿದ್ದೇನೆ. ಈ ಮೊದಲು ಪ್ರಕಟವಾದ 'ಚಿಂತನೆಗಾಗಿ ಕಥೆಗಳು' ಕೃತಿಯಲ್ಲಿರುವಂತೆ, ಈ ಪುಸ್ತಕದಲ್ಲಿಯೂ ಕೆಲವು ಕಥೆಗಳನ್ನು ಸೇರಿಸಿಕೊಳ್ಳಲಾಗಿದೆ.

ಸಮಸ್ತ ಮಾನವತೆಯ ಪ್ರಯೋಜನಕಾರಿಯಾದ ಉದಾತ್ತ ಜೀವನ ಮೌಲ್ಯಗಳ ಕಡೆಗೆ ನಮ್ಮ ಮಕ್ಕಳು ಮತ್ತು ಯುವಕರ ಗಮನವನ್ನು ಸೆಳೆಯುವಂತಾಗಲು ಈ ಕೃತಿಯು ಸ್ವಲ್ಪಮಟ್ಟಿಗಾದರೂ ತನ್ನ ಕೊಡುಗೆಯನ್ನು ನೀಡಬಲ್ಲದು ಎಂಬ ಮಮತೆಯ ಭರವಸೆ ನಮಗಿದೆ.


ಈ ಪುಸ್ತಕದ ರಕ್ಷಾಪುಟಕ್ಕೆ ಸುಂದರವೂ ಅರ್ಥಪೂರ್ಣವೂ ಆದ ವಿನ್ಯಾಸವನ್ನು ರಚಿಸಿಕೊಟ್ಟ ದೆಹಲಿಯ ವಿಶ್ವವಿಖ್ಯಾತ ಕಲಾವಿದೆ ಶ್ರೀಮತಿ ಅರ್ಪಣಾ ಕೌರ್ ಅವರ ಔದಾರ್ಯಕ್ಕೆ ನಮ್ಮ ಗಾಢವಾದ ಕೃತಜ್ಞತೆ ಸಲ್ಲುತ್ತದೆ.



ಈ ಕೃತಿಯಲ್ಲಿನ ಯಾವೊಂದು ಕಥೆಯೂ ಸ್ವಂತ ರಚನೆಯಲ್ಲ. ಅವನ್ನು ನಾನು ಓದಿ ತಿಳಿದಿದ್ದೇನೆ (Readers' Digest ಮುಂತಾದ ನಿಯತಕಾಲಿಕೆ ಅಥವಾ ಪುಸ್ತಕಗಳಲ್ಲಿ) ಅಥವಾ ಹಲವಾರು ವರ್ಷಗಳ ಮೊದಲು ನನ್ನ ತೀರ್ಥರೂಪು ತಂದೆಯವರಿಂದ ಹಾಗೂ ಬೇರೆಯವರಿಂದ ಕೇಳಿದ್ದೇನೆ. 37, 30 ಮತ್ತು 4ನೆಯ ಕಥೆಗಳಲ್ಲಿಯಂತೆ ಭಗವಾನ್ ರಜನೀಶರ (OSHO) ಕೃತಿಗಳಿಂದ ಆರಿಸಿಕೊಂಡಿದ್ದೇನೆ. ಕಥೆಗಳಲ್ಲಿನ ಹೆಸರುಗಳನ್ನು ಮಾತ್ರ ಬದಲಾಯಿಸಲಾಗಿದೆ.

ಎಂದಿನಂತೆ ಓಂಕಾರ್ ಪ್ರಿಂಟರ್ಸ್‌ನ ಶ್ರೀ ಪಿ.ಎಸ್. ವೆಂಕಟೇಶ ಬಾಬು, ಶ್ರೀ ನಾಗೇಂದ್ರ ಅವರ ಸಮರ್ಥ ನೆರವಿನಿಂದ ಅತ್ಯಂತ ಆಕರ್ಷಕವಾದ ಈ ಕೃತಿಯ ಮುದ್ರಣದಲ್ಲಿ ತಮ್ಮ ಪ್ರೀತಿಯ ಸೇವೆಯನ್ನು ನೀಡಿದ್ದಾರೆ. ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಶ್ರೀ ಬಾಬು ಅವರು ಒದಗಿಸುತ್ತಿರುವ ನಿರಂತರವಾದ ಈ ಶ್ರೇಷ್ಠ ಸೇವೆಯನ್ನು ನಮ್ಮ ಎಲ್ಲ ಓದುಗರೂ ಮೆಚ್ಚಿದ್ದಾರೆ. ಅವರಿಗೂ ಶ್ರೀ ನಾಗೇಂದ್ರ ಅವರಿಗೂ ನಮ್ಮ ಕೃತಜ್ಞತೆಗಳು ಹಾಗೂ ಆಶೀರ್ವಾದ.

**- ಸ್ವಾಮಿ ಶಾಂತಾನಂದ ಪುರಿ**



*H.H. Srimad Swami Shantananda Puri Maharaj*

# ಪರಿವಿಡಿ


ಮುನ್ನುಡಿ ........ iii

1. ಭಗವಂತನ ಅನುಕಂಪ ........ 1
2. ಕೃಷ್ಣ ಬಂದ - ಮನೆಗೇ ! ........ 5
3. ಪ್ರಾರ್ಥಿಸುವವನ ಪಗಾರ ........ 7
4. ಒಂದು ನ್ಯಾಯವಾದ ತೀರ್ಪು ........ 11
5. ಅನಿರೀಕ್ಷಿತ ಸಹಾಯಧನ ........ 14
6. ಒಂದು ವಿಚಿತ್ರ ಹೈವೇ ದರೋಡೆ ........ 19
7. ನಿಜವಾದ ನಾಯಕ ........ 26
8. ತನ್ನ ಭಕ್ತರ ಬಗೆಗೆ ಎಂದೂ ವಿಫಲವಾಗದ ಭಗವಂತನ ಪ್ರತಿಸ್ಪಂದನ ........ 29
9. ಗೊಂದಲಗೊಳಿಸುವ ಪ್ರಶ್ನೆ ........ 31
10. ಉದಾರ ಹೃದಯದಲ್ಲಿ ಇನ್ನೂ ಸಾಕಷ್ಟು ಸ್ಥಳವಿದೆ ........ 33
11. ಸಾವು ಸಂಕಟಕ್ಕೆ ಕಾರಣವಾಗಬಾರದು ........ 35
12. ಇದು ನಿಜವೋ ಅದು ನಿಜವೋ ! ........ 38
13. ಭಗವಂತನನ್ನು ಮೋಸಗೊಳಿಸಲು ಸಾಧ್ಯವಿಲ್ಲ! ........ 43

14. ಭಗವಂತನ ನಾಮವು ಅಷ್ಟು ಅಗ್ಗವಲ್ಲ................................ 45
15. ಪದ್ಮಪಾದರ ಕಥೆ ........................................................ 47
16. ಭಗವಂತನು ಸುಖ-ದುಃಖ ಎರಡನ್ನೂ
ಕೊಟ್ಟಿದ್ದಾದರೂ ಏಕೆ ?........................................... 50
17. ವಿನೀತ ವೈದ್ಯ - ಸಂತ.................................................. 52
18. ಭಗವಂತನ ಕರುಣೆ .................................................... 54
19. ತುಣುಕುಗಳು : ........................................................ 56
(ಅ) ಒಬ್ಬ ಗುರುವನ್ನು ಆಯ್ಕೆ ಮಾಡಿಕೊಳ್ಳಿ.......................... 56
(ಆ) ಅದೆಷ್ಟು ಹೊತ್ತು ನೀನು ಹೊರಗೇ ಇರುವೆ ?.................. 57
(ಇ) ದೇವಾಲಯ ಎನ್ನುವುದು ಏನು ? ............................. 58
20. ಭಗವಂತನ ನಿಜವಾದ ಪೂಜೆ ........................................... 62
21. 'ನಾನು' ಎಂಬುದು ಏನು ?
'ನೀನು' ಎಂಬುದು ಏನು ? (ರಿಭು ಗೀತ) ......................... 65
22. ಒಬ್ಬ ದೊರೆ ಹಾಗೂ ಒಬ್ಬ ಸಾಧುವಿನ
ನಡುವೆ ಇರುವ ವ್ಯತ್ಯಾಸ.............................................. 68
23. ಶ್ರೀಧರಾಚಾರ್ಯರ ಕಥೆ................................................. 72
24. ಅವರೇ ನನ್ನ ಗುರು .................................................... 76
25. ಶ್ರೇಷ್ಠ ಕವಿ ಯಾರು ?................................................. 79
26. ಜನ್ಮದಿನದ ವಿಶಿಷ್ಟ ಉಡುಗೊರೆ ...................................... 81
27. ಗುಣಪಡಿಸಲೇ ಆಗದ ಉದರಶೂಲೆ................................... 82
28. ನರಕದಲ್ಲೂ ದೇವರಿದ್ದಾನೆ !............................................ 84
29. ಶಾಸ್ತ್ರಗಳನ್ನು ಅರ್ಥಮಾಡಿಕೊ ........................................ 88



30. ಸಂವಹನದ ಕಂದರ ...................................................... 92
31. ಮಾನಸಿಕ ಪೂಜೆ........................................................ 93
32. ವೇದಾಂತದ ಜೋಗುಳ .................................................. 95
33. ನೋಟದಲ್ಲಿಯೇ ಹಿಂಸೆ.................................................. 98
34. ವಿದ್ಯಾಭ್ಯಾಸಕ್ಕೆ ದುಬಾರಿಯಾದ ಫೀಸು ............................ 100
35. ಮನಸ್ಸಿನೊಡನೆ ಕಠಿಣವಾಗಿ ವರ್ತಿಸಬೇಡ ! ......................... 102
36. ಯಾವುದೂ ನನ್ನದಲ್ಲ................................................... 103
37. ಶಾಂತವಾಗಿದ್ದಾಗ ಹೋರಾಡು !....................................... 106
38. ಕರಕುಶಲ ಶಿಲ್ಪಿ......................................................... 108
39. ರಾಮನಾಮದ ಬೆಲೆ ಎಷ್ಟು ?.......................................... 110
40. ದುಬಾರಿ ವಿನಿಮಯ..................................................... 113
41. ಈ ಮಂದಹಾಸ ಬೇರೆ ಬಗೆಯದು....................................... 115

✤ ✤ ✤

# 1. ಭಗವಂತನ ಅನುಕಂಪ

ಡಾ॥ ಶಾಂತಿ, ಲೂದಿಯಾನದ ಸುಪ್ರಸಿದ್ಧ ಸ್ತ್ರೀ ವೈದ್ಯೆ. ಒಮ್ಮೆ ಆಕೆ ಉತ್ತರ ಪ್ರದೇಶದ ರೂರ್ಕಿಗೆ ಹೋಗಿ ಒಂದು ಹೋಟೆಲ್‌ನಲ್ಲಿ ರಾತ್ರಿ ತಂಗಬೇಕಾಯಿತು. ಅಂದು ಮಧ್ಯರಾತ್ರಿ ಆ ಹೋಟೆಲ್‌ನ ವ್ಯವಸ್ಥಾಪಕ ಆಕೆಯನ್ನು ಎಬ್ಬಿಸಿ, ಸಮೀಪದ ಧರ್ಮಶಾಲೆಯಲ್ಲಿ ಒಬ್ಬ ಗರ್ಭಿಣಿ ಹೆಂಗಸು ಪ್ರಸವ ವೇದನೆಯಿಂದ ನರಳುತ್ತಿದ್ದಾಳೆಂದೂ, ತಕ್ಷಣದ ಚಿಕಿತ್ಸೆ ಆಕೆಗೆ ಅಗತ್ಯವಾಗಿದೆಯೆಂದೂ ಬಿನ್ನವಿಸಿದ. ಡಾ॥ ಶಾಂತಿ ತಕ್ಷಣ ಅಲ್ಲಿಗೆ ಧಾವಿಸಿ ಮಹಿಳೆಯನ್ನು ಪರೀಕ್ಷಿಸಿದಾಗ, ಗರ್ಭಕೋಶದಿಂದ ಹೊರಗೆ ಬರಲು ಯತ್ನಿಸುತ್ತಿದ್ದ ಶಿಶುವಿಗೆ ಕಾಲುಗಳೇ ಇರದೆ ಸೊಂಟದ ಕೆಳಭಾಗದಲ್ಲಿ ಒಂದು ಮಾಂಸದ ಮುದ್ದೆ ಮಾತ್ರ ಚಾಚಿಕೊಂಡಿರುವುದು ಕಂಡುಬಂದಿತು. ಗರ್ಭಿಣಿ ಹೆಂಗಸು ಚಿಂದಿ ಬಟ್ಟೆ ಧರಿಸಿದ್ದಳು. ಅವಳ ಬಳಿ ಏನೋ ಅಲ್ಪಸ್ವಲ್ಪ ಪದಾರ್ಥಗಳಿದ್ದವು. ಡಾ॥ ಶಾಂತಿಯಲ್ಲಿ ಅನುಕಂಪ ಉಕ್ಕಿ ಬಂದಿತು. ಒಂದರೆಕ್ಷಣ ತನ್ನಲ್ಲೇ ಚಿಂತಿಸಿದಳು. ಈ ಅಂಗವಿಕಲ ಮಗುವನ್ನು ನಾನು ಬದುಕಿಸಿದರೆ, ಅದು ಈ ಬಡ ಹೆಂಗಸಿಗೆ ಜೀವಮಾನವೆಲ್ಲಾ ಹೊರೆಯಾಗುತ್ತದೆ. ನಾನು ಅತಿ ಸುಲಭವಾಗಿ ಇಕ್ಕಳದಿಂದ ಅದರ ಕುತ್ತಿಗೆಯನ್ನು ತಿರುಚಿ ಮಗು ಸತ್ತು ಹುಟ್ಟಿದೆ ಎಂದು ಘೋಷಿಸಿ ಬಿಡಬಹುದು! ಏನೋ ಸ್ವಲ್ಪಕಾಲವಷ್ಟೆ ಆಕೆ ದುಃಖತಪ್ತಳಾಗಿರಬಹುದು.''

ಆದರೆ ಎರಡನೇ ಬಾರಿ ಯೋಚಿಸಿದಾಗ ಅವಳ ಮನಸ್ಸಿಗೆ ಹೊಳೆಯಿತು: 'ಈ ಮಗುವಿನ ಬದುಕಿನಲ್ಲಿ ಚೆಲ್ಲಾಟವಾಡಲು ನಾನು ಯಾರು? ಈ ಜಗತ್ತಿನಲ್ಲಿ ಇಂಥ ಅಂಗವಿಕಲ ಮಗುವನ್ನು ಹೊರತರಲು ಭಗವಂತನಿಗೆ ತನ್ನದೇ ಆದ ಕಾರಣಗಳಿರಬಹುದು, ಎಂಬುದು ನನಗೆ ನಿಶ್ಚಯವಾಗಿದೆ. ಆತ ಮಾಡುವುದೆಲ್ಲ ಅಂತಿಮವಾಗಿ ಮನುಷ್ಯಲೋಕದ ಒಳಿತಿಗಾಗಿಯೇ. ಭಗವಂತನಿಗಿಂತ ತಾನು ಹೆಚ್ಚು ಅನುಕಂಪವನ್ನು ಹೊಂದಿರುವೆ ಎಂದು ಯಾರೂ ಸಮರ್ಥಿಸಲಾರರು. ಭಗವಂತನ ಇಚ್ಛೆಯೇ ನೆರವೇರಲಿ.'' ಡಾ|| ಶಾಂತಿ ಸುಸೂತ್ರವಾಗಿ ಆ ಮಗುವಿನ ಹೆರಿಗೆ ಮಾಡಿದಳು. ಹೋಟೆಲಿನ ವ್ಯವಸ್ಥಾಪಕ ಆಕೆಗೆ ಒಂದಿಷ್ಟು ಹಣ ಕೊಡಬಂದಾಗಲೂ ಆಕೆ ಅದನ್ನು ನಿರಾಕರಿಸಿ ತನ್ನ ವಸತಿಗೆ ಹಿಂದಿರುಗಿ ಬಂದಳು.

ವರುಷಗಳು ಉರುಳಿದವು. ಆ ವೈದ್ಯೆ ನಿವೃತ್ತಿ ಹೊಂದಿ ತನ್ನ ಕುಟುಂಬದೊಡನೆ ದೆಹಲಿಯಲ್ಲಿ ನೆಲಸಿದ್ದಳು. ಒಂದು ದಿನ ಆಕೆಯ ಮೊಮ್ಮಗಳು, ತನ್ನನ್ನು ಮಿ. ರಾಬಿನ್ ಎಂಬುವನು ಪ್ರದರ್ಶಿಸುತ್ತಿರುವ ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗಬೇಕೆಂದೂ ಆತ ತನ್ನ ತಮಾಷೆ ಕಥೆಗಳು, ಅಣಕ ಮುಂತಾದವುಗಳಿಂದ ಸಭಿಕರನ್ನು ರಂಜಿಸುತ್ತಾನೆ ಎಂದೂ ಒತ್ತಾಯಿಸಿದಳು. ಮಿ. ರಾಬಿನ್ ಸುಮಾರು 25 ವರ್ಷದ ಪ್ರತಿಭಾವಂತ ಆಕರ್ಷಕ ತರುಣ. ಆತನಿಗೆ ಕಾಲುಗಳೇ ಇಲ್ಲದುದರಿಂದ ಗಾಲಿಕುರ್ಚಿಯಲ್ಲಿ ಅವನನ್ನು ವೇದಿಕೆಗೆ ತರಬೇಕಾಯಿತು. ಶ್ವೇತ ವಸ್ತ್ರಧಾರಿಣಿಯಾದ ಬಿಳಿ ಕೂದಲಿನ ವೃದ್ಧೆಯೊಬ್ಬಳು ಆತನ ಸಂಗಾತಿಯಾಗಿದ್ದಳು. ಕಾರ್ಯಕ್ರಮ ಅತ್ಯುತ್ತಮವಾಗಿ, ಸಭಿಕರ ಮನಸ್ಸನ್ನು ಸೆರೆಹಿಡಿಯಿತು. ಮಿ. ರಾಬಿನ್ ತನ್ನ ಪ್ರತಿಭೆಯಿಂದ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದವನಾಗಿದ್ದನು. ಹಲವು ತಿಂಗಳಿಂದ ದೆಹಲಿಯಲ್ಲಿ ಅವನ ಮಾತೇ ಮಾತು! ಖ್ಯಾತ ಚಲನಚಿತ್ರ ನಟರಾದ ಅಮಿತಾಭ್ ಬಚ್ಚನ್, ರಜನೀಕಾಂತ್ ಅವರಲ್ಲದೆ ಹಲವಾರು



ಮಂತ್ರಿಗಳನ್ನೂ ರಾಜಕಾರಣಿಗಳನ್ನೂ ಅನುಕರಿಸಿ ತೋರಿಸುತ್ತಾ ಮಿ. ರಾಬಿನ್ ರಂಜಿಸಿದನು. ಇಡೀ ಸಭೆಯಲ್ಲಿ ಚಪ್ಪಾಳೆಯ ಸುರಿಮಳೆ. ಆತನ ತಮಾಷೆಯ ಕಥೆಗಳನ್ನು ಕೇಳಿ ಮಕ್ಕಳು ಬಿದ್ದು ಬಿದ್ದು ನಕ್ಕರು. ಮೂರು ಗಂಟೆಗಳ ಮನರಂಜನೆಯಲ್ಲಿ ಹೊತ್ತು ಸರಿದುದೇ ಯಾರೊಬ್ಬರಿಗೂ ತಿಳಿಯಲಿಲ್ಲ. ಡಾ|| ಶಾಂತಿಯಂತೂ ತನ್ನ ಜೀವಮಾನದಲ್ಲಿಯೇ ಅಂತಹ ಮನರಂಜನೆಯನ್ನು ಕಂಡಿರಲಿಲ್ಲ.

ಡಾ|| ಶಾಂತಿ ಹೊರಗಡೆ ಹೋಗಿ ಒಂದು ಸುಂದರ ಪುಷ್ಪಗುಚ್ಛವನ್ನು ತಂದು ವೇದಿಕೆಯ ಪಕ್ಕದ ಕೋಣೆಗೆ ಹೋಗಿ, ಮಿ. ರಾಬಿನ್‌ಅನ್ನು ವೈಯಕ್ತಿಕವಾಗಿ ಅಭಿನಂದಿಸಲು ಧಾವಿಸಿದಳು. ಆಕೆ ಮಿ. ರಾಬಿನ್ ಕೂಡ ಮಾತನಾಡುತ್ತಿರುವಾಗಲೇ ಆತನ ಸಮೀಪದಿಂದ ವೃದ್ಧೆ ಬಂದು ಡಾ|| ಶಾಂತಿಯ ಪಾದಗಳಿಗೆ ನಮಸ್ಕರಿಸಿ, ಕಂಬನಿ ಸುರಿಸುತ್ತಾ ಗದ್ಗದ ಕಂಠದಿಂದ ನುಡಿದಳು. ''ಡಾಕ್ಟರಮ್ಮನವರೇ, ಈ ರಾಬಿನ್ ನನ್ನ ಮಗ. ನೀವೇ ಈ ಕೊಡುಗೆಯನ್ನು ನನಗೆ ನೀಡಿದವರು. ರೂರ್ಕಿಯಲ್ಲಿ ಇಪ್ಪತ್ತೈದು ವರ್ಷಗಳ ಹಿಂದಿನ ಆ ರಾತ್ರಿ ನಿಮಗೆ ನೆನಪಿಲ್ಲವೆ? ನೀವೇ ಅಲ್ಲವೇ ನನಗೆ ಹೆರಿಗೆ ಮಾಡಿ ಈ ಹುಡುಗನನ್ನು ಕೊಟ್ಟ ಮಹಾತಾಯಿ? ಅವನ ಬದುಕೆಲ್ಲ ನಿಮಗೆ ಋಣಿಯಾಗಿದೆ. ದಯಮಾಡಿ ಅವನನ್ನು ಆಶೀರ್ವದಿಸಿ.'' ಇದೀಗ ಶಾಂತಿಗೆ ಆ ರಾತ್ರಿಯ ನೆನಪು ಬಂದಿತು. ಅವಳು ವಿಸ್ಮಯ ಮೂಕಳಾದಳು. ಮನೆಗೆ ಹಿಂತಿರುಗಿದ ಮೇಲೆ, ತನ್ನ ಪೂಜೆಯ ಕೋಣೆಯಲ್ಲಿದ್ದ ಶ್ರೀರಾಮನ ಚಿತ್ರಕ್ಕೆ ನಮಸ್ಕರಿಸಿ, ''ಓ ಪ್ರಭು, ಆ ರಾತ್ರಿಯಲ್ಲಿ ನನ್ನ ಅಹಂಕಾರ ಹಾಗೂ ಅನುಕಂಪದ ಭ್ರಮೆಯಿಂದ ಈ ಮಗುವಿನ ಬದುಕನ್ನೇ ಹೊಸಕಿ ಹಾಕುತ್ತಿದ್ದುದರಿಂದ ನನ್ನನ್ನು ತಡೆದದ್ದು ನೀವೇ ಅಲ್ಲವೆ? ಅಂಥದೇ ಪಾತಕವನ್ನು ನಾನು ಮುಂದುವರೆಸಿದ್ದರೆ ಅದೆಷ್ಟು ಮಕ್ಕಳು ಈ ಕೆಲವು ಗಂಟೆಗಳ ಮನರಂಜನೆಯಿಂದ ವಂಚಿತರಾಗುತ್ತಿದ್ದರೋ, ಅದೆಷ್ಟು ವಯಸ್ಕರು ಈ ಪ್ರದರ್ಶನದಲ್ಲಿ ಮಗ್ನರಾಗಿ

ತಮ್ಮ ಪ್ರಾಪಂಚಿಕ ದುಃಖ ಸಂಕಟಗಳನ್ನು ಮರೆಯುವ ಸಂದರ್ಭಗಳಿಂದ ತಪ್ಪಿಸಿಕೊಳ್ಳುತ್ತಿದ್ದರೋ ತಿಳಿಯದು. ಓ ಪ್ರಭು ನಾನು ನಿಮಗೆ ಕೃತಜ್ಞಳಾಗಿದ್ದೇನೆ. ವಿವೇಕದಲ್ಲಿ ಸಮಸ್ತ ಮಾನವ ಲೋಕದ ಬಗೆಗೆ ನಿನ್ನ ಅನುಕಂಪ ಪ್ರೀತಿಯಲ್ಲಿ ಬೇರುಬಿಟ್ಟ ನಿನ್ನ ಸದಿಚ್ಛೆಗೆ ಮತ್ತೆ ಮತ್ತೆ ತಲೆಬಾಗುತ್ತೇನೆ.'' ಎಂದು ಭಾವಾವೇಶದಿಂದ ನುಡಿದಳು.

✤ ✤ ✤



## 2. ಕೃಷ್ಣ ಬಂದ – ಮನೆಗೇ !

ಬಂಗಾರಮ್ಮ ನೆಲ್ಲೂರು ಸಮೀಪದ ಒಂದು ಸಣ್ಣ ಹಳ್ಳಿಯಲ್ಲಿ ವಾಸವಿದ್ದ ಅನಕ್ಷರಸ್ಥ ಬಡ ಮಹಿಳೆ. ಕೇವಲ ಎಂಟನೇ ವರ್ಷದಲ್ಲಿ ವಿಧವೆಯಾದವಳು. ತನ್ನ ಎಪ್ಪತ್ತೈದು ವರ್ಷದ ಬದುಕಿನಲ್ಲಿ ಒಮ್ಮೆಯೂ ಮನೆಯಿಂದ ಹೊರಗೆ ಹೋದವಳೇ ಅಲ್ಲ. ಅವಳು ಕೃಷ್ಣ ಭಕ್ತೆ. ಪ್ರತಿನಿತ್ಯವೂ ತನ್ನ ಬಳಿಯಿದ್ದ ಪುಟ್ಟ ಸಾಲಿಗ್ರಾಮದ ಪೂಜೆ ಮಾಡುತ್ತಿದ್ದಳು. ಒಂದು ದಿನ ಪಕ್ಕದ ಮನೆಯಲ್ಲಿ ನಡೆಯುತ್ತಿದ್ದ ಭಜನೆಗೆ ಅವಳನ್ನು ಕರೆದರು. ಆ ಮನೆಯಲ್ಲಿ ಕೃಷ್ಣನ ಸುಂದರ ಚಿತ್ರವಿದ್ದ ಕ್ಯಾಲೆಂಡರನ್ನು ಅವಳು ಮೊದಲ ಬಾರಿಗೆ ನೋಡಿದಳು. ಆ ಚಿತ್ರದಿಂದ ಅವಳು ತುಂಬ ಮೋಹಿತಳಾದಳು. ಕೃಷ್ಣನ ಅಂಥದೇ ಚಿತ್ರವಿರುವ ಕ್ಯಾಲೆಂಡರ್ ಎಲ್ಲಿ ದೊರಕುತ್ತದೆ ಎಂದು ಪಕ್ಕದ ಮನೆಯವರನ್ನು ವಿಚಾರಿಸಿದಳು. ಆ ಹಳ್ಳಿಯಿಂದ 90 ಕಿ.ಮೀ. ದೂರದ ನೆಲ್ಲೂರಿನಲ್ಲಿ ಅದು ದೊರಕುತ್ತದೆ ಎಂದು ತಿಳಿದಳು. ಆ ವರೆಗೂ ಅವಳು ಬಸ್ಸು, ಟಾಕ್ಸಿಗಳಲ್ಲಿ ಪ್ರಯಾಣ ಮಾಡಿದವಳೇ ಅಲ್ಲ. ಅಂಥ ಪ್ರಯಾಣ ಕೈಗೊಳ್ಳಲೂ ಅವಳಿಗೆ ಭಯ. ಹೀಗಾಗಿ ತುಂಬ ಖಿನ್ನಳಾದಳು.

ಮನೆಗೆ ಹಿಂತಿರುಗಿದ ಮೇಲೂ ಅವಳು ಕ್ಯಾಲೆಂಡರಿನ ಕೃಷ್ಣನನ್ನೇ ಚಿಂತಿಸುತ್ತಿದ್ದಳು. ನೆಲ್ಲೂರಿಗೆ ಹೋಗಲಾರದ ತನ್ನ ಅಸಹಾಯಕತೆಗೆ ಗಟ್ಟಿಯಾಗಿ

ಅಳುತ್ತಿದ್ದಳು. ಅಂದು ರಾತ್ರಿಯೆಲ್ಲ ಹಾಗೂ ಮರುದಿನವೂ ಸಹ ಪ್ರಾರ್ಥಿಸುತ್ತಲೇ ಇದ್ದಳು: "ಓ ನನ್ನ ಕೃಷ್ಣಾ, ನಾನು ಓದು ಬರಹ ಏನೂ ತಿಳಿಯದ ಮೂರ್ಖ ಮುದಿ ಹೆಂಗಸು. ನಿನ್ನ ವಿಳಾಸವನ್ನು ಹೇಗೆ ಅರಿಯಲಿ? ಆದರೆ ನೀನು ತುಂಬ ಜಾಣ ಎಂದು ಪ್ರಸಿದ್ಧನಾಗಿದ್ದೀಯೆ. ನನ್ನ ವಿಳಾಸ ನಿನಗೆ ಗೊತ್ತು. ನನ್ನ ಬಳಿಗೇ ಏಕೆ ಬರಬಾರದು?" ಇದೇ ಅವಳ ಯಾಚನೆ. ಮರುದಿನ ಮಧ್ಯಾಹ್ನ ಒಬ್ಬ ಹುಡುಗ ಅವಳ ಮನೆಯ ಬಾಗಿಲು ತಟ್ಟಿದ. ಹಳೇ ಪೇಪರ್ ಮಾರಾಟಕ್ಕಿದೆಯಾ ಅಜ್ಜಿ? ಎಂದು ಕೇಳಿದ. ಬಂಗಾರಮ್ಮ ಬಾಗಿಲು ತೆರೆದು ನೋಡಿದಾಗ ಆ ಹುಡುಗನ ಬುಟ್ಟಿಯಲ್ಲಿ ಆರು ಕ್ಯಾಲೆಂಡರುಗಳಿದ್ದವು. ಮೊದಲನೆಯದೇ ಕೃಷ್ಣನ ಚಿತ್ರವಿದ್ದದ್ದು. ಅವಳ ಕೋರಿಕೆಯಂತೆ ಪ್ರಭು ಕೃಷ್ಣನ ಬಗೆ ಬಗೆಯ ಚಿತ್ರಗಳಿದ್ದ ಆರು ಕ್ಯಾಲೆಂಡರ್‌ಗಳನ್ನು ಆತ ತೋರಿಸಿದ. ಒಂದಕ್ಕಿಂತ ಒಂದು ಸುಂದರವಾಗಿತ್ತು. ಹುಡುಗ ಹೇಳಿದ: "ಪಕ್ಕದ ರಸ್ತೆಯ ಒಬ್ಬ ಹೆಂಗಸು, ತನಗೆ ಬೇಡದ ಈ ಹಳೆಯ ಕ್ಯಾಲೆಂಡರ್‌ಗಳನ್ನು ನನ್ನ ಬುಟ್ಟಿಗೆ ಸುರಿದಳು. ನನಗಂತೂ ಇವುಗಳಿಂದ ಪ್ರಯೋಜನ ಇಲ್ಲ. ನಿನಗೆ ಬೇಕಾಗಿದ್ದರೆ ಈ ಎಲ್ಲವನ್ನೂ ಮುಫತ್ತಾಗಿ ನಿನಗೆ ಕೊಟ್ಟುಬಿಡ್ತೀನಿ. ಬಂಗಾರಮ್ಮನಿಗೆ ತುಂಬಾ ಖುಷಿ ಆಯ್ತು. ಹುಡುಗನನ್ನು ಬಾಯ್ತುಂಬ ಹರಸಿದಳು. ಎಲ್ಲ ಕ್ಯಾಲೆಂಡರ್‌ಗಳನ್ನೂ ಮನೆಯ ಒಳಗೆ ತೆಗೆದುಕೊಂಡು ಹೋದಳು. ಕ್ಯಾಲೆಂಡರ್ ಕೃಷ್ಣನ ಎದುರು ಅತ್ತೇ ಅತ್ತಳು-"ಕೃಷ್ಣಾ ನಿನಗೆಷ್ಟು ಕರುಣೆ, ನೀನೆಷ್ಟು ಉದಾರಿ. ನನ್ನ ಪ್ರಾರ್ಥನೆಗೆ ಓಗೊಟ್ಟು, ನೀನೇ ನನ್ನ ಮನೆಗೆ ಬಂದೆಯಾ? ನಾನೆಂಥ ಭಾಗ್ಯವಂತೆ! ನಿನಗೆ ಜಯ ಜಯ!"

ತನ್ನ ಭಕ್ತರ ಪ್ರಾಮಾಣಿಕ ಪ್ರಾರ್ಥನೆಗೆ ಭಗವಂತನು ನಿಜಕ್ಕೂ ಓಗೊಡುತ್ತಾನೆ.

✤ ✤ ✤



# 3. ಪ್ರಾರ್ಥಿಸುವವನ ಪಗಾರ

ಅಹಮದಾಬಾದಿನ ಕಲೆಕ್ಟರ್ ಕಛೇರಿಯಲ್ಲಿ ಜಾನ್ ಒಬ್ಬ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ. ಇಪ್ಪತ್ತೈದು ವರ್ಷದ ಹಿಂದೆ ಮಾರ್ಥಾಳೊಡನೆ ಆತನ ವಿವಾಹವಾಗಿತ್ತು. ಅವರು ಆದರ್ಶ ದಂಪತಿ ಎನಿಸಿದ್ದರು. ತಮ್ಮ ವೈವಾಹಿಕ ಜೀವನದಲ್ಲಿ ಒಮ್ಮೆಯೂ ಜಗಳವಾಡಿದವರಲ್ಲ. ಪ್ರತಿ ಸಂಜೆ ಯಾವುದಾದರೂ ಪುಸ್ತಕ ಅಥವಾ ಪತ್ರಿಕೆಯೊಡನೆ ಜಾನ್ ಮನೆಗೆ ಬರುತ್ತಿದ್ದ. ಮಾರ್ಥಾ ಒಂದು ದೊಡ್ಡ ಕೆಟಲ್‌ನಲ್ಲಿ ಚಹಾ ತುಂಬಿಕೊಂಡು ಬರುತ್ತಿದ್ದಳು. ಬಟ್ಟಲು ಬಟ್ಟಲು ಚಹಾವನ್ನು ಸುರುವಿ ಕೊಡುತ್ತಿರುವಾಗ, ಜಾನ್ ಪುಸ್ತಕ ಅಥವಾ ಪತ್ರಿಕೆಯಿಂದ ಯಾವುದಾದರೂ ರೋಚಕ ಭಾಗವನ್ನು ಓದಿ ಹೇಳುತ್ತಿದ್ದ. ಎರಡು ಗಂಟೆಗಳ ಕಾಲ ಈ ಕಾರ್ಯಕ್ರಮ. ಒಂದು ದಿನ ಚಹಾ ಪಾನವಾದ ನಂತರ ಜಾನ್ ಸಹಜವಾಗಿ ಮಾರ್ಥಾಳನ್ನು ಕುರಿತು ಹೇಳಿದ: "ಮಾರ್ಥಾ, ಈ ವಿಷಯ ತಿಳಿಸಲು ನನಗೆ ವಿಷಾದವೆನಿಸುತ್ತದೆ. ಈ ಬದುಕು ನನಗೆ ಬೇಸರ ಹಿಡಿಸಿದೆ. ಸ್ವತಂತ್ರವಾಗಿ ಇದ್ದು ಬಿಡೋಣ ಎನಿಸಿದೆ. ನಿನಗೆ ಡೈವೋರ್ಸ್ ಕೊಟ್ಟುಬಿಡಲು ನಿರ್ಧರಿಸಿದ್ದೇನೆ. ನಿನ್ನ ಆಕ್ಷೇಪಣೆ ಇಲ್ಲ ಎಂದುಕೊಂಡಿದ್ದೇನೆ." ತೀರ ಅನಿರೀಕ್ಷಿತವಾಗಿ ಸಿಡಿಲಿನಂತೆ ಬಡಿದ ಈ ಸೂಚನೆಯನ್ನು ಕೇಳಿದ ಮಾರ್ಥಾ ಉತ್ತರಿಸಲಾರದೆ ಮೌನವಾಗಿಬಿಟ್ಟಳು.

ಅನಂತರ ಹೇಗೋ ಸುಧಾರಿಸಿಕೊಂಡು-''ಜಾನ್, ನಿಮ್ಮ ಯಾವುದೇ ತೀರ್ಮಾನವನ್ನು ಈವರೆಗೆ ನಾನು ಪ್ರಶ್ನಿಸಿಲ್ಲ ಎಂಬುದು ನಿಮಗೆ ತಿಳಿದೇ ಇದೆ. ಆದರೆ ಇದು ನನಗೆ ಅಚ್ಚರಿ ಉಂಟುಮಾಡಿದೆ. ಇಪ್ಪತ್ತೈದು ವರ್ಷಕ್ಕೂ ಹೆಚ್ಚು ಕಾಲ ನಾವು ವಿವಾಹ ಬಂಧನದಲ್ಲಿ ಒಟ್ಟಾಗಿ ಬಾಳುತ್ತಿದ್ದೇವೆ. ಈ ಕಾರಣದಿಂದಲಾದರೂ ನನಗೆ ಇನ್ನು ಹದಿನೈದು ದಿವಸ ಕಾಲಾವಕಾಶ ನೀಡಿ. ನಿಮ್ಮ ಅಪೇಕ್ಷೆಗೆ ನಾನು ಅಡ್ಡಿ ಬರುವುದಿಲ್ಲ ಎಂದು ಭರವಸೆ ಕೊಡುತ್ತೇನೆ'' ಎಂದಳು. ಜಾನ್ ತಕ್ಷಣ ಒಪ್ಪಿಕೊಂಡ.

ಸಂಪೂರ್ಣವಾಗಿ ಅಸಹಾಯಕಳಾದ ಮಾರ್ಥಾ ಇಡೀ ರಾತ್ರಿಯನ್ನು ಭಗವಂತನ ಪ್ರಾರ್ಥನೆಯಲ್ಲಿ ಕಳೆದಳು. ಕಳೆದ ಎರಡು ತಿಂಗಳಿಂದ ತನ್ನ ಗಂಡ ರಾತ್ರಿ ತೀರ ತಡವಾಗಿ ಮನೆಗೆ ಬರುತ್ತಿರುವುದೂ, ಮಲಗಲು ಪ್ರತ್ಯೇಕ ಕೋಣೆಗೇ ಹೋಗುತ್ತಿರುವುದೂ ಅವಳ ಗಮನಕ್ಕೆ ಬಂದಿತು. ಹಿಂದಿನಂತೆ ಚಹಾ ಕಾರ್ಯಕ್ರಮಗಳೂ ನಿಂತುಹೋಗಿದ್ದವು. ಆಫೀಸಿನಲ್ಲಿ ವಿಪರೀತ ಕೆಲಸವಿದ್ದೀತು, ಅದಕ್ಕೆಂದೇ ಹೀಗೆ ತಡವಾಗಿ ಬರುತ್ತಿದ್ದಾರೆ ಎಂದು ಅವಳು ಭಾವಿಸಿಬಿಟ್ಟಿದ್ದಳು. ತನ್ನ ಹಾಗೂ ಜಾನ್ ನಡುವೆ ವಿಸ್ತರಿಸುತ್ತಿರುವ ಕಂದರದ ಬಗ್ಗೆ ಅವಳು ಕೇವಲ ಕುರುಡಾಗಿಬಿಟ್ಟಿದ್ದಳು. ತನಗೆ ನೆರವಾಗಿ ಮಾರ್ಗದರ್ಶನ ನೀಡುವಂತೆ, ಮರುದಿನವೂ ಅವಳು ಭಗವಂತನನ್ನು ಪ್ರಾರ್ಥಿಸಿದಳು.

ತನ್ನ ಗುರಿಯನ್ನು ಸಾಧಿಸಲು ಅನುಸರಿಸಬೇಕಾದ ದರ್ಶನ ತಂತ್ರವನ್ನು ತನ್ನ ಗುರು ಉಪದೇಶಿಸಿದ್ದುದು ಅವಳಿಗೆ ನೆನಪಾಯಿತು. ಅವರು ಹೇಳಿದ್ದರು: ''ನೀನು ಲಕ್ಷಾಧಿಪತಿಯಾಗಲು ಬಯಸಿದರೆ, ನೀನು ಈಗಾಗಲೇ ಹಾಗೆ ಆಗಿಬಿಟ್ಟಿದ್ದೇನೆ ಎಂದು ಕಲ್ಪಿಸಿಕೋ. ಆಳೆತ್ತರದ ಕನ್ನಡಿ ಮುಂದೆ ನಿಂತುಕೊಂಡು ಒಂದು ನೂರುಬಾರಿ ದೃಢವಾಗಿ 'ನಾನು ಈಗ ಲಕ್ಷಾಧಿಪತಿ' ಎಂದು ಹೇಳಿಕೋ. ಒಂದು ವೈಭವದ ಆಫೀಸು ಕೋಣೆಯಲ್ಲಿ ಕುಳಿತಿದ್ದೇನೆ. ನನ್ನೆದುರಿಗೆ ಮೂರು



ನಾಲ್ಕು ಫೋನ್‌ಗಳಿವೆ. ಹಲವಾರು ಲಕ್ಷ ಷೇರ್‌ಗಳನ್ನು ಕೊಳ್ಳುವ-ಮಾರುವ ಬಗೆಗೆ ದಳ್ಳಾಳಿಗಳೊಡನೆ ಮಾತನಾಡುತ್ತಿದ್ದೇವೆ ಎಂದು ಕಲ್ಪಿಸಿಕೋ. ಪ್ರತಿದಿನ ಹೀಗೆ ಮಾಡು!''

ಸಂಜೆ 5.30 ಗಂಟೆಯಾಗಿತ್ತು. ಹಿಂದಿನ ದಿನಗಳಂತೆಯೇ ದೊಡ್ಡ ಕೆಟಲ್ ತುಂಬ ಚಹಾ, ಎರಡು ಟೀ ಕಪ್‌ಗಳನ್ನು ತಂದಳು. ಚಹಾವನ್ನು ಬಟ್ಟಲುಗಳಲ್ಲಿ ಸುರುವಿದಳು. ಜಾನ್ ಯಾವುದೋ ಪುಸ್ತಕವನ್ನು ಗಟ್ಟಿಯಾಗಿ ಓದುತ್ತಿದ್ದಾನೆ, ತಾನು ಆ ಬಗ್ಗೆ ಟೀಕೆ ಇಲ್ಲವೇ ಪ್ರಶಂಸೆ ಮಾಡುತ್ತಿದ್ದೇನೆ ಎಂದು ಕಲ್ಪಿಸಿಕೊಂಡಳು. ಎರಡು ಗಂಟೆ ಪೂರ್ತಾ ಅವಳು ಹೀಗೆಯೇ ಮಾಡಿದಳು. ಪ್ರತಿ ಸಂಜೆ ಈ ಕಾರ್ಯಕ್ರಮದ ಪುನಶ್ಚರಣೆಯಾಯಿತು. ಹಗಲೆಲ್ಲ ಭಗವಂತನೆದುರು ಪ್ರಾರ್ಥಿಸುತ್ತಿದ್ದಳು. ಹತ್ತು ದಿನಗಳು ಹೀಗೆಯೇ ಕಳೆದವು. ಇಂದು ಹನ್ನೊಂದನೆಯ ದಿನ. ಸಂಜೆ 5.30. ಚಹಾ ಕೆಟಲ್ ಹಾಗೂ ಬಟ್ಟಲುಗಳನ್ನು ಚಹಾ ಮೇಜಿನ ಬಳಿ ತಂದಳು. ಅವಳ ಅಚ್ಚರಿ ಹಾಗೂ ಸಂತಸಕ್ಕೆ ಮೇರೆಯೇ ಇರಲಿಲ್ಲ. ಜಾನ್ ಹಿಂದಿನಂತೆಯೇ ತನ್ನ ಕುರ್ಚಿಯಲ್ಲಿ ಕುಳಿತು ಪತ್ರಿಕೆಯ ಮೇಲೆ ಕಣ್ಣಾಡಿಸುತ್ತಿದ್ದಾನೆ! ಆಕೆಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಚಹಾ ಹೀರುತ್ತಿರುವಾಗ ಜಾನ್ ಹಿಂದಿನಂತೆಯೇ ಗಟ್ಟಿಯಾಗಿ ಪತ್ರಿಕೆಯ ಯಾವುದೋ ರೋಚಕ ಭಾಗವನ್ನು ಓದತೊಡಗಿದ. ಪ್ರತಿದಿನ ಸಂಜೆ ಸಕಾಲಕ್ಕೆ ಮನೆಗೆ ಬರತೊಡಗಿದ. ಬದುಕು ಮೊದಲಿನಂತೆಯೇ ಸಂತಸದಿಂದ ಸರಿಯತೊಡಗಿತು. ಹದಿನೈದು ದಿನಗಳು ಹೀಗೆ ಕಳೆದ ನಂತರ, ಮಾರ್ಥಾ ತನ್ನೆಲ್ಲ ಧೈರ್ಯವನ್ನು ಒಟ್ಟುಗೂಡಿಸಿಕೊಂಡು, ಚಹಾ ವೇಳೆಯಲ್ಲಿ, ''ಜಾನ್, ಇವತ್ತು ನೀನು ನನ್ನನ್ನು ಏನೋ ಪ್ರಶ್ನೆ ಕೇಳಬೇಕೆಂದಿದ್ದ ಅಲ್ಲವೇ? ಕೇಳಬಹುದಲ್ಲಾ!'' ಎಂದಳು. ಜಾನ್ ನಿರುತ್ತರನಾಗಿದ್ದು ನಂತರ ಹೇಳಿದ: ''ಒಗಟಿನ ಮಾತು ಸಾಕು ಮಾರ್ಥಾ. ನನಗೇನೂ ನೆನಪಿಲ್ಲ, ನಾನು ಏನು ಪ್ರಶ್ನೆ

ಕೇಳಬೇಕಿತ್ತು ಎಂದು ನೀನೇ ಹೇಳಿಬಿಡು.'' ತನ್ನ ಒಳಒಳಗೇ ಭಗವಂತನನ್ನು ಪ್ರಾರ್ಥಿಸುತ್ತಾ ಮಾರ್ಥಾ ಸಾವಧಾನವಾಗಿ ಹೀಗೆಂದಳು: ''ಅವತ್ತು ನೀವು ನನ್ನಿಂದ ಡೈವೋರ್ಸ್ ಬಯಸುವುದಾಗಿ ಹೇಳಿದ್ದಿರಿ ಅಲ್ಲವೆ? ಹದಿನೈದು ದಿನ ಕಾಲಾವಕಾಶವನ್ನು ನಾನು ಬೇಡಿದ್ದೆ. ಇದೀಗ ನೀವು ಆ ಕೋರಿಕೆಯನ್ನು ಮತ್ತೆ ಮಾಡಬಹುದಲ್ಲ!''

''ಓ ಮಾರ್ಥಾ, ನಾನು ಮರೆತೇಬಿಟ್ಟಿದ್ದೆ. ಅದೊಂದು ಆಕಸ್ಮಿಕವಾಗಿ ಬಂದ ಆಲೋಚನೆ ಅಷ್ಟೇ. ಮನಸ್ಸಿನ ತಾತ್ಕಾಲಿಕ ಹೊಯ್ದಾಟ ಎಂದುಕೋ. ಅಂಥ ಆಲೋಚನೆ ಅದು ಹೇಗೆ ನನ್ನ ಮನಸ್ಸಿನಲ್ಲಿ ಹಾದುಹೋಯಿತೋ ಏನೋ!'' ಕಂಬನಿ ತುಂಬಿದ ಕಣ್ಣುಗಳಿಂದ ಮಾರ್ಥಾ ತನ್ನ ಪೂಜಾ ಕೊಠಡಿಗೆ ಓಡಿದಳು. ನೆಲದ ಮೇಲೆ ಉರುಳಿ ಮತ್ತೆ ಮತ್ತೆ ಭಗವಂತನಿಗೆ ನಮಸ್ಕರಿಸತೊಡಗಿದಳು.

ತೀರ ಅಸಾಧ್ಯವೆನಿಸಿದ ಸಂದರ್ಭಗಳಲ್ಲೂ, ಅಸಹಾಯಕರಾಗಿ ನಾವು ಭಗವಂತನಿಗೆ ಶರಣಾದರೆ, ಆತನು ನಮ್ಮ ಕೈ ಬಿಡುವುದಿಲ್ಲ. ಅವನೊಬ್ಬನೇ ನಮ್ಮ ಸುರಕ್ಷಿತ ಹಾಗೂ ಪೂರ್ಣ ನಂಬಿಕೆಯ ಆಶ್ರಯ.

✤ ✤ ✤



# 4. ಒಂದು ನ್ಯಾಯವಾದ ತೀರ್ಪು

ಬೋಧಿಧರ್ಮನು ಚೈನಾದೇಶಕ್ಕೆ ಹೋದ ಪ್ರಥಮ ಬೌದ್ಧ ಸಂನ್ಯಾಸಿ. ಚೈನಾದ ಬಹು ದೊಡ್ಡ ರಾಜ್ಯವೊಂದರ ದೊರೆ 'ವು' ಎಂಬುವನ ಗೌರವಾನ್ವಿತ ಅತಿಥಿಯಾಗಿದ್ದ ಬೋಧಿಧರ್ಮ. ಆತನ ಪಾಂಡಿತ್ಯ, ಪ್ರತಿಯೊಂದು ಸಂದರ್ಭದಲ್ಲಿಯೂ ಅತ್ಯಂತ ಸಮರ್ಪಕವಾದ ತೀರ್ಪುಗಳನ್ನೇ ನೀಡುತ್ತಿದ್ದ ಅವನ ವಿವೇಕವನ್ನು ಕಂಡು ದೊರೆ 'ವು' ಆಶ್ಚರ್ಯಚಕಿತನಾಗಿದ್ದ. ಆತನನ್ನು ತನ್ನ ರಾಜ್ಯದ ನ್ಯಾಯಾಧೀಶನನ್ನಾಗಿ ನೇಮಕ ಮಾಡಲು ಬಯಸಿದ. ಆದರೆ ತಾನು ಯಾವುದೇ ಉದ್ಯೋಗವನ್ನರಸಿ ಚೈನಾಗೆ ಬರಲಿಲ್ಲವೆಂದೂ, ಬುದ್ಧನ ಪವಿತ್ರ ಬೋಧನೆಗಳನ್ನು ಪ್ರಚುರಪಡಿಸುವುದಷ್ಟೇ ತನ್ನ ಉದ್ದೇಶವಾಗಿದೆ ಎಂದೂ ಬೋಧಿಧರ್ಮನು ರಾಜನಿಗೆ ನೆನಪಿಸಿದ. ಆದರೆ ಅವನ ಸೂಚನೆಗೆ ದೊರೆ ಸಮ್ಮತಿಸಲಿಲ್ಲ. ಬೋಧಿಧರ್ಮನಿಗೆ ವು ದೊರೆಯ ಒತ್ತಾಯವನ್ನು ಒಪ್ಪದೇ ಬೇರೆ ದಾರಿ ಇರಲಿಲ್ಲ.

ಮೊದಲ ದಿನವೇ, ಪೊಲೀಸರು ಒಬ್ಬ ಕಳ್ಳನನ್ನು ಅವನ ಶ್ರೀಮಂತನೊಬ್ಬನ ಮನೆಯಲ್ಲಿ ಕೆಲವು ಬೆಳ್ಳಿ ಪಾತ್ರೆಗಳನ್ನು ಕಳವು ಮಾಡುತ್ತಿರುವಾಗಲೇ ಹಿಡಿದು, ಬೋಧಿಧರ್ಮನ ಸಮ್ಮುಖಕ್ಕೆ ಕರೆತಂದರು. ಪೊಲೀಸರೊಡನೆ ಆ ಶ್ರೀಮಂತನೂ ಬಂದಿದ್ದ. ಕಳವಿನ ಪ್ರಯತ್ನವನ್ನು ಸುದೀರ್ಘವಾಗಿ ವಿವರಿಸಿ, ಪೊಲೀಸರು,

ಬೋಧಿಧರ್ಮನ ತೀರ್ಪನ್ನು ನಿರೀಕ್ಷಿಸಿದರು. ಕೆಲವು ಮಾಮೂಲಿ ಪ್ರಶ್ನೆಗಳನ್ನು ಕೇಳಿದ ನಂತರ, ಬೋಧಿ ಧರ್ಮನು ಕಳ್ಳನಿಗೆ ಒಂದು ವರ್ಷದ ಸೆರೆಮನೆಯ ಶಿಕ್ಷೆಯನ್ನೂ ಹಾಗೆಯೇ ಆ ಶ್ರೀಮಂತನಿಗೂ ಅದೇ ಶಿಕ್ಷೆಯನ್ನೂ ವಿಧಿಸಿ ತೀರ್ಪು ನೀಡಿದ. ಅಂಥ ತೀರ್ಪು ನೀಡಿದ ನಿದರ್ಶನ ಈ ಹಿಂದೆ ಯಾವಾಗಲೂ ಇರಲಿಲ್ಲ. ಪೊಲೀಸರು ಹಾಗೂ ಶ್ರೀಮಂತ ಮತ್ತೊಮ್ಮೆ ಕಳ್ಳತನದ ವಿವರಗಳನ್ನು ತಿಳಿಸಿ ಹೇಳಿದರು: ''ಮಹಾಸ್ವಾಮಿ, ತಾವು ಸಂದರ್ಭವನ್ನು ಸರಿಯಾಗಿ ಅರ್ಥಮಾಡಿಕೊಂಡಂತೆ ಕಾಣಲಿಲ್ಲ. ಈ ಕಳ್ಳನೇ ಕದಿಯುವಾಗ ಸಿಕ್ಕಿಬಿದ್ದವನು. ಈ ಶ್ರೀಮಂತರು ಕೇವಲ ಮುಗ್ಧರು. ಅವರ ಮನೆಗೇ ಕಳ್ಳನು ಕನ್ನಹಾಕಿದ್ದು.'' ಬೋಧಿಧರ್ಮನು ಮಂದಹಾಸವನ್ನು ಬೀರಿ ಡಿಕ್ರಿಯನ್ನು ನೀಡಿದರು. ''ನನಗೆ ಈ ಅಪರಾಧ ಚೆನ್ನಾಗಿಯೇ ಅರ್ಥವಾಗಿದೆ. ನನ್ನ ತೀರ್ಪು ಸರಿಯಾಗಿಯೇ ಇದೆ. ಅದೇ ಜಾರಿಗೆ ಬರತಕ್ಕದ್ದು.'' ಮೇಲುನೋಟಕ್ಕೆ ಅಸಂಬದ್ಧವೆಂದು ತೋರುವ ಈ ತೀರ್ಪನ್ನು ಕೇಳುತ್ತಿದ್ದಂತೆ ಶ್ರೀಮಂತನು ನಡುಗತೊಡಗಿದ. ತನ್ನ ಮಿತ್ರನೇ ಆಗಿದ್ದ ದೊರೆಗೆ ಹೇಳಿಕಳುಹಿಸಿದ. ಮಹಾರಾಜನೇ ಸ್ವತಃ ಬೋಧಿ ಧರ್ಮನ ಬಳಿಗೆ ಬಂದು ಅಪರಾಧದ ವಿವರವನ್ನು ನೀಡಿದ. ಬೋಧಿಧರ್ಮ ರಾಜನ ಮಾತನ್ನು ವಿರೋಧಿಸಿ ನುಡಿದ: ''ಮಹಾಪ್ರಭು, ನಾನು ಸಂದರ್ಭವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆ ಎಂದು ಭರವಸೆ ಕೊಡಬಲ್ಲೆ. ಕಳ್ಳನಿಗೆ ಶಿಕ್ಷೆಯಾಗಬೇಕು ಎಂಬುದನ್ನು ಪೂರ್ಣವಾಗಿ ಒಪ್ಪುತ್ತೇನೆ. ಆದರೆ ಈ ಕಳ್ಳತನದಲ್ಲಿ ಶ್ರೀಮಂತರ ಜವಾಬ್ದಾರಿಯೂ ಇದೆ. ಆತ ಅತ್ಯಂತ ವೈಭವದಿಂದ ಜೀವನ ನಡೆಸುತ್ತಿದ್ದರು. ಭಾರೀ ಸಂಪತ್ತು ಶೇಖರಿಸಿ ಉಳಿದವರಿಗೆ ಅದರ ವಿನಿಯೋಗವನ್ನು ತಪ್ಪಿಸಿದರು. ಅಲ್ಲದೆ ಈ ಕಳ್ಳನಲ್ಲಿ ಮನೆಗೆ ಕನ್ನಹಾಕಲು ಪ್ರಚೋದನೆ ನೀಡಿದರು. ನನ್ನ ತೀರ್ಪು ನ್ಯಾಯವಾಗಿಯೇ ಇದೆ. ಅದಕ್ಕೆ ಶಾಸ್ತ್ರಗಳ ಆಧಾರವೂ ಇದೆ.'' ರಾಜನು ಹೌಹಾರಿದನು. ಉತ್ತರ ನೀಡಲು ಅಸಮರ್ಥನಾದನು. ಸಂನ್ಯಾಸಿಯನ್ನು ಕುರಿತು – ''ಈ ಕ್ಷಣದಿಂದಲೇ



ನ್ಯಾಯಾಧೀಶನ ಹುದ್ದೆಯಿಂದ ತಮ್ಮನ್ನು ಬಿಡುಗಡೆ ಮಾಡಿದ್ದೇನೆ. ತಾವು ನನ್ನ ರಾಜ್ಯದಲ್ಲೆಲ್ಲ ಸಂಚರಿಸುತ್ತಾ ಧರ್ಮ ಪ್ರಚಾರ ಮಾಡಲು ಸ್ವತಂತ್ರರಿದ್ದೀರಿ!''

ಒಬ್ಬನು ತನ್ನ ಜೀವನೋಪಾಯಕ್ಕೆ ಬೇಕಾದಷ್ಟನ್ನು ಮಾತ್ರ ಸಂಗ್ರಹಿಸಬಹುದು. ಅದಕ್ಕಿಂತ ಹೆಚ್ಚು ಸಂಪತ್ತು ಶೇಖರಿಸುವವನೂ ಕಳ್ಳನೇ. ಅವನು ನಿಜಕ್ಕೂ ಶಿಕ್ಷಿಸಲ್ಪಡಲೇಬೇಕು.[1]

✤ ✤ ✤

1. ಯಾವದ್ ಭ್ರಿಯೇತ ಜಠರಂ ತಾವತ್ ಸ್ವತ್ವಂ ಹಿ ದೇಹಿನಾಮ್ ।
ಅಧಿಕಂಯೋಽಭಿಮನ್ಯೇತ ಸ ಸ್ತೇನೋ ದಂಡಮರ್ಹತಿ ॥

**(ಭಾಗವತಮ್ VII-14-8)**

# 5. ಅನಿರೀಕ್ಷಿತ ಸಹಾಯಧನ

ಅಂತಾರಾಷ್ಟ್ರೀಯ ಖ್ಯಾತಿಯ ಒಬ್ಬ ಸಂನ್ಯಾಸಿಯು ಋಷೀಕೇಶದಲ್ಲಿ ಒಂದು ಸಾಕಷ್ಟು ದೊಡ್ಡ ಆಶ್ರಮವನ್ನು ಹೊಂದಿದ್ದರು. ಹಲವಾರು ವರ್ಷಗಳು ನಿರಂತರ ಸಾಧನೆ ಮಾಡಿದ ಮಹಾನ್ ಸಂತರು ಆತ. ಹಲವಾರು ಭಾಷೆಗಳಲ್ಲಿ ಸಮೃದ್ಧವಾದ ಅಧ್ಯಾತ್ಮ ಗ್ರಂಥಗಳನ್ನು ಅವರು ರಚಿಸಿದ್ದರು. ಒಂದು ದಿನ ಅವರ ಆಪ್ತಕಾರ್ಯದರ್ಶಿಯು ಗುರುದೇವರೊಡನೆ ತುರ್ತಾದ ಸಂದರ್ಶನವನ್ನು ಬಯಸಿದನು. ''ಸ್ವಾಮೀಜಿ, ನಾವು ತೀರಿಸಬೇಕಾದ ಸಾಲ ಬಹಳವಾಗಿದೆ. ಸಾಲ ಹಿಂತಿರುಗಿಸುವಂತೆ ಅವರೆಲ್ಲ ಆಫೀಸಿಗೆ ಬಂದು ತುಂಬ ಕೆಟ್ಟದಾಗಿ ಕಿರಿಚಾಡುತ್ತಾರೆ. ಅಂಗಡಿಯವನಿಗೆ ಇಪ್ಪತ್ತು ಸಾವಿರ, ಮುದ್ರಕರಿಗೆ ಇಪ್ಪತ್ತು ಸಾವಿರ, ಸ್ಟೇಷನರಿ ಅಂಗಡಿಯವನಿಗೆ ಮೂವತ್ತು ಸಾವಿರ ಹೀಗೆಲ್ಲ ನಮ್ಮ ಸಾಲ ಬೆಳೆದು ನಮ್ಮ ಗೌರವ ಹಾಳಾಗಿಬಿಟ್ಟಿದೆ. ನಮಗೆ ಬರುವ ಸಹಾಯಧನ ತೀರಾ ಕಡಿಮೆ. ಕೂಡಲೆ ಏನಾದರೂ ಮಾಡಬೇಕಾಗಿದೆ'' ಎಂದು ಬಿನ್ನವಿಸಿದನು. ಗುರುದೇವರು ಉತ್ತರಿಸಿದರು: ''ಈ ಸಂದರ್ಭವನ್ನು ನಿಭಾಯಿಸಲು ಖಂಡಿತವಾಗಿಯೂ ನಿಮ್ಮದೇ ಯಾವುದೋ ಯೋಜನೆ ಇರುವಂತೆ ಕಾಣುತ್ತಿದೆ'' ಆತ ಪೆಚ್ಚು ಮುಖ ಹಾಕಿಕೊಂಡು, ''ಸ್ವಾಮೀಜಿ, ನಮ್ಮ ಆಶ್ರಮದಲ್ಲಿ ಸುಮಾರು ಒಂದುನೂರು ಸಂನ್ಯಾಸಿಗಳೂ ಬ್ರಹ್ಮಚಾರಿಗಳೂ



ಇದ್ದಾರೆ. ನಮ್ಮ ಸೀಮಿತ ಆದಾಯಕ್ಕೆ ಈ ಜನ ದೊಡ್ಡ ಹೊರೆಯೇ ಆಗಿದ್ದಾರೆ. ಯಾವ ಸಂಪಾದನೆಯೂ ಇಲ್ಲದ ಅವರಿಂದ ನಮ್ಮ ಆಶ್ರಮಕ್ಕೆ ಮೂರು ಕಾಸಿನ ಪ್ರಯೋಜನವಿಲ್ಲ. ನನಗೆನ್ನಿಸುವುದೆಂದರೆ ಅವರಲ್ಲಿ ಕೆಲವು ಕಿರಿಯರನ್ನು ಇಲ್ಲಿಂದ ಹೊರಹಾಕಬೇಕು, ಅದರಿಂದ ನಮ್ಮ ಹೊರೆ ಸ್ವಲ್ಪವಾದರೂ ಕಡಿಮೆಯಾದೀತು.''

ಗುರುದೇವ್ : ''ನಿನ್ನ ಅದ್ಭುತ ಯೋಚನೆಯನ್ನು ಮೆಚ್ಚಿದೆ. ನೀನು ಸಂನ್ಯಾಸಿಯಾಗುವ ಮೊದಲು ಯಾವುದೋ ಸರ್ಕಾರೀ ಅಧಿಕಾರಿಯಾಗಿದ್ದಿರಬೇಕು! ನಾವು ಹೊರಗೆ ಕಳುಹಿಸುವ ಈ ಸಂನ್ಯಾಸಿಗಳು ಎಲ್ಲಿ ಆಶ್ರಯ ಪಡೆಯಬೇಕು ಹೇಳು.''

ಸ್ವಾಮಿ : ''ಪೂಜ್ಯರೆ, ತಮ್ಮ ಮನೆ ಮಠ ತೊರೆದು ಇವರು ಹೊರಟಾಗ ಭಗವಂತನನ್ನೇ ಅವಲಂಬಿಸಿದ್ದರು. ಅವರ ಜೀವನದ ಅಂತ್ಯದವರೆಗೂ ಯಾವುದೋ ಆಶ್ರಮ ಅವರನ್ನು ನೋಡಿಕೊಳ್ಳುತ್ತದೆ ಎಂಬ ಭರವಸೆಯನ್ನೇನೂ ಯಾರೂ ಕೊಟ್ಟಿರಲಿಲ್ಲ. ಋಷೀಕೇಶದಲ್ಲಿ-ಹರಿದ್ವಾರದಲ್ಲಿ ಅದೆಷ್ಟೋ ಆಶ್ರಮಗಳಿವೆ. ಬ್ರಹ್ಮಚಾರಿಗಳು ಅಲ್ಲೆಲ್ಲಾದರೂ ಆಶ್ರಯ ಪಡೆಯಬಹುದು. ಹಾಗಲ್ಲದಿದ್ದರೂ ಅವರಿಗೆ ಊಟ ನೀಡುವಂತಹ ಅನ್ನಕ್ಷೇತ್ರಗಳಂತೂ ಇವೆ. ಈ ವಿಪತ್ತಿನಿಂದ ನಮ್ಮನ್ನು ಪಾರು ಮಾಡುವಂತೆ ಪ್ರತಿನಿತ್ಯವೂ ದೇವರಲ್ಲಿ ಪ್ರಾರ್ಥಿಸುತ್ತಿದ್ದೇನೆ. ಯಾವ ಪರಿಹಾರವೂ ದೊರಕಿಲ್ಲ. ತೀರ ಹತಾಶನಾಗಿ ನನ್ನ ಈ ಸಮಸ್ಯೆ ಹೊತ್ತು ಗುರುದೇವರ ಬಳಿ ಬಂದಿದ್ದೇನೆ.''

ದೀರ್ಘವಾಗಿ ನಿಟ್ಟುಸಿರಿಟ್ಟು ಗುರುದೇವ್ ಹೇಳಿದರು: ''ಈ ಆಶ್ರಮ ನನ್ನ ಖುಷಿಗೆ-ಇಚ್ಛೆಗೆ ಅನುಗುಣವಾಗಿ ನಡೆಯುವಂತಹುದಲ್ಲ. ನಮ್ಮೆಲ್ಲರ ಪ್ರಾರಬ್ಧಕ್ಕೆ ತಕ್ಕಂತೆ ಅದು ನಡೆಯುತ್ತಿದೆ. ಇಲ್ಲಿ ಎಲ್ಲರೂ ಆಶ್ರಮದ ಅವಿಭಾಜ್ಯ

ಅಂಗವೇ ಆಗಿದ್ದಾರೆ. ನಾವು ಮಾಡುತ್ತಿರುವುದು ದೇವರ ಕೆಲಸ. ಆಶ್ರಮದ ಅದೃಷ್ಟವನ್ನು ಆತನೇ ನಿಯಂತ್ರಿಸುತ್ತಾನೆ. ಇದೇನೂ ಪ್ರೈವೇಟ್ ಲಿಮಿಟೆಡ್ ಕಂಪೆನಿ ಅಲ್ಲ. ಇದೊಂದು ಪಬ್ಲಿಕ್ ಅನ್‌ಲಿಮಿಟೆಡ್ ಕಂಪೆನಿ! ನೆನಪಿರಲಿ, ನೀನು ಗಂಟೆ ಬಾರಿಸುತ್ತಿದ್ದಂತೆ ಓಡಿ ಬರುವ ಹುಡುಗ ಅಥವಾ ಸೇವಕನಲ್ಲ ಈ ಭಗವಂತ! ಪ್ರಾರ್ಥನೆಗೆ ತನ್ನದೇ ಕಾಲದಲ್ಲಿ ಖಂಡಿತವಾಗಿ ಓಗೊಡುವ ಯಜಮಾನ ಆತ. ನಿನ್ನ ಪ್ರಾರ್ಥನೆಯನ್ನು ಮುಂದುವರೆಸು. ಇನ್ನೂ ಆರು ತಿಂಗಳು ಕಾದು ನೋಡೋಣ. ಯಾವ ಪರಿಹಾರವೂ ದೊರೆಯದೆ ಇದ್ದರೆ, ಪರಿಸ್ಥಿತಿ ಮತ್ತಷ್ಟು ಕೆಟ್ಟರೆ, ಆಶ್ರಮವನ್ನು ಮುಚ್ಚಿ ಬಿಡೋಣ. ಆಗ ನಾವೆಲ್ಲ ನಮ್ಮ ಕಮಂಡಲು ಹಿಡಿದು ಬೇರೆ ಆಶ್ರಮಕ್ಕೋ ಅನ್ನ ಕ್ಷೇತ್ರಕ್ಕೋ ಹೋಗೋಣವಂತೆ. ಅಲ್ಲಿ ನಮಗೆ ಬಿಟ್ಟಿ ಭಿಕ್ಷೆ ದೊರೆಯುತ್ತದೆ. ಸ್ವಲ್ಪ ಸಮಾಧಾನದಿಂದಿರು.''

ಮೂರು ತಿಂಗಳು ಕಳೆದವು. ಪರಿಸ್ಥಿತಿ ಏನೂ ಸುಧಾರಿಸಲಿಲ್ಲ. ಒಂದು ದಿನ ಬೆಳಗ್ಗೆ 9 ಗಂಟೆಗೆ ಗುರುದೇವರು ಆಫೀಸಿಗೆ ಬಂದಾಗ, ಹರುಕು ಬಟ್ಟೆ ಧರಿಸಿ, ಕ್ಷೌರವಿಲ್ಲದ ಮುಖ ಹೊತ್ತ ಒಬ್ಬ ಮುದುಕ ಅವರ ಬಳಿ ಬಂದು ಪ್ರಣಾಮ ಮಾಡಿದ. ಸ್ವಾಮೀಜಿಯನ್ನು ಕುರಿತು: ''ಪೂಜ್ಯರೇ, ನಾನು ತುಂಬ ಕಷ್ಟದಲ್ಲಿದ್ದೇನೆ. ಕೆಲವು ನಿಮಿಷ ತಮ್ಮ ಬಳಿಯಲ್ಲಿ ಖಾಸಗಿಯಾಗಿ ಮಾತನಾಡುವುದಿದೆ. ದಯಮಾಡಿ ಈ ಅವಕಾಶವನ್ನು ನೀಡಿ'' ಎಂದ. ಸ್ವಾಮೀಜಿ ಅತೀವ ಅನುಕಂಪದಿಂದ ಹೇಳಿದರು: ''ಸಂಜೆ ನಾಲ್ಕು ಗಂಟೆಗೆ ಇಲ್ಲಿಯೇ ಇರುತ್ತೇನೆ. ಬಂದು ನೋಡಿ.''

ಆ ವ್ಯಕ್ತಿ ಹೊರಗೆ ಹೋಗಿ ಗುರುದೇವರು ಸಂಜೆ ನಾಲ್ಕು ಗಂಟೆಗೆ ಬರುವುದನ್ನೇ ಕಾಯುತ್ತಿದ್ದ. ಗುರುದೇವರು ತಮ್ಮ ಕಾರ್ಯದರ್ಶಿಯನ್ನು ಕುರಿತು – ''ಓ ಸ್ವಾಮೀಜಿ, ಈತ ನನ್ನೊಡನೆ ಖಾಸಗಿಯಾಗಿ ಮಾತನಾಡಲು ಬಯಸಿದ್ದಾನೆ. ನಮಗೆ ಏಕಾಂತ ಎಲ್ಲಿ ಸಾಧ್ಯವಾಗಬಹುದು?'' ಎಂದರು.



ಪಕ್ಕದ ಕಟ್ಟಡದ ಅಟ್ಟದ ಮೇಲಿದ್ದ ಒಂದು ಬೆಂಚನ್ನು ಆತ ತೋರಿಸಿದ. ಗುರುದೇವರು ಬೆಂಚಿನ ಮೇಲೆ ಕುಳಿತುಕೊಳ್ಳುತ್ತಿದ್ದಂತೆಯೇ ಆ ಸಭ್ಯ ಮುದುಕ ಅಳತೊಡಗಿದ. ''ಸ್ವಾಮೀಜಿ, ನಾನೊಬ್ಬ ದೊಡ್ಡ ಪಾಪಿ. ನನ್ನ ಬದುಕಿನಲ್ಲಿ ನಾನು ಮಾಡದ ಪಾಪವೇ ಇಲ್ಲ. ನನ್ನ ಮೇಲೆ ಕರುಣೆ ತೋರಿ. ಭಗವಂತನನ್ನು ಸೇರುವ ಮಾರ್ಗ ತಿಳಿಸಿಕೊಡಿ'' ಎಂದು ಬಿಕ್ಕುತ್ತಾ ಹೇಳಿದ. ಗುರುದೇವರು ಕೂಡಲೆ ಒಂದು ತುಳಸೀ ಮಾಲೆಯನ್ನೂ ಅಧ್ಯಾತ್ಮ ಡೈರಿಯನ್ನೂ ತರಿಸಿ ಅವನಿಗೆ ನೀಡಿದರು. ಆತನಿಗೆ ಅತ್ಯಂತ ಪ್ರಿಯ ದೈವವಾಗಿದ್ದ ಶ್ರೀಕೃಷ್ಣ ಮಂತ್ರವನ್ನು ಉಪದೇಶಿಸಿದರು. ಅನಂತರ ಹೀಗೆಂದರು: ''ಈಗ ಹಿಂದಿನದನೆಲ್ಲ ಮರೆತುಬಿಡು. ನಿನ್ನ ಸ್ಲೇಟು ಈಗ ಪರಿಶುದ್ಧವಾಗಿದೆ. ನೀನು ನನ್ನ ರಕ್ಷಣೆಯಲ್ಲಿದ್ದೀಯೆ. ಈ ಮಂತ್ರ ಜಪವನ್ನು ಪ್ರಾಮಾಣಿಕವಾಗಿ ಮಾಡು – ಪ್ರತಿದಿನ ಹತ್ತು ಬಾರಿಯಾದರೂ ಮಾಲೆಯನ್ನು ಪೂರೈಸು. ಹರಿ ಓಂ!''

ಗುರುದೇವರು ಕುಳಿತಲ್ಲಿಂದ ಮೇಲೆದ್ದರು. ಆದರೆ ಆ ವೃದ್ಧ ಒಂದು ಐದು ನಿಮಿಷ ತಾಳುವಂತೆ ಪ್ರಾರ್ಥಿಸಿದ. ಕೆಳಗೆ ಒಂದು ಸೂಟ್‌ಕೇಸ್ ಹಿಡಿದು ನಿಂತಿದ್ದ ವ್ಯಕ್ತಿಯನ್ನು ಸನ್ನೆ ಮಾಡಿ ಕರೆದ. ಸೂಟ್‌ಕೇಸನ್ನು ತೆಗೆದು ಕಟ್ಟು ಕಟ್ಟು ಹಣದ ಕಂತೆಗಳನ್ನೇ ತೆಗೆದು ಗುರುದೇವರ ಪಾದಗಳಲ್ಲಿ ಅರ್ಪಿಸಿ ಬಿನ್ನವಿಸಿದ. ''ಗುರುದೇವ್, ಇದರಲ್ಲಿ 5 ಲಕ್ಷ ರೂಪಾಯಿಗಳಿವೆ. ನಾನು ನೀಡುವ ದಕ್ಷಿಣೆ ಇದು.'' ಆಗ ಗುರುದೇವರು ಅವನು ಯಾರು? ಏನು ಉದ್ಯೋಗದಲ್ಲಿ ಇದ್ದಾನೆ? ಎಂದು ವಿಚಾರಿಸಿದರು. ಆ ವೃದ್ಧ ಉತ್ತರಿಸಿದ. ''ಸ್ವಾಮೀಜಿ, ನಾನು ಆಂಧ್ರಪ್ರದೇಶದ ಒಬ್ಬ ಶ್ರೀಮಂತ. ಬಹಳ ಹಿಂದೆಯೇ ನನ್ನ ಪತ್ನಿ ತೀರಿಕೊಂಡಳು. ಇಬ್ಬರು ಮಕ್ಕಳಿಗೆ ಸಲ್ಲಬೇಕಾದುದನ್ನು ಹಂಚಿದ್ದೇನೆ. ಇದು ನಾನು ವ್ಯಾಪಾರದಲ್ಲಿ ಗಳಿಸಿದ ಹಣ. ದಯಮಾಡಿ ಇದನ್ನು ಸ್ವೀಕರಿಸಿ ನನ್ನನ್ನು

ಆಶೀರ್ವದಿಸಿ.'' ಗುರುದೇವರು ತುಂಬು ನಗೆ ಸೂಸುತ್ತಾ ತಮ್ಮ ಕಾರ್ಯದರ್ಶಿಯನ್ನು ಕರೆದು ಹೇಳಿದರು: ''ನಿನ್ನ ಪ್ರಾರ್ಥನೆಗೆ ಈಗ ಭಗವಂತ ಓಗೊಟ್ಟಿದ್ದಾನೆ. ಇಗೋ ಇಲ್ಲಿ ಐದು ಲಕ್ಷ ರೂ.ಗಳಿವೆ. ಅಂಗಡಿ ಬಾಕಿ, ಮುದ್ರಣಾಲಯದ ಸಾಲ ಇತ್ಯಾದಿ ಎಲ್ಲವನ್ನೂ ತೀರಿಸು. ಅಲ್ಲದೆ ಇನ್ನು ಮುಂದಿನ ಸೇವೆಗಾಗಿ 50,000 ರೂ. ಮುಂಗಡವನ್ನೂ ನೀಡಿ ಬಿಡು. ಗುರುದೇವ ಸಾಲದ ಆಧಾರದ ಮೇಲೆ ಪಡೆಯುವುದು ಮಾತ್ರವಲ್ಲ ಮುಂಗಡ ಹಣವನ್ನೂ ನೀಡಬಲ್ಲರು ಎಂದು ಅವರಿಗೆ ಅರಿವಾಗಲಿ.''

ಆಂಧ್ರದ ಸಭ್ಯ ಮುದುಕ ಮೌನವಾಗಿ ಹೊರನಡೆದ. ಮುಂದಿನ ವರ್ಷಗಳಲ್ಲಿ ಅವನೆಂದೂ ಆಶ್ರಮದಲ್ಲಿ ಕಾಣಲಿಲ್ಲ ಎಂದು ಹೇಳಲಾಗುತ್ತದೆ. ಅದು ಹಾಗಾದರೆ ಭಗವಂತನ ಲೀಲೆಯಾಗಿದ್ದೀತೆ? ಯಾರು ಬಲ್ಲರು?

ಭಗವಂತ, ಭಕ್ತನ ಪ್ರಾರ್ಥನೆಗೆ ಓಗೊಡುವುದು ತಡವಾಗಬಹುದು. ಆದರೆ ಎಂದೂ ನಿರಾಕರಿಸುವುದಿಲ್ಲ.

✤ ✤ ✤



# 6. ಒಂದು ವಿಚಿತ್ರ ಹೈವೇ ದರೋಡೆ

ಒಂದು ರಾತ್ರಿ ಕಾಳು ಎಂಬ ಕಳ್ಳ ಬೆಂಗಳೂರಿನಲ್ಲಿ ಒಬ್ಬ ಶ್ರೀಮಂತ ವರ್ತಕನ ಮನೆಯನ್ನು ಪ್ರವೇಶಿಸಿ, ಆಭರಣಗಳನ್ನು ಹಾಗೂ ಹಣವನ್ನು ಜೋಪಾನವಾಗಿರಿಸಿದ್ದ ಗಾಡ್ರೆಜ್ ಲಾಕರನ್ನು ಇರಿಸಿದ್ದ ಕೋಣೆಗೆ ನುಸುಳಿದ. ಬೀಗದ ಕೈ ಸಹ ರಂಧ್ರದಲ್ಲಿ ತೂಗುಹಾಕಲ್ಪಟ್ಟಿತ್ತು. ಮನೆಯ ವಿಶಾಲವಾದ ಹಜಾರದಲ್ಲಿ ಒಬ್ಬ ಬ್ರಾಹ್ಮಣ ಪುರೋಹಿತನು ಕೃಷ್ಣಲೀಲೆಯ ಬಗೆಗೆ ನೀಡುತ್ತಿದ್ದ ಪ್ರವಚನವನ್ನು ನೂರಾರು ಮಂದಿ ಕೇಳುತ್ತಿದ್ದುದನ್ನೂ ಕಾಳು ನೋಡಲು ಸಾಧ್ಯವಾಯಿತು. ಕಳ್ಳನ ಗಮನ ಸಂಪೂರ್ಣವಾಗಿ ಪ್ರವಚನದ ಕಡೆಗೆ ಹರಿಯಿತು. ಪುರೋಹಿತನು ಬೃಂದಾವನದ ಚೆಲುವನ್ನು ವರ್ಣಿಸುತ್ತಿದ್ದುದಲ್ಲದೆ, ಸುಮಾರು ಏಳು ವರ್ಷದ ಬಾಲಕರಾದ ಬಲರಾಮ ಕೃಷ್ಣರು ಬೃಂದಾವನದ ಕಾಡಿನಲ್ಲಿ ತಂಗಾಳಿಯನ್ನೂ, ರಮಣೀಯ ದೃಶ್ಯಗಳನ್ನೂ ಆಸ್ವಾದಿಸುತ್ತಾ ಅಲೆಯುತ್ತಿದ್ದುದನ್ನೂ ವಿವರಿಸುತ್ತಿದ್ದನು. ಅವರಿಬ್ಬರೂ ಚಿನ್ನ ಹಾಗೂ ವಜ್ರದ ಆಭರಣಗಳನ್ನು ತಲೆಯಿಂದ ಪಾದದವರೆಗೂ ಧರಿಸಿದ್ದರು. ಅವುಗಳ ಬೆಲೆ ಹಲವು ಲಕ್ಷ ರೂಪಾಯಿಗಳಾಗುತ್ತಿದ್ದವು. ಈಗಲೂ ಕೂಡ ಕಾಡಿನಲ್ಲಿ ಆ ಬಾಲಕರು ಅಡ್ಡಾಡುತ್ತಿರುವುದನ್ನು ಕಾಣಬಹುದು, ಇತ್ಯಾದಿ. ಇದನ್ನು ಕೇಳುತ್ತಿದ್ದಂತೆಯೇ ಕಳ್ಳನ ಕಣ್ಣುಗಳು ದುರಾಸೆಯಿಂದ ಥಳಥಳಿಸಿದವು. ತಾನು

ಬೃಂದಾವನಕ್ಕೆ ಹೋಗಿ ಈ ಬಾಲಕರನ್ನು ಲೂಟಿ ಮಾಡಲು ಸಾಧ್ಯವಾದರೆ ಹಲವು ತಲೆಮಾರುಗಳವರೆಗೂ ವೈಭವದಿಂದ ಭರ್ಜರಿಯಾಗಿ ಬಾಳಬಹುದು ಎಂದುಕೊಂಡ. ಆಗ ತನ್ನ ಈ ದರೋಡೆಯ ಕೆಟ್ಟ ಕಸುಬನ್ನು ಒಮ್ಮೆಲೇ ಬಿಟ್ಟು ಬಿಡಬಹುದು. ಹಾಯಾಗಿ ಎಲ್ಲಾದರೂ ನೆಲಸಿ ಬದಕನ್ನು ಅನುಭವಿಸ ಬಹುದು. ಹೀಗೆ ಯೋಚಿಸುತ್ತಾ ಶ್ರೀಮಂತನ ಮನೆಯಿಂದ ಏನಾದರೂ ಕದಿಯುವ ಉದ್ದೇಶವನ್ನೇ ತೊರೆದುಬಿಟ್ಟ. ಹೊರಗೆ ಹೋಗಿ ಉದ್ವೇಗದಿಂದ ಚಡಪಡಿಸುತ್ತಾ ಮಲಗಿ ಆ ಪುರೋಹಿತನು ಹೊರಗೆ ಬರುವುದನ್ನೇ ಕಾಯತೊಡಗಿದ. ಅವನಿಂದ ಬೃಂದಾವನದ ಆ ಕಾಡಿನ ವಿವರಗಳನ್ನು ತಿಳಿಯಬಹುದು. ಪುರೋಹಿತನು ಈಚೆ ಬಂದು ಮನೆಯ ಕಡೆ ಹೆಜ್ಜೆ ಹಾಕಿದನು. ಕಾಳು ಮೌನವಾಗಿ ಅವನನ್ನು ಹಿಂಬಾಲಿಸಿದನು. ಇಬ್ಬರೂ ಒಂದು ನಿರ್ಜನ ಪ್ರದೇಶಕ್ಕೆ ಬರುತ್ತಿದ್ದಂತೆಯೇ, ಕಾಳು ಓಡುತ್ತಾ ಹೋಗಿ ಆ ಪುರೋಹಿತನ ಕೈಗಳನ್ನು ಹಿಡಿದುಕೊಂಡನು. ಅವನನ್ನು ಬೆದರಿಸುವ ದನಿಯಲ್ಲಿ – ''ಸ್ವಾಮಿ, ಹೆದರಬೇಡಿ. ನಾನು ನಿಮಗೇನೂ ತೊಂದರೆ ಮಾಡೋದಿಲ್ಲ. ಕೃಷ್ಣ ಬಲರಾಮ ಎಂಬ ಆ ಪೋರರು ಪ್ರತಿಸಂಜೆ ಬೃಂದಾವನದ ಕಾಡುಗಳಲ್ಲಿ ಇಂದಿಗೂ ಅಡ್ಡಾಡುತ್ತಿದ್ದಾರೆ ಎಂದು ನೀವು ಹೇಳಿದ್ದು ನಿಜವಾ? ಹಾಗೆ ನಿಜವಾಗಿದ್ದರೆ ಆ ಬೃಂದಾವನ ಅನ್ನೋದು ಎಲ್ಲಿ ಐತೆ? ಇಲ್ಲಿಂದ ಅದು ಎಷ್ಟು ದೂರ? ಈ ಹುಡುಗರನ್ನು ಕಾಡಿನ ಯಾವ ಸ್ಥಳದಲ್ಲಿ ನೋಡಬಹುದು? ಎಲ್ಲಾ ಸರಿಯಾಗಿ ಹೇಳಿ ಬುದ್ಧಿ'' ಎಂದ. ಪುರೋಹಿತನಿಗೆ ತುಂಬ ಭಯವಾಯಿತು. ತಾನು ಹೇಳಿದ್ದೆಲ್ಲ ಅಪ್ಪಟ ನಿಜ ಎಂದು ಖಚಿತವಾಗಿ ಸಾಧಿಸಿದ. ಕೃಷ್ಣನ ಲೀಲೆ ಯಾವಾಗಲೂ ನಡೆಯುತ್ತಲೇ ಇದೆ. ಅದು ನಿತ್ಯಲೀಲೆ ಎಂದೂ ಹೇಳಿದ.

''ಉತ್ತರ ಭಾರತದ ಕಡೆ ಸುಮಾರು 2000 ಕಿಲೋಮೀಟರ್ ಹೋದರೆ ಬೃಂದಾವನದ ಕಾಡು ಸಿಗುತ್ತದೆ. ಕಾಡಿನ ತುಂಬ ಮತ್ತುಹಿಡಿಸುವಂತಹ



ಸುವಾಸನೆ ತುಂಬಿರುತ್ತದೆ. ಎಲ್ಲ ಮರದ ಕೊಂಬೆಗಳೂ ಮೇಲಕ್ಕೆ ಚಾಚದೆ ಕೆಳಗೆ ಬಾಗಿರುತ್ತದೆ. ಪುಟ್ಟ ಹುಡುಗರ ಕೈಗೆ ತಿನ್ನುವ ಹಣ್ಣುಗಳು ಸಿಗುವಂತಿರಲಿ ಎಂದು ಅವುಗಳ ಹಂಬಲ. ಬೃಂದಾವನದ ಮಧ್ಯಭಾಗದಲ್ಲಿ ಕದಂಬ ವೃಕ್ಷಗಳ ಸಮೂಹವೇ ಇದೆ. ಕೃಷ್ಣನಿಗೆ ಆ ಪ್ರದೇಶದಲ್ಲಿ ಅಡ್ಡಾಡುವುದು ತುಂಬ ಪ್ರಿಯ. ಅವನ ತಲೆಯನ್ನು ಒಂದು ನವಿಲಗರಿ ಅಲಂಕರಿಸಿದೆ. ಅವನ ಕೈಯಲ್ಲಿ ಕೊಳಲು. ಅದಕ್ಕೆ ಮುತ್ತುಗಳನ್ನು ಅಳವಡಿಸಿದೆ. ನಾನಂತೂ ಎಂದೂ ಬೃಂದಾವನಕ್ಕೆ ಹೋದವನಲ್ಲ. ವ್ಯಾಸಮುನಿಗಳಿಂದ ರಚಿತವಾದ ಶ್ರೀಮತ್ ಭಾಗವತಮ್ ಎಂಬ ಅಧಿಕೃತ ಗ್ರಂಥದಲ್ಲಿ ಈ ಎಲ್ಲ ವಿವರಣೆ ಇದೆ. ವ್ಯಾಸರಂತೂ ಅತ್ಯಂತ ಪ್ರಮಾಣಿಕ ಸಂತರು.'' ಪುರೋಹಿತನ ಮಾತುಗಳಲ್ಲಿನ ಶ್ರದ್ಧೆಯಿಂದ ಕಾಳು ತುಂಬ ಪ್ರಭಾವಿತನಾದ. ಆ ಬ್ರಾಹ್ಮಣನಿಂದ ಬೀಳ್ಕೊಳ್ಳುವಾಗ ಎಚ್ಚರಿಕೆ ಮಾತುಗಳನ್ನೂ ಆಡಿದ. ''ಮಹಾಸ್ವಾಮಿ ತುಂಬ ಧನ್ಯವಾದ. ನಾನು ನೇರವಾಗಿ ಬೃಂದಾವನಕ್ಕೇ ಹೋಗ್ತೀನಿ. ನೀವು ಹೇಳಿದ್ದೆಲ್ಲ ನಿಜವಾದ್ರೆ, ಕೃಷ್ಣ ಬಲರಾಮರನ್ನು ಭೇಟಿಯಾಗಿ ಅವರ ಆಭರಣಗಳನ್ನೆಲ್ಲ ಲೂಟಿ ಮಾಡಿಕೊಂಡು ಬರ್ತೀನಿ. ಲೂಟಿಯಲ್ಲಿ ಅರ್ಧ ಪಾಲು ನಿಮಗೇ! ಅದಕ್ಕೆ ನೀವು ಅರ್ಹರೇ ಇದೀರಿ. ಆದರೆ ನೀವು ಹೇಳಿದ್ದು ಏನಾದ್ರೂ ಸುಳ್ಳಾತೋ ನಾನು ವಾಪಸು ಬರೋದಂತೂ ನಿಜವೇ. ನೀವೆಲ್ಲಿದ್ದರೂ ಹುಡುಕಿ ನಿಮ್ಮನ್ನು ಕೊಂದು ಬಿಡ್ತೀನಿ. ಇದಂತೂ ಖಂಡಿತ.'' ಕಾಳು ಹೀಗೆ ಹೇಳಿ ಕಾಲುನಡಿಗೆಯಲ್ಲೇ ಬೃಂದಾವನದ ಕಡೆ ಹೊರಟುಬಿಟ್ಟು. ರಾತ್ರಿ-ಹಗಲು ಅವನಿಗೆ ಬೃಂದಾವನದ್ದಲ್ಲದೆ ಬೇರೆ ಯಾವ ಯೋಚನೆಯೂ ಬರಲಿಲ್ಲ. ಆ ಇಬ್ಬರು ದೈವಿಕ ಬಾಲಕರದೇ ನೆನಪು. ಎಷ್ಟೋ ದಿನ ಹಾದಿಯಲ್ಲಿ ಅವನಿಗೆ ಆಹಾರವೂ ದೊರೆಯಲಿಲ್ಲ. ಆದರೇನು? ಕೃಷ್ಣನ ಚಿಂತನೆಯೊಂದರಿಂದಲೇ, ಅವನನ್ನು ಲೂಟಿ ಮಾಡುವ ಯೋಚನೆಯಿಂದಲೇ ಅವನ ಹಸಿವು ಹಿಂಗುತ್ತಿತ್ತು. 'ಕೃಷ್ಣ' ಎಂಬ ಹೆಸರಿನಲ್ಲಿ ಇದ್ದಕ್ಕಿದ್ದಂತೆ ಅವನಿಗೆ ಮೋಹ ಉಂಟಾಗಿಬಿಟ್ಟಿತು. ಹಾದಿ

ಸವೆಸುತ್ತಿದ್ದಾಗ ಮತ್ತೆ ಮತ್ತೆ ಆ ಹೆಸರನ್ನೇ ಉಚ್ಚರಿಸುತ್ತಿದ್ದ. ನಿದ್ರಿಸುವಾಗಲೂ ಕೃಷ್ಣ ಹಾಗೂ ಬೃಂದಾವನದ ಕನಸೇ. ಎಷ್ಟು ದೂರ ನಡೆದು ಬಂದೆ ಎಂಬ ಪರಿವೆಯೇ ಅವನಿಗೆ ಇರಲಿಲ್ಲ, ತಿಂಗಳುಗಳೇ ಉರುಳಿದವು. ಅವನ ಕಾಲಿನ ಬೂಟುಗಳು ಸವೆದುಹೋಗಿ, ಅವುಗಳನ್ನು ಎಸೆಯಬೇಕಾಯಿತು. ಅವನು ತೊಟ್ಟ ಬಟ್ಟೆಗಳು ಜೂಲು ಜೂಲಾದವು. ದೇಹದ ಹಾಗೂ ಅದರ ಅವಶ್ಯಕತೆಗಳ ಪರಿವೆಯೂ ಅವನಿಗೆ ತಪ್ಪಿಹೋಯಿತು. ಆ ಪುರೋಹಿತ ವರ್ಣಿಸಿದಂತೆ, ಕಾಡಿನಲ್ಲಿ ಅಡ್ಡಾಡುವ ಕೃಷ್ಣನ ಸ್ವರೂಪವನ್ನೇ ಅವನ ಮನಸ್ಸು ಕಲ್ಪಿಸಿಕೊಳ್ಳತೊಡಗಿತು. ಒಂದು ದಿನ ವಿಚಿತ್ರ ಸುಗಂಧ ಪಸರಿಸಿದ್ದ ಒಂದು ಕಾಡಿಗೆ ಅವನು ಬಂದು ತಲುಪಿದ. ಅವನು ಕದಂಬ ಎಂದು ಭಾವಿಸಿದ ವೃಕ್ಷಗಳ ತುಂಬ ಬಿಳಿಯ ಹೂವುಗಳನ್ನು ಅವನ ಕಣ್ಣುಗಳು ದೃಷ್ಟಿಸುತ್ತಿದ್ದಂತೆಯೇ ಸೀಮಾತೀತವಾದ ಆನಂದ ಅವನನ್ನು ತುಂಬಿಬಿಟ್ಟಿತು. ಕೃಷ್ಣ ಬಲರಾಮರನ್ನು ಕಾಣಲು ಸಂಜೆವರೆಗೂ ಕಾಯಬೇಕಿತ್ತು. ಕಾಳು ತುಂಬ ಬಳಲಿದ್ದ, ಹಸಿದಿದ್ದ, ಬಾಯಾರಿದ್ದ. ತುಂಬ ತಳ್ಮೆಯಿಂದ ಕಾಯುತ್ತಲೇ ಇದ್ದ. ಸಂಜೆ 5 ಗಂಟೆ ಸಮಯ. ಹೆಜ್ಜೆಗಳ ಸದ್ದು, ಪಾಯಲ್(ಗೆಜ್ಜೆ)ಗಳ ನಾದ ಕೇಳ ಬಂದಿತು. ಕಟ್ಟ ಕಡೆಗೆ ಉಜ್ವಲ ಸ್ವರೂಪದ ಇಬ್ಬರು ಬಾಲಕರು ಮೈತುಂಬ ಆಭರಣಗಳಿಂದ ಅಲಂಕೃತರಾಗಿ ಸೂರ್ಯ ಚಂದ್ರರಂತೆ ಕಂಗೊಳಿಸತೊಡಗಿದರು. ಅವರಲ್ಲಿ ಒಬ್ಬನ ಮುಡಿಯಲ್ಲಿ ನವಿಲುಗರಿ, ಕೈಯಲ್ಲಿ ಕೊಳಲು. ಶರೀರ ಶ್ಯಾಮಲ ವರ್ಣ. ಹೃದಯ ತುಂಬಿ ಬರುವ ನೋಟ! ತನ್ನನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಿದ್ದಾನೆ. ತುಟಿಗಳನ್ನು ತುಂಬಿದ ಮಂದಹಾಸ. ಕಾಳು ತುಂಬ ಆಕರ್ಷಿತನಾದ. ಆ ದೃಶ್ಯದಿಂದ ಕಣ್ಣುಗಳನ್ನು ದೂರ ಮಾಡುವುದೇ ಸಾಧ್ಯವಾಗಲಿಲ್ಲ, ಬಾಲಕ ನುಡಿದ, ''ಕಾಳೂ ಕಾಕಾ, ಈ ಎಲ್ಲ ಒಡವೆ ನಿನಗೆ ಬೇಕಾ? ತೆಗೆದುಕೋ!'' ಹೀಗೆ ಹೇಳುತ್ತ ಕೃಷ್ಣ ಬಲರಾಮರಿಬ್ಬರೂ ತಾವು ಧರಿಸಿದ್ದ ಒಡವೆಗಳನ್ನು ತೆಗೆತೆಗೆದು ಕಾಳುವಿಗೆ ಕೊಟ್ಟರು. ಕಾಳುವಿಗೆ ಅಚ್ಚರಿ-



ಎಲಾ ಈ ಪೋರರಿಗೆ ತನ್ನ ಹೆಸರು ಹೇಗಾದರೂ ತಿಳೀತಪ್ಪಾ! ಅವನು ಎಲ್ಲ ಒಡವೆಗಳನ್ನೂ ತಾನು ತಂದಿದ್ದ ದೊಡ್ಡ ಚೀಲದಲ್ಲಿ ತುಂಬಿಕೊಂಡ. ಅವರನ್ನು ಕಾಣುತ್ತಿದ್ದಂತೆ ಅವನ ಕಣ್ಣುಗಳಲ್ಲಿ ಕಂಬನಿ ಉಕ್ಕಿ ಉಕ್ಕಿ ಬಂದಿತು. ಈ ಎಲ್ಲ ಒಡವೆಗಳನ್ನೂ ಬಾಲಕರಿಗೇ ಹಿಂತಿರುಗಿಸಿ, ಅವರು ಸೇವೆ ಮಾಡಿಕೊಂಡು ಅಲ್ಲಿಯೇ ಇದ್ದು ಬಿಡುವ ಯೋಚನೆ ಒಂದು ಕ್ಷಣ ಅವನ ಮನಸ್ಸಿನಲ್ಲಿ ಸುಳಿಯಿತು. ಕೃಷ್ಣನು ಕಾಳುವನ್ನು ಕುರಿತು ಮತ್ತು ನುಡಿದ, ''ಕಾಕಾ, ನಿನ್ನ ಚೀಲದಲ್ಲಿ ಇನ್ನೂ ತುಂಬ ಜಾಗ ಇದೆ. ನಾಳೆ ಇದೇ ಹೊತ್ತಿಗೆ ನೀನು ಇಲ್ಲಿ ಕಾದಿದ್ದರೆ ನನ್ನ ಅಮ್ಮ ನನಗೆ ತೊಡಿಸುವ ತುಂಬಾ ತುಂಬಾ ಒಡವೆಗಳನ್ನು ತಂದುಕೊಡುತ್ತೇನೆ. ನಮ್ಮ ಮನೇಲಿ ಇನ್ನೂ ಬೇಕಾದಷ್ಟು ಒಡವೆ ಇದೆ ಗೊತ್ತಾ?'' ಕೃಷ್ಣನ ಮೋಹಕ ಮಂದಹಾಸ, ಮಧುರ ನುಡಿಗಳಿಗೆ ಕಾಳು ಮಾರು ಹೋದ. ಸುಮ್ಮನೆ ತಲೆ ಆಡಿಸುವುದಷ್ಟೇ ಅವನಿಗೆ ಸಾಧ್ಯವಾಯಿತು. ತನ್ನ ಮಾತಿಗೆ ತಪ್ಪದಂತೆ ಮರುದಿನವೂ ಕೃಷ್ಣ ತುಂಬ ಒಡವೆಗಳನ್ನು ತಂದ. ಕಾಳುವಿನ ಚೀಲ ಈಗ ಭರ್ತಿಯಾಯಿತು. ಚೀಲವನ್ನು ಕಾಳು ಹೆಗಲಿಗೆ ಏರಿಸುತ್ತಿದ್ದಾಗ ಅಯ್ಯೋ! ಕೃಷ್ಣ-ಬಲರಾಮರು ಮಾಯವಾಗಿ ಬಿಟ್ಟರು. ಮನಸ್ಸಿಲ್ಲದ ಮನದಿಂದ ಕಾಳು ತನ್ನ ಹಳ್ಳಿಗೆ ಹಿಂತಿರುಗಿದ. ಕೆಲವು ತಿಂಗಳನಂತರ ನೇರವಾಗಿ ಪುರೋಹಿತನ ಮನೆಗೆ ತೆರಳಿ, ಮೊದಲೇ ಮಾತು ಕೊಟ್ಟಂತೆ, ತಾನು ತಂದುದರಲ್ಲಿ ಅರ್ಧಭಾಗವನ್ನು ಪುರೋಹಿತನ ಎದುರು ಇರಿಸಿದ. ಎಲ್ಲ ಘಟನೆಗಳನ್ನೂ ಅವು ನಡೆದಂತೆಯೇ ವಿವರಿಸಿ ಹೇಳಿದ. ಪುರೋಹಿತನಿಗೆ ನಂಬಿಕೆಯೇ ಬರಲೊಲ್ಲದು. ಕೃಷ್ಣನು ಇದ್ದದ್ದು ಸಾವಿರಾರು ವರ್ಷಗಳ ಮೊದಲು. ಇವೆಲ್ಲ ಸಂಭವಿಸಲು ಹೇಗೆ ಸಾಧ್ಯ? ಪುರೋಹಿತ ಕಾಳುವನ್ನು ಕುರಿತು ಹೇಳಿದ: ''ಈ ಯಾವ ಒಡವೆಯೂ ನನಗೆ ಬೇಡ. ಎಲ್ಲವನ್ನೂ ನೀನೇ ಇರಿಸಿಕೋ. ಆದರೆ ನನಗೆ ಒಂದೇ ಒಂದು ಉಪಕಾರ ಮಾಡು. ನೀನು

ಕೃಷ್ಣನನ್ನು ಕಂಡ ಕಾಡಿಗೆ ನನ್ನನ್ನು ಕರೆದುಕೊಂಡು ಹೋಗು. ನಿನಗೆ ಅರ್ಥವಾಗದು. ನಾನು ಹಿಂದೆ ನಿನಗೆ ಹೇಳಿದ್ದೆಲ್ಲ ಬರಿಯ ಸುಳ್ಳು. ಮೂರು ಸಾವಿರ ವರ್ಷಗಳಷ್ಟು ಹಿಂದೆ ಭಗವಂತನೇ ಆ ರೂಪವನ್ನು ಧರಿಸಿ ಅವತರಿಸಿದ್ದ. ಆತನೇ ನಿನಗೆ ದರ್ಶನ ಕೊಟ್ಟಿದ್ದಾನೆ. ಇನ್ನು ನನ್ನ ಬದುಕಿನ ಏಕಮಾತ್ರ ಉದ್ದೇಶವೆಂದರೆ ಆ ಕೃಷ್ಣನನ್ನು ಒಮ್ಮೆ ಕಾಣುವುದು. ಅಪ್ಪಾ ! ನೀನೆಂಥ ಭಾಗ್ಯವಂತ!'' ಈ ಯಾವ ಮಾತುಗಳೂ ಕಾಳುವಿಗೆ ಅರ್ಥವಾಗಲಿಲ್ಲ. ಆದರೂ ಕಾಳು ಆ ಬ್ರಾಹ್ಮಣನನ್ನು ತಾನು ಈ ಮೊದಲು ದೈವೀ ಸೋದರರನ್ನು ದರ್ಶಿಸಿದ ಅದೇ ಕಾಡಿಗೆ ಕರೆದೊಯ್ದ. ಒಂದು ವಾರ ಕಾಲ ಹಸಿವು ಬಾಯಾರಿಕೆಯನ್ನು ಸಹಿಸಿಕೊಂಡು ಅವರು ಕಾದೇ ಕಾದರು. ಆ ಕೃಷ್ಣ ಬರಲೇ ಇಲ್ಲ. ಸೋಲು ಒಪ್ಪದ ಕಾಳು ಮರದ ರೆಂಬೆಕೊಂಬೆಗಳನ್ನು ಮುರಿದು ಬೆಂಕಿ ಹೊತ್ತಿಸಿಬಿಟ್ಟ. ''ಕೃಷ್ಣಾ, ನೀನು ಯಾರೋ ನಾನು ತಿಳಿಯೆ - ದೇವರೋ ಮಾನವನೋ ನಾನೇನು ಬಲ್ಲೆ ? ಈ ಬ್ರಾಹ್ಮಣನ ಮುಂದೆ ನೀನು ಕಾಣಿಸಿಕೊಳ್ಳದಿದ್ದರೆ, ಇದೇ ಬೆಂಕಿಯಲ್ಲಿ ಬಿದ್ದು ಭಸ್ಮವಾಗಿಬಿಡುತ್ತೇನೆ'' ಎಂದು ಕೂಗಿ ಬಿಟ್ಟ. ತಕ್ಷಣ ಕೃಷ್ಣ ತನ್ನೆಲ್ಲ ಆಭರಣಗಳನ್ನು ಧರಿಸಿ ಅವನೆದುರು ಪ್ರತ್ಯಕ್ಷನಾದ. ಕಾಳು ಅವನ ಕಾಲುಗಳಲ್ಲಿ ಬಿದ್ದು ಕ್ಷಮೆ ಕೋರಿದ. ಆದರೆ ಪುರೋಹಿತನು ಕೃಷ್ಣನನ್ನು ಕಾಣಲಾರದೇ ಹೋದ. ''ಓ ಪ್ರಭು ಈ ಚೋರನಿಗೆ ನೀನು ನೀಡಿದ ದರ್ಶನವನ್ನು ನನಗೆ ಕರುಣಿಸದಷ್ಟು ಪಾಪಿಯೇ ನಾನು ?'' ಎಂದು ಕೃಷ್ಣನನ್ನು ದೂಷಿಸತೊಡಗಿದ. ಕೃಷ್ಣನು ಬ್ರಾಹ್ಮಣನ ಎದುರೂ ಕಾಣಿಸಿಕೊಂಡು ನುಡಿದ: ''ನಿನ್ನ ಎಲ್ಲ ಆಸ್ತಿಯನ್ನೂ ಬಡ ಬಗ್ಗರಿಗೆ ಹಂಚಿಬಿಟ್ಟು ಬಾ. ಇದೇ ಸ್ಥಳದಲ್ಲಿ ಧ್ಯಾನ ಪ್ರಾರ್ಥನೆಗಳನ್ನು ಮಾಡುತ್ತಾ ನಿನ್ನ ಉಳಿದ ಬದುಕನ್ನು ಕಳೆ. ಕಾಲಕ್ರಮದಲ್ಲಿ ನೀನು ನನ್ನನ್ನೇ ಸೇರುವೆ.''



ಸಾಮಾನ್ಯವಾಗಿ ಒಬ್ಬ ಭಕ್ತನು ಮಾಡುವ ಎಲ್ಲ ಸಾಧನೆಗಳನ್ನೂ ಆ ಕಳ್ಳನು ಮಾಡಿಯೇ ಇದ್ದನು. ದೇಹದ ಬಯಕೆಗಳನ್ನು ನಿರ್ಲಕ್ಷಿಸಿದ್ದನು. ಕೃಷ್ಣನ ಸ್ಮರಣೆಯಲ್ಲೇ ಸದಾ ನಿರತನಾಗಿದ್ದನು. ದರೋಡೆ ಮಾಡುವುದೇ ಅವನ ಉದ್ದೇಶವಾಗಿದ್ದರೂ, ಕಾಳುವು ಏಕಾಗ್ರಚಿತ್ತದಿಂದ ಭಗವಂತನ ಚಿಂತನೆಯಲ್ಲೇ ಇದ್ದುದರಿಂದ ದೈವಾನುಗ್ರಹ ಅವನಿಗೆ ಪ್ರಾಪ್ತವಾಯಿತು. ನೀವು ವಿದ್ಯಾರ್ಥಿಗಳೇ ಆಗಿರಿ, ಉದ್ಯೋಗಸ್ಥ ವಯಸ್ಕರೇ ಆಗಿರಿ, ಇಲ್ಲವೇ ನಿವೃತ್ತ ನೌಕರರೇ ಆಗಿರಿ, ದಿನಕ್ಕೆ ಅರ್ಧ ಗಂಟೆಯಿಂದ ಒಂದು ಗಂಟೆಯವರೆಗೆ ನಿಮಗೆ ಪ್ರಿಯನಾದ ಭಗವಂತನನ್ನು ಚಿಂತಿಸುತ್ತಾ ಅವನ ಸ್ವರೂಪವನ್ನು ಕಲ್ಪಿಸಿಕೊಂಡರೆ, ನಿಮಗೆ ಅನಂತ ಆನಂದವು ದೊರೆತು ಇದೇ ಜನ್ಮದಲ್ಲೇ ನಿಮ್ಮ ಬಯಕೆಗಳೆಲ್ಲವೂ ಸಿದ್ಧಿಸುತ್ತವೆ.

✤ ✤ ✤

# 7. ನಿಜವಾದ ನಾಯಕ

ತುಂಬಾ ಪ್ರಯೋಗಾಲಯದಲ್ಲಿ ವಿಜ್ಞಾನಿಗಳು ದಿನಕ್ಕೆ 12ರಿಂದ 18 ಗಂಟೆಗಳು ಕೆಲಸ ಮಾಡುವ ಅಭ್ಯಾಸ ಉಳ್ಳವರಾಗಿದ್ದರು. ಒಂದು ಯೋಜನೆಯಲ್ಲಿ ಅಂತಹ ಎಪ್ಪತ್ತು ವಿಜ್ಞಾನಿಗಳು ತೊಡಗಿಕೊಂಡಿದ್ದರು. ಕೆಲಸದ ಒತ್ತಡದಿಂದ ಅವರು ಹತಾಶರಾಗಿದ್ದರೂ ಮತ್ತಷ್ಟು ಶ್ರಮವನ್ನೇ ಬಯಸುವ ತಮ್ಮ ಮೇಲಧಿಕಾರಿಗೆ ಅವರು ನಿಷ್ಠರಾಗಿದ್ದರು. ಉದ್ಯೋಗವನ್ನು ಬಿಟ್ಟು ಹೋಗುವ ಆಲೋಚನೆ ಯಾರಲ್ಲಿಯೂ ಮೂಡಲಿಲ್ಲ.

ಒಂದು ದಿನ ಒಬ್ಬ ವಿಜ್ಞಾನಿ ತನ್ನ ಮೇಲಧಿಕಾರಿಯ ಬಳಿ ಬಂದು ಹೇಳಿದ: "ಸರ್, ನಗರದಲ್ಲಿ ನಡೆಯುತ್ತಿರುವ ಎಕ್ಸಿಬಿಷನ್‌ಗೆ ಕರೆದುಕೊಂಡು ಹೋಗುವುದಾಗಿ ನನ್ನ ಮಕ್ಕಳಿಗೆ ಭರವಸೆ ಕೊಟ್ಟಿದ್ದೇನೆ. ಆದುದರಿಂದ ಸಂಜೆ 5.30ಕ್ಕೆ ಆಫೀಸು ಬಿಡಲು ಬಯಸುತ್ತೇನೆ."

ಅಧಿಕಾರಿ ಎಂದರು: "ಆಗಬಹುದು, ಇಂದು ಬೇಗನೆ ಆಫೀಸಿನಿಂದ ಹೊರಡಲು ನಿನಗೆ ಅನುಮತಿ ನೀಡಿದ್ದೇನೆ. ಆ ವಿಜ್ಞಾನಿ ಕೆಲಸಕ್ಕೆ ತೊಡಗಿದ. ಊಟದ ನಂತರವೂ ತನ್ನ ಕೆಲಸ ಮುಂದುವರೆಸಿದ. ಎಂದಿನಂತೆ ತನ್ನ ಕೆಲಸದಲ್ಲಿ ಮಗ್ನನಾಗಿ ಬಿಟ್ಟ. ಇನ್ನೇನು ಮುಗಿಯಿತು ಎನಿಸಿದಾಗ ವಾಚ್ ನೋಡಿಕೊಂಡರೆ ಆಗಲೇ ರಾತ್ರಿ 8.30 ಗಂಟೆ !



ಮಕ್ಕಳಿಗೆ ನೀಡಿದ್ದ ಭರವಸೆ ತಕ್ಷಣ ನೆನಪಾಯಿತು. ಅಧಿಕಾರಿಯನ್ನು ಹುಡುಕಿದರೆ, ಅವರು ಸ್ಥಳದಲ್ಲಿ ಇರಲೇ ಇಲ್ಲ. ಹೇಗೂ ಬೆಳಗ್ಗೆಯೇ ಹೇಳಿದ್ದೇನಲ್ಲಾ ಎಂದುಕೊಂಡು ಎಲ್ಲವನ್ನೂ ಮುಗಿಸಿ ಮನೆಗೆ ಹೊರಟ.

ತನ್ನ ಮಕ್ಕಳಿಗೆ ನಿರಾಸೆ ಉಂಟುಮಾಡಿದೆ ಎಂಬ ಪ್ರಜ್ಞೆ ಅವನನ್ನು ಒಳಗೊಳಗೇ ಕಾಡತೊಡಗಿತು. ಮನೆ ತಲುಪಿದ. ಮಕ್ಕಳು ಅಲ್ಲಿ ಕಾಣಲೇ ಇಲ್ಲ. ಅವನ ಪತ್ನಿ ಯಾವುದೋ ನಿಯತಕಾಲಿಕೆಯನ್ನು ಓದುತ್ತಾ ಕುಳಿತಿದ್ದಳು. ಸಂದರ್ಭ ಸ್ಫೋಟಗೊಳ್ಳುವಂತೆಯೇ ಇತ್ತು ! ಏನು ಮಾತು ತೆಗೆದರೂ ತನ್ನ ಕಡೆಗೇ ತಿರುಗುವುದು ಖಂಡಿತ.

ಆದರೆ ಆಕೆ ತಣ್ಣಗೆ ಸಮಾಧಾನದಿಂದಲೇ ಕೇಳಿದಳು, "ನಿಮಗೆ ಕಾಫಿ ತರಲೇ ? ಇಲ್ಲವೇ ಹಸಿದಿದ್ದರೆ ಊಟಕ್ಕೇ ಏಳುತ್ತೀರೋ ಹೇಗೆ?" ಆತ ಹೇಳಿದ: "ನಿನಗೆ ಕಾಫಿ ಬೇಕೆನಿಸಿದರೆ ಅದೇ ನನಗೂ ಆದೀತು. ಆದರೆ ಮಕ್ಕಳೆಲ್ಲ ಎಲ್ಲಿ???"

ಹೆಂಡತಿ ಹೇಳಿದಳು : "ಅರೆ! ನಿಮಗೆ ಗೊತ್ತೇ ಇಲ್ಲವೆ? ಸಂಜೆ 5.15ಕ್ಕೆ ನಿಮ್ಮ ಮ್ಯಾನೇಜರ್ ಬಂದು ಅವರನ್ನೆಲ್ಲ ಎಕ್ಸಿಬಿಷನ್‌ಗೆ ಕರೆದುಕೊಂಡು ಹೋದರಲ್ಲಾ !"

ಏನಾಗಿತ್ತು ಎಂದರೆ...

ಸಂಜೆ ಐದು ಗಂಟೆಗೆ ಈ ವಿಜ್ಞಾನಿ ತನ್ನ ಕೆಲಸದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವುದನ್ನು ಅವನ ಮೇಲಧಿಕಾರಿ ಗಮನಿಸಿದರು. ಈತನಂತೂ ತನ್ನ ಕೆಲಸ ಬಿಟ್ಟು ಏಳುವುದಿಲ್ಲ, ಆದರೆ ಮಕ್ಕಳಿಗೆ ಈ ಮಾತು ಕೊಟ್ಟಿದ್ದರೆ ಅವರು ಎಕ್ಸಿಬಿಷನ್ ಖುಷಿ ಕಳೆದುಕೊಳ್ಳಬಾರದು, ಎಂದು ಅಧಿಕಾರಿ ಯೋಚಿಸಿದರು. ತಾವೇ ಮಕ್ಕಳನ್ನು ಕರೆದುಕೊಂಡು ಹೋಗಲು ಮುಂದಾದರು. ಅಧಿಕಾರಿ ಪ್ರತಿ

ಬಾರಿಯೂ ಹಾಗೆ ಮಾಡಬೇಕಾದುದಿಲ್ಲ. ಆದರೆ ಒಮ್ಮೆ ಹಾಗೆ ಮಾಡಿದರೆ ವಿಶ್ವಾಸ ಉಂಟುಮಾಡಿದಂತಾಗುತ್ತದೆ.

ಈ ಕಾರಣದಿಂದಲೇ ತುಂಬಾದ ವಿಜ್ಞಾನಿಗಳು ಕೆಲಸದ ಒತ್ತಡ ಅತಿಯಾಗಿದ್ದರೂ ತಮ್ಮ ಅಧಿಕಾರಿಯ ಕೈಕೆಳಗೆ ಸಂತೋಷದಿಂದಲೇ ಕೆಲಸ ಮುಂದುವರೆಸುತ್ತಾರೆ.

ಹೀಗೆ ಮಾಡಿದ ಆ ಮೇಲಧಿಕಾರಿ ಯಾರು ಎಂದು ನೀವು ಊಹಿಸಬಲ್ಲಿರಾ?

ಅವರೇ ಈಗ ನಮ್ಮ ರಾಷ್ಟ್ರಪತಿಗಳಾಗಿರುವ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಮ್ ಅವರು.

ಭಗವಂತನು ತನ್ನ ಭಕ್ತರು ತನ್ನಲ್ಲಿ ಪ್ರಶ್ನಾತೀತವಾದ ನಂಬಿಕೆಯನ್ನಿರಿಸಲು, ಅಚಲ ಭಕ್ತಿಯನ್ನು ಹೊಂದುವಂತೆ ಮಾಡಲು ಈ ಬಗೆಯ ತಂತ್ರವನ್ನೇ ಹೂಡುತ್ತಾನೆ.

(ಇಂಟರ್‌ನೆಟ್‌ನಿಂದ ಸಂಗ್ರಹ)

✣ ✣ ✣



# 8. ತನ್ನ ಭಕ್ತರ ಬಗೆಗೆ ಎಂದೂ ವಿಫಲವಾಗದ ಭಗವಂತನ ಪ್ರತಿಸ್ಪಂದನ

ದಾದಾ ಎಂದೇ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಸಾಧು ವಾಸ್ವಾನಿಯವರು ಕಳೆದ ಶತಮಾನದಲ್ಲಿದ್ದ ಅತ್ಯುನ್ನತ ಸಂತರು. 1910ರಲ್ಲಿ ಅವರು ಯೂರೋಪಿನ ಹಲವಾರು ದೇಶಗಳನ್ನು ಸಂದರ್ಶಿಸಿದರು. ಅವುಗಳಲ್ಲಿ ಬರ್ಲಿನ್‌ನಲ್ಲಿ ಸಮಾವೇಶವಾದ ವಿಶ್ವಧರ್ಮ ಸಮ್ಮೇಳನ ಸಹ ಒಂದು. ಅಲ್ಲಿ ದಾದಾಜಿ ಪ್ರಾಚೀನ ಋಷಿ ಪರಂಪರೆಯ ಸಂದೇಶವನ್ನು ಕುರಿತು ಸಹಸ್ರಾರು ಸಭಿಕರ ಎದುರು ತುಂಬ ಸ್ಫೂರ್ತಿದಾಯಕ ಉಪನ್ಯಾಸ ನೀಡಿದರು. ಹಲವಾರು ಹೃದಯಗಳಲ್ಲಿ ಅವರು ಭಗವಂತನಲ್ಲಿ ಆಳವಾದ ವಿಶ್ವಾಸವನ್ನೂ ದುಃಖಿತ ಮಾನವರ ಬಗೆಗೆ ಕಾರುಣ್ಯದ ಅವಶ್ಯಕತೆಯನ್ನೂ ಎಚ್ಚರಿಸಿದರು.

ಯೂರೋಪಿನಲ್ಲಿ ತಮ್ಮ ಕಾರ್ಯವನ್ನು ಮುಗಿಸಿ ಭಾರತಕ್ಕೆ ಹಿಂತಿರುಗುವ ಸಮಯ ಬಂದಾಗ, ಅಗತ್ಯವಾದಷ್ಟು ಮರು ಪ್ರಯಾಣ ವೆಚ್ಚದ ಹಣ ತಮ್ಮಲ್ಲಿ ಇಲ್ಲದಿರುವುದು ಅವರ ಗಮನಕ್ಕೆ ಬಂದಿತು. ಅವರು ಸ್ವಲ್ಪವೂ ವಿಚಲಿತರಾಗಲಿಲ್ಲ. ಸಕಾಲದಲ್ಲಿ ತಾವು ಸ್ವದೇಶಕ್ಕೆ ಹಿಂತಿರುಗುವ ವ್ಯವಸ್ಥೆಯನ್ನು ಭಗವಂತನೇ ಮಾಡುತ್ತಾನೆ ಎಂಬ ಗಾಢ ವಿಶ್ವಾಸ ಅವರಲ್ಲಿತ್ತು.

ಭಾರತಕ್ಕೆ ಸ್ಟೀಮರ್ ಹೊರಡುವ ಒಂದು ದಿನ ಮೊದಲು ಕೂಚ್ ಬಿಹಾರಿನ ಮಹಾರಾಣಿಯಿಂದ ಅವರಿಗೆ ಚಹಾಪಾನಕ್ಕೆ ಕರೆ ಬಂದಿತು. ಆಕೆ ರಜಾಕಾಲದ ಪ್ರವಾಸಕ್ಕೆ ಇಂಗ್ಲೆಂಡಿಗೆ ಬಂದಿದ್ದರು. ದಾದಾಜಿಯವರೊಡನೆ ಮಾತನಾಡುತ್ತಿರುವಾಗ ಮಹಾರಾಣಿ ಒಂದು ಕೋರಿಕೆಯನ್ನು ದಾದಾಜಿಯವರ ಮುಂದಿಟ್ಟರು - ''ತಾವು ಯೂರೋಪಿನಲ್ಲಿ ತಮ್ಮ ಕಾರ್ಯಕ್ರಮಗಳನ್ನೆಲ್ಲ ಮುಗಿಸಿದ್ದೀರಿ. ಭಾರತಕ್ಕೆ ಹಿಂತಿರುಗುವವರಿದ್ದೀರಿ ಎಂದು ತಿಳಿದಿದ್ದೇನೆ. ಇನ್ನು ಒಂದೆರಡು ದಿನಗಳಲ್ಲಿ ಹೊರಡಲಿರುವ ಸ್ಟೀಮರ್‌ನಲ್ಲಿ ತಮಗೊಂದು ಟಿಕೆಟ್ ತೆಗೆದಿರಿಸಲು ದಯಮಾಡಿ ಅನುಮತಿಸುವಿರಾ?''

ದಾದಾಜಿಗೆ ಏನೂ ಅಚ್ಚರಿಯಾಗಲಿಲ್ಲ. ಸಾಧಾರಣ ಮನುಷ್ಯನಿಗೆ ಈ ಘಟನೆ ಒಂದು ಪವಾಡ ಎನಿಸಬಹುದು. ಸಾಧು ವಾಸ್ವಾನಿಯವರಿಗಾದರೋ ತನ್ನ ಮಕ್ಕಳು ತನ್ನಲ್ಲಿರಿಸಿದ ಗಾಢವಾದ ನಂಬಿಕೆಗೆ ದೇವೀ ಮಾತೆ ತೋರಿದ ಅತಿಸಹಜವಾದ ನಿರೀಕ್ಷಿತ ಉತ್ತರ ಎಂದೇ ತೋರಿತು. ತನ್ನ ನಂಬಿಕೆಯ ಭಕ್ತರ ಎಲ್ಲ ಅವಶ್ಯಕತೆಗಳನ್ನೂ ನಿರೀಕ್ಷಿಸಿ ಅವುಗಳನ್ನು ಆಕೆಯೇ ಪೂರೈಸುತ್ತಾಳೆ. ಅದೆಷ್ಟು ವಿಚಿತ್ರ ಆಕೆಯ ರೀತಿಗಳು. ಅವಳ ನಾಮಕ್ಕೆ ಜಯವಿರಲಿ!

ಭಗವದ್ಗೀತೆಯಲ್ಲಿ ಪ್ರಭುವಿನ ಭರವಸೆಯ ನುಡಿ ಯಾರಿಗಾದರೂ ನೆನಪಾದೀತು - ಸದಾಕಾಲ ನನ್ನನ್ನೇ ಸ್ಮರಿಸುತ್ತಿರುವ ನನ್ನ ಭಕ್ತನ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತೇನೆ.''

(ಜೆ.ಪಿ. ವಾಸ್ವಾನಿಯವರ 'ಟಿಕೆಟ್ ಟು ಹೆವನ್' ಲೇಖನದಿಂದ ಸ್ವೀಕರಣ.)

✤ ✤ ✤



## 9. ಗೊಂದಲಗೊಳಿಸುವ ಪ್ರಶ್ನೆ

ಒಬ್ಬ ತರುಣ. ಕಾಡಿಗೆ ತೆರಳಿ ಇಪ್ಪತ್ತು ವರ್ಷಗಳ ಕಾಲ ತಪಸ್ಸು ಮಾಡಿದ. ಅಂತ್ಯದಲ್ಲಿ ಸಾಕ್ಷಾತ್ ಬ್ರಹ್ಮನು ಹಲವಾರು ದೇವತೆಗಳು ಹಾಗೂ ಋಷಿಮುನಿಗಳೊಡನೆ ಆತನಿಗೆ ದರ್ಶನವಿತ್ತ. ಯಾವ ಒಂದು ವರವನ್ನಾದರೂ ಕೇಳು. ನೀಡುತ್ತೇನೆ ಎಂದು ಹೇಳಿದ. ತಪಸ್ವೀ ತರುಣ ಉತ್ತರಿಸಿದ. ''ಪೂಜ್ಯ ಬ್ರಹ್ಮಾಜಿ, ನಿನಗೆ ಅನಂತಾನಂತ ಪ್ರಣಾಮಗಳು. ಈ ಪ್ರಪಂಚವು ಯಾಕಾದರೂ ಸೃಷ್ಟಿಯಾಗಿದೆ? ಈ ಸೃಷ್ಟಿಯ ಉದ್ದೇಶವಾದರೂ ಏನು? ಎಂದು ತಿಳಿಯಬಯಸುತ್ತೇನೆ.'' ಇಂಥ ಪ್ರಶ್ನೆಯನ್ನು ಈ ಮೊದಲು ಯಾರೂ ಕೇಳಿರಲಿಲ್ಲವಾಗಿ ಬ್ರಹ್ಮಾಜಿ ಚಕಿತಗೊಂಡ. ತನ್ನ ಉನ್ನತ ಸ್ವರದಲ್ಲಿ ಬ್ರಹ್ಮಾಜಿ ಹೇಳಿದ: ''ಅಯ್ಯಾ ತರುಣ. ಇದೊಂದು ದೈವೀ ರಹಸ್ಯ. ಇಷ್ಟೆಲ್ಲ ಜನರ ಎದುರಿನಲ್ಲಿ ಅದನ್ನು ನಾನು ಬಯಲು ಮಾಡಲಾರೆ. ಆ ಅಶ್ವತ್ಥ ವೃಕ್ಷದ ಹಿಂಭಾಗಕ್ಕೆ ಬಾ. ಅಲ್ಲಿ ಸತ್ಯ ಸಂಗತಿಯನ್ನು ನಿನಗೆ ತಿಳಿಸುತ್ತೇನೆ.'' ಬ್ರಹ್ಮಾಜಿ ತರುಣನನ್ನು ಏಕಾಂತದ ಮೂಲೆಗೆ ಕರೆದೊಯ್ದು ಕಿವಿಯಲ್ಲಿ ರಹಸ್ಯವಾಗಿ ಉಸಿರಿದ: ''ಅಯ್ಯಾ ಶತಮೂರ್ಖ! ಇಂಥ ಮೂರ್ಖ ಪ್ರಶ್ನೆಗೆ ಉತ್ತರವನ್ನು ಬಯಸಿ ಇಪ್ಪತ್ತು ವರ್ಷಗಳನ್ನು ವ್ಯರ್ಥಗೊಳಿಸಿದೆ. ಈ ಪ್ರಶ್ನೆಗೆ ಉತ್ತರ ನನಗೇ ತಿಳಿಯದು. ಆದರೆ ನನ್ನನ್ನು ನನ್ನ ಅದ್ಭುತ ವಿವೇಕಕ್ಕಾಗಿ ಗೌರವಿಸುತ್ತಿರುವ

ಅಷ್ಟೆಲ್ಲ ದೇವತೆಗಳ ಎದುರಿನಲ್ಲಿ ಈ ನನ್ನ ಅಜ್ಞಾನವನ್ನು ಹೇಗೆ ತೋರ್ಪಡಿಸಲಿ? ಕಾಡಿನಲ್ಲಿ ಹೋಗುತ್ತಿರುವ ಒಬ್ಬ ವ್ಯಕ್ತಿಯನ್ನು ವಿಷದ ಬಾಣವೊಂದು ಚುಚ್ಚಿದಾಗ, ಆತ ಕೂಡಲೆ ಸಹಾಯಕ್ಕಾಗಿ ಕೂಗಬೇಕು, ಆದಷ್ಟು ಬೇಗ ಚಿಕಿತ್ಸೆ ಪಡೆಯಲು ಆಸ್ಪತ್ರೆ ಸೇರಲು ಯತ್ನಿಸಬೇಕು. ಅದಕ್ಕೆ ಪ್ರತಿಯಾಗಿ ಕಾಡಿನಲ್ಲೇ ಸುತ್ತುತ್ತಾ ಈ ಬಾಣ ಯಾವ ದಿಕ್ಕಿನಿಂದ ಬಂದು ಚುಚ್ಚಿತು? ತನ್ನ ಯಾವ ಶತ್ರು ಅದನ್ನು ಪ್ರಯೋಗಿಸಿರಬಹುದು? ಬಾಣಕ್ಕೆ ಲೇಪಿಸಿರುವ ವಿಷ ಯಾವುದು? ಹೀಗೆಲ್ಲ ಚಿಂತಿಸತೊಡಗುವುದು ಎಂತಹ ಮೂರ್ಖತನ! ನೀನು ಈ ಜಗತ್ತಿನಲ್ಲಿ ಬಂದಮೇಲೆ - ಅದರಲ್ಲಿ ತುಂಬಿರುವ ಅಪಾಯಗಳು ದುಃಖ ಸಂಕಟಗಳು ಇವುಗಳಿಂದ ದೂರವಾಗುವುದಕ್ಕಾಗಿ ಭಗವಂತನ ಸಹಾಯಕ್ಕಾಗಿ ಯತ್ನಿಸುವುದೇ ನಿನ್ನ ಕರ್ತವ್ಯವಲ್ಲವೆ ?

ಇದೀಗ ನಾವು ಇಲ್ಲಿಂದ ಹೊರಗೆ ಹೊರಟಾಗ ನಿನ್ನ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ದೊರಕಿದೆ ಎಂಬಂತೆ ತುಂಬು ನಗೆಯಿಂದ ಹೊರಡು. ನೆನಪಿರಲಿ, ಹೊರಗೆ ಕಾಯುತ್ತಿರುವ ಎಲ್ಲ ದೇವತೆಗಳೂ ನಿನ್ನ ಮುಖವನ್ನೇ ಗಮನಿಸುತ್ತಿರುತ್ತಾರೆ, ನಿನ್ನ ಛಾಯಾಚಿತ್ರವನ್ನು ಸೆರೆಹಿಡಿಯಲು ಒಬ್ಬ ಫೋಟೋಗ್ರಾಫರ್ ಸಹಾ ಸಿದ್ಧವಾಗಿರುತ್ತಾನೆ!''

✤ ✤ ✤



# 10. ಉದಾರ ಹೃದಯದಲ್ಲಿ ಇನ್ನೂ ಸಾಕಷ್ಟು ಸ್ಥಳವಿದೆ

ಭಗವಂತ ನಾರಾಯಣನ ಮೂವರು ಶ್ರೇಷ್ಠ ಭಕ್ತರು ಸಮಕಾಲೀನರಾಗಿದ್ದರೂ ಪರಸ್ಪರ ಪರಿಚಿತರಾಗಿರಲಿಲ್ಲ. ಅವರು ಮೂವರೂ ಗೌರವಾನ್ವಿತ ಆಳ್ವಾರರು. ಭಗವಂತ ನಾರಾಯಣನನ್ನು ಕುರಿತು ಅಸಂಖ್ಯಾತ ಗೀತಗಳನ್ನು ರಚಿಸಿದ್ದಾರೆ. ತಮಿಳು ನಾಡಿನ ವಿಷ್ಣುದೇವಾಲಯಗಳಲ್ಲಿ ಇಂದಿಗೂ ಈ ತಮಿಳು ಗೀತಗಳನ್ನು ಹಾಡುತ್ತಾರೆ. ಒಂದು ರಾತ್ರಿ ಈ ಆಳ್ವಾರರಲ್ಲಿ ಮೊದಲನೆಯವರು ದಟ್ಟವಾದ ಕಾಡಿನ ಹಾದಿಯಿಂದ ಮನೆಗೆ ಮರಳುತ್ತಿದ್ದಾಗ ಭಾರೀ ಮಳೆ ಪ್ರಾರಂಭವಾಯಿತು. ಗಾಢವಾದ ಕತ್ತಲೆ ಬೇರೆ. ಅದೃಷ್ಟವಶಾತ್ ಅವರು ಒಂದು ಮರದ ಮಂಟಪವನ್ನು ಕಂಡರು. ಅಲ್ಲಿಯೇ ಬಿದ್ದಿದ್ದ ಒಂದು ಚಾಪೆಯನ್ನು ಹಾಸಿ ಮಲಗಿಬಿಟ್ಟರು. ಹೀಗೆ ಒಬ್ಬರು ಮಾತ್ರ ಮಲಗುವಷ್ಟು ಜಾಗ ಅಲ್ಲಿತ್ತು. ಕೆಲವು ನಿಮಿಷಗಳ ನಂತರ ಅದೇ ಕಾಡಿನ ಹಾದಿಯಲ್ಲಿ ಬಂದ ಎರಡನೆಯ ಆಳ್ವಾರರೂ ಮಳೆಯಲ್ಲಿ ತೊಯ್ದು ಅದೇ ಮರದ ಮಂಟಪಕ್ಕೆ ಬಂದರು. ಬಾಗಿಲು ತಟ್ಟಿ, ತುಂಬು ವಿನಯದಿಂದ, ''ಮಳೆ ರಾಚುತ್ತಿದೆ, ನಾನು ಒಳಗೆ ಬರಬಹುದೇ?'' ಎಂದು ಕೇಳಿದರು. ಮೊದಲನೆಯ ಆಳ್ವಾರರು ಬಾಗಿಲು ತೆರೆದು, ಅವರನ್ನು ಸ್ವಾಗತಿಸಿ.

''ದಯಮಾಡಿ ಬನ್ನಿ. ಇಬ್ಬರು ಕುಳಿತುಕೊಳ್ಳುವಷ್ಟು ಸ್ಥಳ ಇಲ್ಲಿ ಧಾರಾಳವಾಗಿದೆ!'' ಎಂದರು. ಮತ್ತೂ ಕೆಲವು ನಿಮಿಷಗಳ ನಂತರ ಮೂರನೆಯ ಆಳ್ವಾರರೂ ಅದೇ ಹಾದಿಯಲ್ಲಿ ಬಂದು, ಬಾಗಿಲು ತಟ್ಟಿ, ಒಳಗೆ ಬರಲು ಅವಕಾಶವನ್ನು ಬೇಡಿದರು. ಒಳಗಿದ್ದವರು ಬಾಗಿಲು ತೆರೆದು ಅವರನ್ನು ಸ್ವಾಗತಿಸುತ್ತಾ: ''ಸ್ವಾಮಿ, ದಯಮಾಡಿ ಒಳಗೆ ಬನ್ನಿ. ಮೂವರು ನಿಂತುಕೊಳ್ಳಲು ಇಲ್ಲಿ ಸಾಕಷ್ಟು ಸ್ಥಳವಿದೆ'' ಎಂದರು. ಮೂವರೂ ಆಳ್ವಾರರೂ ನಿಂತುಕೊಂಡು ಪ್ರಭು ನಾರಾಯಣನನ್ನು ಕುರಿತು ಗಟ್ಟಿ ದನಿಯಲ್ಲಿ ಹಾಡತೊಡಗಿದರು. ಭಕ್ತಿ ಪರವಶರಾಗಿ ತಮ್ಮನ್ನು ತಾವೇ ಮರೆತರು. ಆನಂದಭರಿತರಾಗಿ ಪರಸ್ಪರ ಕೈ ಹಿಡಿದುಕೊಂಡು ಕುಣಿಯುತ್ತಾ, ಕಣ್ಣು ಮುಚ್ಚಿಕೊಂಡು ಭಗವಂತನ ಮಹಿಮೆಯನ್ನು ಸ್ತುತಿಸತೊಡಗಿದರು. ಇದ್ದಕ್ಕಿದ್ದಂತೆ ಕಣ್ಣು ತೆರೆದಾಗ ಒಬ್ಬ ದಿವ್ಯ ಮೂರ್ತಿಯೂ ಅವರ ಮಧ್ಯದಲ್ಲಿ ನಿಂತು ಅವರೊಡನೆಯೇ ಹಾಡುತ್ತಿರುವುದನ್ನು ಕಂಡು ಪುಳಕಿತರಾದರು. ಹೊಸದಾಗಿ ಬಂದ ವ್ಯಕ್ತಿ ತನ್ನ ಕಿರೀಟದಲ್ಲಿ ಹೊಳೆ ಹೊಳೆಯುವ ವಜ್ರಗಳನ್ನೂ, ಕಿವಿಗಳಲ್ಲಿ ಪ್ರಕಾಶಿಸುವ ಕುಂಡಲಗಳನ್ನೂ ಧರಿಸಿದ್ದನು. ಅವನ ಸುಂದರ ವದನದಲ್ಲಿ ಮೋಹಕವಾದ ಮುಗುಳ್ನಗೆ. ಅವನ ವಕ್ಷಸ್ಥಳದಲ್ಲಿ ಸುಂದರವಾದ ಕೌಸ್ತುಭ. ಧರಿಸಿದ್ದುದು ಚೆಲುವಾದ ಪೀತಾಂಬರ. ಕೊರಳಲ್ಲಿ ವಿರಾಜಿಸುವ ತುಳಸೀ ಮಾಲೆ. ಬಂದವನು ಸ್ವಯಂ ನಾರಾಯಣನೇ. ತನ್ನನ್ನೇ ನೋಡುತ್ತಿರುವ ಆಳ್ವಾರರನ್ನೂ ಅವರ ಭಕ್ತಿ-ಆದರ-ಆನಂದಗಳನ್ನೂ ಕಂಡು, ಒಂದು ಕ್ಷಣದಲ್ಲಿ ಮಿಂಚಿನಂತೆ ಮಾಯವಾಗಿಬಿಟ್ಟನು. ಪ್ರಭು ನಾರಾಯಣನಿಗೆ ಜಯ ಜಯ!!

ಇಂಥದೇ ಮಾತುಗಳನ್ನು ಬೈಬಲ್‌ನಲ್ಲಿ ಹೇಳಲಾಗಿದೆ. ''ನಾನು ನಿಮಗೆ ಹೇಳುತ್ತಿದ್ದೇನೆ. ನನ್ನ ಹೆಸರಿನಲ್ಲಿ ಇಬ್ಬರು ಮೂವರು ಒಟ್ಟುಗೂಡಿದಾಗ, ಅವರ ಮಧ್ಯದಲ್ಲಿ ನಾನೂ ಇರುತ್ತೇನೆ.''

✤ ✤ ✤



# 11. ಸಾವು ಸಂಕಟಕ್ಕೆ ಕಾರಣವಾಗಬಾರದು

ಒಬ್ಬ ಯೆಹೂದ್ಯ ರಬ್ಬಿ (ಪುರೋಹಿತ) ತನ್ನ ಇಬ್ಬರು ಮಕ್ಕಳನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದ. ಪ್ರತಿಸಂಜೆ ಮನೆಗೆ ಬರುತ್ತಿದ್ದಂತೆಯೇ ಅವರೊಡನೆ ಆಟವಾಡುತ್ತಾ, ಮಾತನಾಡುತ್ತಾ, ಜೊತೆಯಾಗಿಯೇ ಊಟ ಮಾಡುತ್ತಾ ಕಾಲ ಕಳೆಯುತ್ತಿದ್ದನು.

ಒಂದು ಸಂಜೆ ಮನೆಗೆ ಹಿಂತಿರುಗಿದಾಗ, ಎಂದಿನಂತೆ ತನ್ನನ್ನು ಸ್ವಾಗತಿಸಲು ಮಕ್ಕಳು ಮನೆಯಲ್ಲಿ ಇಲ್ಲದುದನ್ನು ಕಂಡು ತುಂಬ ಕಳವಳಗೊಂಡ. ಬಹಳ ಉದ್ವೇಗಗೊಂಡ. ಅವನ ಪತ್ನಿಯಂತೂ ಈ ಬಗ್ಗೆ ಯಾವ ವಿವರಣೆ ನೀಡುವ ತೊಂದರೆಯನ್ನೇ ತೆಗೆದುಕೊಳ್ಳಲಿಲ್ಲ. ಸ್ವಲ್ಪ ಹೊತ್ತಾದ ನಂತರ ತಾನೊಬ್ಬನೇ ಊಟಕ್ಕೆ ಕುಳಿತ. ಅವನ ಹೆಂಡತಿ ಮೌನವಾಗಿಯೇ ಬಡಿಸತೊಡಗಿದಳು. ಇದ್ದಕ್ಕಿದ್ದಂತೆ ಆಕೆ ತನ್ನ ಮೌನವನ್ನು ಮುರಿದು ಪತಿಯನ್ನು ಪ್ರಶ್ನಿಸಿದಳು : ''ಯಾರಾದರೊಬ್ಬರು ನನ್ನ ಬಳಿ ಎರಡು ಅಮೂಲ್ಯವಾದ ವಜ್ರಗಳನ್ನು ನನ್ನ ಸುಪರ್ದಿನಲ್ಲಿರಿಸಿ, ಹಲವು ವರ್ಷಗಳ ನಂತರ ಅದನ್ನು ಹಿಂತಿರುಗಿಸುವಂತೆ ಕೇಳಿದರೆ ಅವುಗಳನ್ನು ಹಿಂದಕ್ಕೆ ಕೊಡದಿರುವುದು ಸರಿಯೇ?''

''ಎಂಥ ಪ್ರಶ್ನೆ ಇದು!'' ರಬ್ಬಿ ಉದ್ಗರಿಸಿದ, ''ಸ್ವಲ್ಪವೂ ತಡಮಾಡದೆ ಅದರ ಒಡೆಯನಿಗೆ ವಜ್ರಗಳನ್ನು ಹಿಂತಿರುಗಿಸಿಬಿಡು, ಹೋಗು!''

ಊಟ ಮುಗಿದ ನಂತರ, ರಬ್ಬಿಯನ್ನು ಅವನ ಪತ್ನಿ ಮಕ್ಕಳ ಮಲಗುವ ಕೋಣೆಗೆ ಕರೆದುಕೊಂಡು ಹೋದಳು. ಅಲ್ಲಿ ಬಿಳಿಯ ಬಟ್ಟೆಯಿಂದ ಮುಚ್ಚಿದ್ದ ಇಬ್ಬರು ಮಕ್ಕಳ ಶವಗಳಿದ್ದವು. ಅಂದು ಸಂಜೆ ಮಕ್ಕಳು ಬೀದಿಯಲ್ಲಿ ಆಟವಾಡುತ್ತಿದ್ದಾಗ, ಒಂದು ಲಾರಿ ಅವರ ಮೈಮೇಲೆ ಹಾದು ಹೋಗಿತ್ತು. ರಬ್ಬಿಗೆ ದುಃಖವನ್ನು ತಡೆಯಲಾಗಿದೆ. ಗಟ್ಟಿಯಾಗಿ ಅಳಲುತೊಡಗಿದ.

"ಯಾಕೆ ಅಳುತ್ತಿದ್ದೀರಿ?" ರಬ್ಬಿಯ ಪತ್ನಿ ಕೇಳಿದಳು. ಒಬ್ಬನಿಗೆ ಸೇರಿದ ಒಡವೆಯನ್ನು ಹಿಂತಿರುಗಿಸುವಂತೆ ಅವನು ಕೇಳಿದಾಗ ಕೊಂಚವೂ ತಡಮಾಡದೆ ಕೊಟ್ಟುಬಿಡಬೇಕು ಎಂದು ನೀವೇ ಹೇಳಿದಿರಲ್ಲವೆ? ಈ ಎರಡು ಅಮೂಲ್ಯ ವಜ್ರಗಳನ್ನು ಭಗವಂತನು ನಮ್ಮ ಸುಪರ್ದಿನಲ್ಲಿ ಇರಿಸಿದ್ದ. ಯಾರು ಅವುಗಳನ್ನು ನಮಗೆ ನೀಡಿದ್ದರೋ ಆತನೇ ಹಿಂದಕ್ಕೆ ಪಡೆದಿದ್ದಾನೆ. ಇಷ್ಟೆಲ್ಲ ವರ್ಷಗಳು ಈ ಮಕ್ಕಳ ದೆಸೆಯಿಂದ ನಾವು ಪಡೆದ ಅತಿಶಯ ಆನಂದಕ್ಕಾಗಿ ನಾವು ಭಗವಂತನಿಗೆ ಕೃತಜ್ಞತೆಗಳನ್ನು ಸಲ್ಲಿಸೋಣ."

ರಬ್ಬಿ ಮತ್ತೆ ಹೇಳಿದ : "ನಿಜ ನಿಜ. ಅವನೇ ಕೊಟ್ಟವನು. ಅವನೇ ಹಿಂದಕ್ಕೆ ಪಡೆದುಕೊಂಡ. ಅವನ ನಾಮಕ್ಕೆ ಜಯ ಜಯ!"

ಅನೇಕರು ಅದೆಷ್ಟು ವಿದ್ಯಾವಂತರಾಗಿದ್ದರೂ, ಉನ್ನತ ಉದ್ಯೋಗ-ಸ್ತರದಲ್ಲಿದ್ದರೂ ತಮ್ಮ ಸಮೀಪ ಬಂಧುಗಳು ಯಾರಾದರೂ ವಿಧಿವಶರಾದಾಗ ಅದರಲ್ಲೂ ತಾರುಣ್ಯ ಅಥವಾ ಮಧ್ಯ ವಯಸ್ಸಿನಲ್ಲಿ ತೀರಿಕೊಂಡಾಗ, ತೀವ್ರವಾದ ದುಃಖ, ಖಿನ್ನತೆಯಿಂದ ಜರ್ಜರಿತರಾಗಿಬಿಡುತ್ತಾರೆ. ಜೆ.ಪಿ. ವಾಸ್ವಾನಿಯವರ 'ಟಿಕೆಟ್ ಟು ಹೆವನ್' ಗ್ರಂಥದಿಂದ ಆಯ್ದುಕೊಂಡ ಈ ಕಥೆ ಅಂಥವರ ಕಣ್ಣು ತೆರೆಸಬೇಕು. ಅವರಿಗೆ ತರ್ಕಬದ್ಧವಾದ ಸಾಂತ್ವನವನ್ನು ನೀಡಬೇಕು. ಪ್ರಸಿದ್ಧ ತತ್ವಜ್ಞಾನಿ ಜೆ. ಕೃಷ್ಣಮೂರ್ತಿಯವರು ಅಂಥ ಸಾವಿನ ಪ್ರಸಂಗಗಳನ್ನು ನಿಷ್ಠುರವಾಗಿಯೇ ವಿಮರ್ಶಿಸುತ್ತಾ ಜನರಿಗೆ ಹೀಗೆ



ಉಪದೇಶಿಸುತ್ತಿದ್ದರು : "ಯಾರೂ ಸತ್ತವರಿಗಾಗಿ ಅಳುವುದಿಲ್ಲ. ತಮಗಾಗಿಯೇ ಅಳುತ್ತಾರೆ." ಅದು ಹೆಚ್ಚೂ ಕಡಿಮೆ ಆತ್ಮಾನುಕಂಪವಷ್ಟೆ! ಬಹು ಅಮೂಲ್ಯವಾದ ಸಹವಾಸವನ್ನು ತಾನು ಕಳೆದುಕೊಂಡೆ, ಅದು ನನ್ನ ಮುಂದಿನ ಭವಿಷ್ಯದ ರಕ್ಷೆಯಾಗಿದ್ದ ವಿಮೆಯಾಗಿತ್ತು ಎಂಬ ಕಾರಣದಿಂದ ದುಃಖಿಸುತ್ತಾರೆ. ಎಲ್ಲ ದುಃಖವೂ ಸ್ವಾರ್ಥದ ಕಾರಣದಿಂದಲೇ ಉಂಟಾಗುತ್ತದೆ. ಇದಕ್ಕೆ ಪ್ರತಿಯಾಗಿ ರಮಣ ಮಹರ್ಷಿಗಳು ಹೇಳುವುದೇನೆಂದರೆ, ಆತ್ಮವು ತನ್ನ ದೇಹದ ಹೊರೆಯನ್ನು ಕಳಚಿಕೊಂಡಾಗ, ಅತ್ಯಂತ ಆನಂದದ ಸ್ತರಕ್ಕೆ ತೆರಳುತ್ತದೆ. ಎಷ್ಟೋ ಸಂದರ್ಭದಲ್ಲಿ ಮುಂದಿನ ಜನ್ಮದ ಉನ್ನತಿ ಸ್ಥಿತಿಗೆಂದೇ ಸಾವು ಸಂಭವಿಸುತ್ತದೆ. ಈ ಆನಂದ ಅಥವಾ ಉನ್ನತ ಸ್ಥಿತಿಗಾಗಿ ನಾವು ಸತ್ತ ವ್ಯಕ್ತಿಯ ಬಗೆಗೆ ದುಃಖಿಸುತ್ತಾ ಕೂಡಬೇಕೆ? - ಅಸೂಯೆ ಪಡಬೇಕೆ?

ನಾವು ಪಡೆದಿರುವ ಎಲ್ಲ ಎಲ್ಲವೂ ನಿಜವಾಗಿ ಭಗವಂತನಿಗೆ ಸೇರಿದುದು. ಈಶಾವಾಸ್ಯ ಉಪನಿಷತ್ತಿನಲ್ಲಿ ಇದನ್ನೇ ಸ್ಪಷ್ಟಪಡಿಸಲಾಗಿದೆ.[2]

ಪ್ರಪಂಚದ ಎಲ್ಲ ಸಂಪತ್ತು, ಗಳಿಕೆ, ಶಕ್ತಿ ಎಲ್ಲವೂ ಭಗವಂತನು ನಮಗೆ ನೀಡಿದ ಸಾಲವೇ ಆಗಿದೆ. ಆತನು ಏನನ್ನಾದರೂ ಹಿಂದಕ್ಕೆ ಪಡೆದರೆ ಅದನ್ನು ನಾವು ವಿರೋಧಿಸುವಂತಿಲ್ಲ, ಅದರ ಬಗೆಗೆ ಗೊಣಗುವಂತೆಯೂ ಇಲ್ಲ. ಭಗವಂತನು ಏನು ಮಾಡಿದರೂ ನಮ್ಮ ಮೇಲಿನ ಅನುಕಂಪದಿಂದಲೇ ಮಾಡುತ್ತಾನೆ. ಅಂತ್ಯದಲ್ಲಿ ಅದು ಸಂಬಂಧಪಟ್ಟ ವ್ಯಕ್ತಿಯ ಪ್ರಯೋಜನದಲ್ಲಿಯೇ ಪರ್ಯವಸಾನವಾಗುತ್ತದೆ.

✤ ✤ ✤

2. ಈಶಾವಾಸ್ಯಮಿದಗಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ಧನಂ ॥ (ಈಶ. ಉಪ. 1)

# 12. ಇದು ನಿಜವೋ ಅದು ನಿಜವೋ!

ರಾಜಾ ಜನಕನು ಮಿಥಿಲೆಯ ದೊರೆ. ಯಾವಾಗಲೂ ಅಧ್ಯಾತ್ಮದಲ್ಲೇ ಅವನಿಗೆ ಆಸಕ್ತಿ. ಒಂದು ದಿನ ಭೋಜನದ ನಂತರ ಹಾಸಿಗೆಯ ಮೇಲೆ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ಆತನ ಪತ್ನಿ ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದಳು. ಅದು ಪ್ರಶಾಂತವಾಗಿದ್ದ ದಿವಸ. ಅಕ್ಕಪಕ್ಕದ ರಾಜ್ಯಗಳ ಅರಸರೊಡನೆ ಜನಕನ ಸ್ನೇಹ ಅತ್ಯುತ್ತಮವಾಗಿಯೇ ಇದ್ದಿತು. ಅತ್ಯಂತ ಆತ್ಮೀಯವಾಗಿತ್ತು. ಇದ್ದಕ್ಕಿದ್ದಂತೆ ಹೊರಗಡೆ ಏನೋ ಗದ್ದಲ ಕೇಳಿಸಿತು. ಅವನ ರಾಜ್ಯದ ಸೇನಾಧಿಪತಿ ಮೈತುಂಬ ಗಾಯಗೊಂಡು ಓಡಿ ಬರುತ್ತಾ ಕೂಗಿದ : ''ಪ್ರಭುಗಳೇ, ಈ ರಹಸ್ಯ ಮಾರ್ಗದಿಂದ ತಪ್ಪಿಸಿಕೊಂಡು ಜೀವರಕ್ಷಣೆ ಮಾಡಿಕೊಳ್ಳಿ. ಶತ್ರುಗಳು ನಮ್ಮ ಮೇಲೆ ಆಕ್ರಮಣ ಮಾಡಿದ್ದಾರೆ. ರಾಜಧಾನಿಯನ್ನು ವಶಪಡಿಸಿಕೊಂಡುಬಿಟ್ಟಿದ್ದಾರೆ. ಓಡಿಬಿಡಿ.'' ರಾಜನು ಮೇಲೆ ಏಳುವ ಮೊದಲೇ ಶತ್ರು ಸೈನಿಕರು ಮುತ್ತಿಬಂದು ಆ ಸೇನಾಧಿಪತಿಯನ್ನೂ ಅವನ ಸಹಚರರನ್ನೂ ಸೆರೆಹಿಡಿದರು. ಜನಕನ ಕೈಗೆ ಕೋಳವನ್ನು ತೊಡಿಸಿ ಶತ್ರುರಾಜನ ಎದುರು ನಿಲ್ಲಿಸಿದರು. ಶತ್ರುರಾಜನು ಕಠೋರವಾದ ದನಿಯಲ್ಲಿ ಜನಕನನ್ನು ಕುರಿತು ನುಡಿದ: ''ನಾನು ನಿಮ್ಮನ್ನು ಕೊಲ್ಲಲು ಬಯಸುವುದಿಲ್ಲ. ಏಕೆಂದರೆ ಪ್ರಜೆಗಳನ್ನು ಅತ್ಯಂತ ಪ್ರೀತಿಯಿಂದ ರಕ್ಷಿಸುತ್ತಿದ್ದೀರಿ ಎಂಬ ಕೀರ್ತಿ



ನಿಮ್ಮದು. ಆದರೆ ಇಂದು ಮಧ್ಯರಾತ್ರಿಯೊಳಗೆ ನೀವು ರಾಜ್ಯದ ಗಡಿ ದಾಟಿ ಹೋಗಿಬಿಡಬೇಕು. ಬರಿಗಾಲಿನಲ್ಲೇ ಓಡಬೇಕು. ನಿಮ್ಮ ಪತ್ನಿ, ಆಸ್ಥಾನಿಕರು, ಪ್ರಜೆಗಳು ಯಾರೊಬ್ಬರನ್ನೂ ಭೇಟಿಯಾಗಬಾರದು. ಹಾದಿಯಲ್ಲಿ ಯಾರಿಗೂ ನಿಮ್ಮೊಡನೆ ಮಾತನಾಡುವ ಧೈರ್ಯವಿರದು. ಆಹಾರ-ನೀರು ಏನನ್ನೂ ಅವರು ನೀಡುವಂತಿಲ್ಲ. ಯಾವುದೇ ನೆರವು ನೀಡಿ ಜೀವಕ್ಕೆ ಆಪತ್ತು ತಂದುಕೊಳ್ಳುವಂತಿಲ್ಲ. ಮಧ್ಯರಾತ್ರಿಯೊಳಗೆ ರಾಜ್ಯದಿಂದ ಹೋಗದಿದ್ದರೆ, ನಿಮ್ಮನ್ನು ಕೊಂದುಬಿಡುವಂತೆ ನನ್ನ ಸೈನಿಕರಿಗೆ ಆಜ್ಞಾಪಿಸಲಾಗಿದೆ. ಜೀವ ಉಳಿಸಿಕೊಳ್ಳಲು ಈ ಕೂಡಲೆ ಹೊರಟು ಬಿಡಿ.''

ಜನಕ ಮಹಾರಾಜನು ಏದುಸಿರು ಬಿಡುತ್ತಾ ಹಸಿವು ಬಾಯಾರಿಕೆಯಿಂದ ಬಳಲುತ್ತಾ ಓಡಿಯೇ ಓಡಿದ. ಹಾದಿಯಲ್ಲಿ ಅವನನ್ನು ಕಾಣುತ್ತಿದ್ದಂತೆಯೇ ಜನರು ಮುಖ ತಿರುಗಿಸಿಕೊಂಡುಬಿಡುತ್ತಿದ್ದರು. ನೆರವು ನೀಡಲು ಯಾರೊಬ್ಬರೂ ಬರಲಿಲ್ಲ. ಕಡೆಗೆ ಅವನು ರಾಜ್ಯದ ಗಡಿದಾಟಿದಾಗ ಸರಿಯಾಗಿ ಮಧ್ಯರಾತ್ರಿಯಾಗಿತ್ತು. ತೀರ ಬಳಲಿ ಜನಕನು ಬಿದ್ದುಬಿಟ್ಟ. ಹೇಗೋ ಸಾವರಿಸಿಕೊಂಡು ಮೇಲೆದ್ದು ಧರ್ಮಶಾಲೆಯವರೆಗೆ ನಡೆದ - ಅದು ಗಡಿಯ ಸಮೀಪವೇ ಇದ್ದೀತು. ಹೊರಗಣ ಬಯಲಿನಲ್ಲಿಯೇ ಮಂಚದ ಮೇಲೆ ಮ್ಯಾನೇಜರ್ ಮಲಗಿದ್ದ. ಜನಕನು ಅವನನ್ನು ನಿದ್ರೆಯಿಂದ ಎಬ್ಬಿಸಿ ದೈನ್ಯತೆಯ ದನಿಯಲ್ಲಿ - ''ಸ್ವಾಮಿ, ನಾನೇ ರಾಜಾ ಜನಕ. ರಾಜ್ಯಭ್ರಷ್ಟನಾಗಿದ್ದೇನೆ. ತುಂಬ ಹಸಿವಿನಿಂದ ಬಳಲಿದ್ದೇನೆ. ನನ್ನ ಮೇಲೆ ಕರುಣೆ ತೋರಿ, ತಿನ್ನಲು ಏನಾದರೂ ನೀಡಿ.'' ಮ್ಯಾನೇಜರ್ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾ ಹೇಳಿದ : ''ಸ್ವಾಮಿ ಕ್ಷಮಿಸಿ. ಏನು ಅಂದರೆ ಏನೂ ಉಳಿದಿಲ್ಲ. ನೆನ್ನೆ ರಾತ್ರಿ ಅನ್ನ ಬೇಯಿಸಿದ ಆ ದೊಡ್ಡ ಪಾತ್ರೆಯಲ್ಲೂ ಈಗ ನೀರು ತುಂಬಿ ನಲ್ಲಿ ಕೆಳಗೆ ಇರಿಸಲಾಗಿದೆ - ಬೆಳಿಗ್ಗೆ ತೊಳೆಯಲು ಸುಲಭವಾಗಲಿ ಎಂದು.

ಪಾತ್ರೆಯ ಒಳಗೆ ಏನೋ ಅಲ್ಪ ಸ್ವಲ್ಪ ಅನ್ನ ಮೆತ್ತಿಕೊಂಡಿರಬಹುದು, ನೀರಿನಲ್ಲಿ ತೇಲುತ್ತಿರಲೂಬಹುದು. ತಾವೇ ಹೋಗಿ ನೋಡಿ, ಏನಾದರೂ ಅನ್ನದ ಅಗುಳು ಸಿಕ್ಕಿದರೆ ತೆಗೆದು ತಿನ್ನಲು ನನ್ನ ಅಭ್ಯಂತರ ಇಲ್ಲ!'' ಜನಕ ಮಹಾರಾಜನು ಪಾತ್ರೆಯ ಬಳಿಗೇ ಓಡಿ ಪಾತ್ರೆಯನ್ನು ತಡಕಿ ತಡಕಿ ಒಂದು ಮುಷ್ಟಿ ಅನ್ನವನ್ನು ಒಟ್ಟು ಮಾಡಿದ. ತುಂಬ ಖುಷಿಯಿಂದ ಅದನ್ನು ಬಾಯಿಗಿರಿಸಲು ತೊಡಗುತ್ತಿದ್ದಂತೆಯೇ ಎಲ್ಲಿಂದಲೋ ಎರಡು ನಾಯಿಗಳು ಅವನ ಮೇಲೆ ಎಗರಿ ಅವನ ಮುಷ್ಟಿಯಲ್ಲಿದ್ದ ಅನ್ನವನ್ನು ನೆಲಕ್ಕೆ ಬೀಳಿಸಿ ತಿನ್ನತೊಡಗಿದವು. ಜನಕನು ತುಂಬ ಹತಾಶೆಯಿಂದ ಗಟ್ಟಿಯಾಗಿ ದೈವವನ್ನು ಶಪಿಸತೊಡಗಿದ. ಒಂದೇ ಕ್ಷಣದಲ್ಲಿ ಈ ದೃಶ್ಯ ಮಾಯವಾಗಿ, ತಾನು ಹಾಸಿಗೆಯ ಮೇಲೆ ಸುಖವಾಗಿ ಮಲಗಿರುವುದನ್ನೂ ತನ್ನ ಪತ್ನಿ ಬೀಸಣಿಗೆಯಿಂದ ಬೀಸುತ್ತಿರುವುದನ್ನೂ ಕಂಡ. ಸೇವಕರೆಲ್ಲ ಸ್ವಲ್ಪ ದೂರದಲ್ಲಿ ನಿಂತಿದ್ದರು. ಓಹೋ! ಈ ವರೆಗೆ ಕಂಡದ್ದು ಬರಿಯ ಕನಸು ಎಂದು ರಾಜನಿಗೆ ಅರಿವಾಯಿತು. ಅದನ್ನು ಕಾಣುವಷ್ಟು ಕಾಲ ಎಲ್ಲವೂ ನಿಜವೇ ಆಗಿತ್ತು.

ಜನಕನು ತನ್ನ ಪತ್ನಿಯನ್ನೂ ಸುತ್ತ ನಿಂತವರನ್ನೂ ಕೇಳಿದ : ''ಇದು ನಿಜವೋ? ಅದು ನಿಜವೋ?'' ದೊರೆಯ ಭಯಂಕರವಾದ ಕನಸಿನ ಅನುಭವ ಅವರಾರಿಗೂ ಇರಲಿಲ್ಲವಾದುದರಿಂದ ಪ್ರಶ್ನೆಯ ಮಹತ್ವ ಯಾರಿಗೂ ಅರ್ಥವಾಗಲೇ ಇಲ್ಲ. ಜನಕನು ರಾಜ್ಯದಲ್ಲೆಲ್ಲ ಡಂಗುರ ಹೊಡೆಸಿ ಈ ಪ್ರಶ್ನೆಗೆ ಸಮಾಧಾನಕರ ಉತ್ತರ ನೀಡಿದವನಿಗೆ ಬಹು ಸಂಪತ್ತು-ಆಸ್ತಿಯನ್ನು ಉಡುಗೊರೆಯಾಗಿ ಕೊಡಲಾಗುವುದು ಎಂದು ಘೋಷಿಸುವಂತೆ ಮಂತ್ರಿಗೆ ಆಜ್ಞಾಪಿಸಿದ. ಅನೇಕರು ಮುಂದೆ ಬಂದರು. ಕೆಲವರು 'ಇದು ನಿಜ' ಎಂದರು. ಇನ್ನು ಕೆಲವರು 'ಅದು ನಿಜ' ಎಂದರು. ಇದು ಅಥವಾ ಅದು ಎಂದರೆ ಯಾವುದು ಎಂದು ಯಾರಿಗೂ ತಿಳಿದಿರಲಿಲ್ಲ! ಹೀಗಾಗಿ ಯಾರೊಬ್ಬರೂ ಹೇಗೆ ಇದು ಅದು ನಿಜ ಎಂದು ವಿವರಿಸಲು ಅಸಮರ್ಥರಾದರು.



ಒಂದು ದಿನ ಜನಕ ಮಹಾರಾಜನು ಒಂದು ವಿದ್ವತ್ ಸಭೆಯಲ್ಲಿ ಅದ್ವೈತ ವೇದಾಂತದ ಹಲವು ಸೂಕ್ಷ್ಮಗಳನ್ನು ಪ್ರಸಿದ್ಧ ಪಂಡಿತರು ಹಾಗೂ ತತ್ತ್ವಜ್ಞಾನಿಗಳಾದ ಸಂತರೊಡನೆ ಚರ್ಚಿಸುತ್ತಾ ಕುಳಿತಿದ್ದ. ಆಗ ಅಷ್ಟಾವಕ್ರ ಎಂಬ ಮಹಾನ್ ಸಂತನು ಸಭೆಯನ್ನು ಪ್ರವೇಶಿಸಿದ. ಅವನ ಶರೀರದ ಎಂಟು ಭಾಗಗಳೂ ವಕ್ರವಾಗಿ ಬಾಗಿದ್ದುದರಿಂದ ಅವನ ಬೆನ್ನೂ ಗೂನಾಗಿದ್ದುದರಿಂದ ಅವನನ್ನು ಹಾಗೆ ಕರೆಯುತ್ತಿದ್ದರು. ಅಂಥ ಅಪರೂಪದ ವ್ಯಕ್ತಿಯನ್ನು ನೋಡುತ್ತಲೇ ತತ್ತ್ವಜ್ಞಾನಿಗಳು ಪಂಡಿತರೂ ಗಹಗಹಿಸಿ ನಗತೊಡಗಿದರು. ಅವರ ನಗೆಯಲ್ಲಿ ರಾಜನೂ ಪಾಲುಗೊಂಡ. ಅಷ್ಟಾವಕ್ರನು ತಾನು ನಡೆದು ಬರುತ್ತಿದ್ದ ದಾರಿಯಲ್ಲಿ ನಿಂತು ಎಲ್ಲರಿಗಿಂತ ಗಟ್ಟಿಯಾಗಿ ತಾನೇ ನಗತೊಡಗಿದ. ಜನಕನು ಅವನನ್ನು ಕುರಿತು – ''ಅಯ್ಯಾ ಸಂತನೇ, ನಾವೆಲ್ಲ ನಿನ್ನ ವಕ್ರ ಸ್ವರೂಪನನ್ನು ಕಂಡು ನಗುತ್ತಿದ್ದೆವು. ಆದರೆ ನೀನೂ ಏಕೆ ನಗುತ್ತಿದ್ದೀಯೆ?'' ಎಂದು ಕೇಳಿದ. ವ್ಯಂಗ್ಯದ ನಗೆಯನ್ನು ತುಟಿಗಳಲ್ಲಿ ಸೂಚಿಸುತ್ತಾ ಅಷ್ಟಾವಕ್ರನು ಉತ್ತರಿಸಿದ : ''ಮಹಾಪ್ರಭು, ಪ್ರಕಾಂಡ ಪಂಡಿತರು, ವಿವೇಕಿಗಳು ಹಾಗೂ ಅಧ್ಯಾತ್ಮದ ಮಹಾನ್ ಸಾಧಕನಾದ ದೊರೆ, ಇಂಥವರನ್ನೆಲ್ಲ ಭೇಟಿ ಮಾಡುವ ಹಿರಿಯ ಹಂಬಲದಿಂದ ನಾನು ಈ ಸಭೆಗೆ ಬಂದೆ. ಆದರೆ ಕೇವಲ ಚರ್ಮಚಕ್ಕಳಗಳನ್ನು ತಿಳಿದ ಚಮ್ಮಾರರ ಸಭೆಗೆ ಹೇಗೋ ಬಂದುಬಿಟ್ಟೆ. ಚರ್ಮದ ಒಳಹೊಕ್ಕು ನೋಡುವ ಪ್ರತಿಭೆ ಯಾರಲ್ಲೂ ಇಲ್ಲವಲ್ಲಾ ಎಂದು ಅರಿತೆ. ನನ್ನ ನಗುವನ್ನು ಹಾಗೂ ಮುರ್ಖತನವನ್ನು ಕಂಡು ನಗುತ್ತಿದ್ದೇನೆ. ದಯಮಾಡಿ ಕ್ಷಮಿಸಿ.'' ಈ ನೇರವಾದ ಉತ್ತರವನ್ನು ಕೇಳಿ ದೊರೆಯೂ ಸಭಿಕರೂ ಬೆಚ್ಚಿ ಬಿದ್ದು ಮೌನದಲ್ಲಿ ಮುಳುಗಿಬಿಟ್ಟರು.

ಮಹಾರಾಜನೇ ಈಗ ಅಷ್ಟಾವಕ್ರನ ಕ್ಷಮೆಕೋರಿ ಆತನು ಸಭೆಗೆ ಬಂದ ನಿಜವಾದ ಉದ್ದೇಶವನ್ನು ಕೇಳಿದ.

ಅಷ್ಟಾವಕ್ರನು ತನ್ನ ಪರಿಚಯವನ್ನು ಹೇಳಿಕೊಂಡು ನುಡಿದ : "ಓ, ಮಹಾರಾಜರೇ, ನಾನು ತಮ್ಮ ಪ್ರಶ್ನೆಗೆ ಉತ್ತರ ನೀಡಲು ಬಂದಿದ್ದೇನೆ. ಇದೂ ಸತ್ಯವಲ್ಲ, ಅದೂ ಸತ್ಯವಲ್ಲ. ಭೂತ-ಭವಿಷ್ಯತ್-ವರ್ತಮಾನ ಎಲ್ಲಾ ಕಾಲದಲ್ಲೂ ಯಾವ ಬದಲಾವಣೆ ಹೊಂದದೇ ಸ್ಥಿರವಾಗಿರುವುದೋ ಅದೊಂದೇ ನಿಜವಾದದ್ದು (ತ್ರಿಕಾಲೇಷು ಅಬಾಧಿತಂ ವಸ್ತು).

ತಾವು ಜೀವಭಯದಿಂದ ಓಡುತ್ತಿದ್ದುದಾಗಲಿ, ಅನ್ನದ ಪಾತ್ರೆಯಲ್ಲಿ ಮುಷ್ಟಿ ಅನ್ನಕ್ಕೆ ತಡಕಾಡುತ್ತಿದ್ದುದಾಗಲಿ, ಈಗ ಕಾಣುತ್ತಿದೆಯೆ? 'ಇಲ್ಲ' ಎಂಬುದೇ ಉತ್ತರವಲ್ಲವೆ? ಹತ್ತು ವರ್ಷಗಳ ಮೊದಲು ಆ ದೃಶ್ಯವಿತ್ತೆ? ಪುನಃ 'ಇಲ್ಲ' ಎಂಬುದೇ ಉತ್ತರವಷ್ಟೆ? ಹಿಂದೆ ಇಲ್ಲದ್ದು, ಈಗ ಇಲ್ಲದಿರುವುದು ನಿಜವಲ್ಲ - ಅಂಥದು ಎಂದೂ ಸತ್ಯವಾಗದು. ನೀವು ಪಲ್ಲಂಗದ ಮೇಲೆ ಮಲಗಿ ಮಹಾರಾಣಿಯವರು ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದುದೂ ಹಾಗೆಯೇ. ಆ ದೃಶ್ಯ ಈಗ ಇಲ್ಲ. ನೂರು ವರ್ಷಗಳ ಹಿಂದೆ ಅದು ಇರಲಿಲ್ಲ. ಆದುದರಿಂದ ಈ ಎರಡು ದೃಶ್ಯಗಳೂ ಅಸತ್ಯವೇ. ಆದರೆ ಈ ದೃಶ್ಯಗಳಿಗೆ ಸಾಕ್ಷಿಯಾಗಿದ್ದ ದ್ರಷ್ಟಾರನಾದ ನಿನ್ನ ನಿಜ ಸ್ವರೂಪವೊಂದೇ ಎಂದೂ ಬದಲಾಗದುದು. ಅದೊಂದೇ ಸತ್ಯ. ಅದೊಂದನ್ನೆ ತಿಳಿದು ಆನಂದದಲ್ಲಿರು."

✤ ✤ ✤



# 13. ಭಗವಂತನನ್ನು ಮೋಸಗೊಳಿಸಲು ಸಾಧ್ಯವಿಲ್ಲ !

ಆಂಧ್ರಪ್ರದೇಶದ ತಿರುಪತಿಯಲ್ಲಿ ಟೈಫಾಯ್ಡ್ ಜ್ವರದಿಂದ ನರಳುತ್ತಿದ್ದ ಒಬ್ಬ ರೈತನಿದ್ದ. ಆ ಕಾಲದಲ್ಲಿ ಈ ವ್ಯಾಧಿಗೆ ಯಾವ ಔಷಧವೂ ಇರಲಿಲ್ಲ. ಭಗವಂತ ಬಾಲಾಜಿ (ತಿರುಪತಿಯ ಪ್ರಸಿದ್ಧ ಅಧಿದೈವ) ಯನ್ನು ಪ್ರಾರ್ಥಿಸಿದ - "ಓ ಪ್ರಭು, ಇನ್ನೆರಡು ದಿನಗಳಲ್ಲಿ ನಾನು ಈ ರೋಗದಿಂದ ಮುಕ್ತನಾಗಿ ಹಿಂದಿನಂತೆ ಆರೋಗ್ಯವಂತನಾದರೆ, ನನ್ನ ಬಳಿ ಇರುವ ಒಂದೇ ಎತ್ತನ್ನು ಮಾರಿ ಬಂದುದೆಲ್ಲವನ್ನೂ ನಿನ್ನ ಹುಂಡಿಯಲ್ಲಿ ಹಾಕಿಬಿಡುತ್ತೇನೆ. ಈ ಸಲ ದಯಮಾಡಿ ನನ್ನ ಕೋರಿಕೆಯನ್ನು ಮನ್ನಿಸು. ನಿನ್ನನ್ನು ಎಂದೆಂದಿಗೂ ಮರೆಯುವುದಿಲ್ಲ. ದೇವರ ದಯೆಯಿಂದ ಎರಡೇ ದಿನದಲ್ಲಿ ಅವನು ಪೂರ್ಣವಾಗಿ ಗುಣ ಹೊಂದಿದ. ಅವನ ಬಳಿ ಇದ್ದ ಎತ್ತು ನಾಲ್ಕು ಸಾವಿರ ರೂಪಾಯಿ ಬೆಲೆಬಾಳುತ್ತಿತ್ತು. ಬಡ ರೈತನಿಗೆ ಅದನ್ನು ಮಾರಲು ಇಷ್ಟವಾಗಲಿಲ್ಲ. ಅವನಿಗೊಂದು ಉಪಾಯ ಹೊಳೆಯಿತು. ಇಪ್ಪತ್ತು ರೂ. ಬೆಲೆಯ ಒಂದು ಕೋಳಿ ಪಿಳ್ಳೆ ಅವನ ಬಳಿ ಇತ್ತು. ಬೀದಿಯಲ್ಲಿ ಹಾಗೂ ಸಂತೆ ಮೈದಾನದಲ್ಲಿ ಒಂದು ಜಾಹೀರಾತು ನೀಡಿದ : "ಲಾಭದಾಯಕ ವ್ಯಾಪಾರ ! ಕೇವಲ ಒಂದು ರೂಪಾಯಿಗೆ ಒಂದು ಎತ್ತು !! 3000 ರೂ.ಗಳಿಗೆ ಒಂದು ಕೋಳಿ ಪಿಳ್ಳೆ !

ಎರಡನ್ನೂ ಒಟ್ಟಿಗೆ ಕೊಂಡುಕೊಳ್ಳಬೇಕು ! ಎರಡನ್ನೂ ಪ್ರತ್ಯೇಕವಾಗಿ ಮಾರುವುದಿಲ್ಲ.'' ಮಾರಾಟದ ಬೆಲೆ ಎರಡರಿಂದ 3001 ರೂಪಾಯಿ ಮಾತ್ರ. ಆದುದರಿಂದ, ಎತ್ತಿನ ಬೆಲೆ 4000 ಆಗಿದ್ದುದರಿಂದ, ಒಬ್ಬ ವ್ಯಾಪಾರಿ ಈ ಎರಡನ್ನೂ ಒಟ್ಟಾಗಿ ಕೊಂಡುಬಿಟ್ಟ. ಎತ್ತಿನ ಬೆಲೆ ಒಂದು ರೂಪಾಯಿ ಎಂದು ರೈತನು ಪ್ರಕಟಿಸಿದ್ದನಷ್ಟೆ? ಅವನು ತಕ್ಷಣ ಒಂದು ರೂಪಾಯಿ ನಾಣ್ಯವನ್ನು ಬಾಲಾಜಿ ದೇವರ ಹುಂಡಿಯಲ್ಲಿ ಹಾಕಿ ಕೈತೊಳೆದುಕೊಂಡು ಬಿಟ್ಟ. ತನ್ನ ಗದ್ದೆಗೆ ಮತ್ತೊಂದು ಎತ್ತನ್ನು ಖರೀದಿಸಿದ. ದುರದೃಷ್ಟದಿಂದ ಆ ಎತ್ತು ಯಾವುದೋ ವಿಚಿತ್ರ ರೋಗದಿಂದ ಎರಡೇ ತಿಂಗಳಲ್ಲಿ ಸತ್ತುಹೋಯಿತು. ನೋಡಿದಿರಾ ! ದೇವರನ್ನು ವಂಚಿಸಲು ಯಾರೂ ಯತ್ನಿಸಬಾರದು. ಪೂರೈಸಲಾಗದ ಹರಕೆಯನ್ನು ಆತುರಾತುರವಾಗಿ ಎಂದೂ ಮಾಡಿಕೊಳ್ಳಬಾರದು. ಹಾಗೆ ಮಾಡಿದಾಗ ಆತ ಭಗವಂತನಿಗೇ ಶರಣಾಗಿ, ತನ್ನನ್ನು ಹರಕೆಯಿಂದ ಬಿಡುಗಡೆಗೊಳಿಸುವಂತೆ ಪ್ರಾರ್ಥಿಸಬೇಕು. ಕ್ಷಮೆ ಕೋರಬೇಕು. ದೇವರು ದಯಾಮಯ. ಎಲ್ಲ ಪ್ರಾಮಾಣಿಕ ಪ್ರಾರ್ಥನೆಗೂ ಓಗೊಡುತ್ತಾನೆ.

✤ ✤ ✤



# 14. ಭಗವಂತನ ನಾಮವು ಅಷ್ಟು ಅಗ್ಗವಲ್ಲ

ರೂಪಾ ಎಂಬ ಶ್ರೀಮಂತಳು ಕುಟುಂಬದ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುತ್ತಿದ್ದ ತನ್ನ ಮೂವರು ಮಕ್ಕಳೊಡನೆ ಮೈಸೂರಿನಲ್ಲಿ ವಾಸಿಸುತ್ತಿದ್ದಳು. ತನ್ನ ಬದುಕಿನ ಉದ್ದಕ್ಕೂ ಅವಳಿಗೆ ಭಗವಂತನ ಅವಶ್ಯಕತೆ ಬೇಕೇಬೇಕು ಎನಿಸಲೇ ಇಲ್ಲ. ಅವಳ ಮನೆಯಲ್ಲಿ ಎಲ್ಲೂ ಯಾವುದೇ ದೇವರ ವಿಗ್ರಹವಾಗಲೀ ಚಿತ್ರವಾಗಲೀ ಇರಲಿಲ್ಲ. ಆಕೆಗೆ ಎಂಬತ್ತು ವರ್ಷ ವಯಸ್ಸಾಗಿತ್ತು. ಒಂದು ದಿನ ಕಾಯಿಲೆ ಮಲಗಿದಳು. ಪರೀಕ್ಷಿಸಿದ ವೈದ್ಯರು ಇನ್ನು ನಾಲ್ಕೈದು ಗಂಟೆಗಳಿಗೂ ಹೆಚ್ಚು ಕಾಲ ಆಕೆ ಬದುಕುವುದಿಲ್ಲ ಎಂದು ಹೇಳಿಬಿಟ್ಟರು. ಅವಳಿಗಿದ್ದ ಒಬ್ಬಳೇ ಗೆಳತಿ ಎಂದರೆ ನೆರೆಮನೆಯಲ್ಲಿದ್ದ ರಜನಿ ಎಂಬ ಬಾಲ್ಯದ ಸಂಗಾತಿ. ಆಕೆಯಾದರೋ ತುಂಬಾ ದೈವಭಕ್ತೆ. ದಿನಕ್ಕೆ ಎರಡುಬಾರಿ ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದಳು. ಭಗವಂತನ ನಾಮವನ್ನು ಮನದಲ್ಲಿ ಜಪಿಸುತ್ತಲೇ ಇದ್ದಳು. ತನ್ನ ಗೆಳತಿ ರೂಪಾ ಸಾಯುವ ಮೊದಲು ಒಮ್ಮೆಯಾದರೂ ಭಗವಂತನನ್ನು ಸ್ಮರಿಸುವಂತೆ ಮಾಡಬೇಕೆಂಬುದೇ ಅವಳ ಪ್ರಾಮಾಣಿಕ ಹಂಬಲ. ಹಾಗೆ ಮಾಡುವಂತೆ ನೇರವಾಗಿ ಹೇಳಿದರೆ ರೂಪಾ ತನ್ನ ಮಾತನ್ನು ಖಡಾಖಂಡಿತವಾಗಿ ನಿರಾಕರಿಸಿ ಬಿಡುತ್ತಾಳೆ – ''ಬದುಕಿರುವಾಗಲೇ ನನಗೆ ದೇವರು ಬೇಕಿಲ್ಲ ಎಂದಮೇಲೆ, ಸತ್ತ ನಂತರ ಅವನ ಅವಶ್ಯಕತೆ ಏನಿದೆ?'' ಎನ್ನುತ್ತಾಳೆ. ಈಗ

ರಜನಿ, ಮೃತ್ಯುಮುಖದಲ್ಲಿರುವ ತನ್ನ ಗೆಳತಿಯ ಪಕ್ಕದಲ್ಲಿ ಹೋಗಿ ಕುಳಿತಳು. ರೂಪಾಳ ಕಣ್ಣುಗಳು ಅರ್ಧಮುಚ್ಚಿದ್ದವು. ಅವಳ ಹಿರಿಯ ಮಗನನ್ನು ಹತ್ತಿರ ಕರೆದು ಇವನ್ಯಾರು ಹೇಳು ಎಂದು ಕೇಳಿದಳು ರಜನಿ. ''ಇವನು ನನ್ನ ಹಿರಿಯ ಮಗ ಹಿಟ್ಲರ್!'' ಎಂದು ಸಂಕೋಚವಿಲ್ಲದೆ ರೂಪಾ ಹೇಳಿಬಿಟ್ಟಳು. ಹೀಗೆಯೇ ಎರಡನೆಯ ಮಗನನ್ನು ಕುರಿತು ಕೇಳಿದಾಗ - ''ಇವನು ನನ್ನ ಮಗ ಬಟ್ಲರ್'' ಎಂದಳು. ಕಡೆಯ ಮಗನ ಹೆಸರು ಶ್ರೀರಾಮ್ ಎಂದಿತ್ತು. ಅವನನ್ನು ಅಮ್ಮನ ಬಳಿ ಕರೆತಂದಾಗ, ''ಓಹ್! ಇವನು ನನ್ನ ಕಡೆಯ ಮಗ'' ಎಂದುಬಿಟ್ಟಳು! ಹೇಳುತ್ತಿದ್ದಂತೆಯೇ ಕೊನೆಯ ಉಸಿರು ಎಳೆದಳು. ಅವಳ ತುಟಿಗಳಿಂದ ಶ್ರೀರಾಮ ಎಂಬ ಶಬ್ದ ಹೊರಬೀಳಲೇ ಇಲ್ಲ !

ಬದುಕಿನ ಅಂತಿಮ ಕ್ಷಣದಲ್ಲಾದರೂ ಭಗವಂತನ ಹೆಸರನ್ನು ಉಚ್ಚರಿಸಿದರೆ, ದೈವಕಾರುಣ್ಯ, ಅನುಗ್ರಹದ ಫಲ ದೊರೆಯುತ್ತದೆ. ಆದರೆ ಜೀವಮಾನದ ಉದ್ದಕ್ಕೂ ನಿರಂತರವಾಗಿ ಭಗವಂತನನ್ನು ಸ್ಮರಿಸದಿದ್ದರೆ, ಕಡೆಯ ಕ್ಷಣದಲ್ಲಿ ಆತನ ಹೆಸರು ಬಾಯಲ್ಲಿ ಹೊರಡುವುದೇ ಇಲ್ಲ !

✤ ✤ ✤



# 15. ಪದ್ಮಪಾದರ ಕಥೆ

ಪದ್ಮಪಾದರು ಶ್ರೀ ನರಸಿಂಹನ ದೊಡ್ಡ ಭಕ್ತರು. ಬಾಲ್ಯದಿಂದಲೇ ಅವರು ನರಸಿಂಹ ಹಾಗಿದ್ದರು. ದಿನಕ್ಕೆ ಹದಿನೆಂಟು ಗಂಟೆಗಳ ಕಾಲ ಮಂತ್ರವನ್ನು ಜಪಿಸುತ್ತಿದ್ದರು. ಎಷ್ಟೋ ವರುಷಗಳ ನಂತರವೂ ಅವರಿಗೆ ನರಸಿಂಹನ ದರ್ಶನ ಲಭಿಸಿರಲಿಲ್ಲ. ಅವರಿಗೆ ತುಂಬ ನಿರಾಸೆಯಾಯಿತು. ಪ್ರಾಣವನ್ನೇ ತ್ಯಜಿಸಿಬಿಡಬೇಕು ಎನಿಸಿಬಿಟ್ಟಿತು. ಒಂದು ದಿನ ಬೆಳಗಿನ ಜಾವದಲ್ಲಿ ಸಮೀಪದಲ್ಲೇ ಇದ್ದ ದಟ್ಟವಾದ ಕಾಡಿಗೆ ಓಡಿದರು. ಬಳ್ಳಿಗಳನ್ನೆಲ್ಲ ಹೆಣೆದು ಒಂದು ಕುಣಿಕೆಯನ್ನು ತಯಾರಿಸಿದರು. ಅದೇ ಕ್ಷಣಕ್ಕೆ ಕಾಡಿನಲ್ಲಿ ಮೂರು ನಾಲ್ಕು ತಲೆಮಾರಿನಿಂದ ವಾಸವಿದ್ದ ಬೇಡನೊಬ್ಬನು ಆ ಸ್ಥಳಕ್ಕೆ ಬಂದು ಈ ತರುಣ ಬ್ರಾಹ್ಮಣನನ್ನು ಕುರಿತು ಇಂಥ ಹುಚ್ಚು ಸಾಹಸಕ್ಕೆ ತೊಡಗಲು ಕಾರಣವೇನು ಎಂದು ಪ್ರಶ್ನಿಸಿದನು. ಈ ಅವಿದ್ಯಾವಂತನಿಗೆ ದೇವರ ಕಲ್ಪನೆಯಾದರೂ ಎಲ್ಲಿ ಬರಬೇಕು ಎಂದುಕೊಂಡ ಪದ್ಮಪಾದರು, ತಾವು ಈ ಕಾಡಿನಲ್ಲಿ ಶರೀರದ ತಲೆಭಾಗ ಸಿಂಹದಂತೆಯೂ, ಕೆಳಭಾಗ ಮನುಷ್ಯನಂತೆಯೂ ಇರುವ ವಿಚಿತ್ರ ಪ್ರಾಣಿಯನ್ನು ಹುಡುಕುತ್ತಿರುವುದಾಗಿಯೂ ಈ ವರೆಗೂ ಅದು ದೊರಕದೆ ಇರುವುದರಿಂದ ಹತಾಶನಾಗಿ ಆತ್ಮಹತ್ಯೆಗೆ ತೊಡಗಿರುವುದಾಗಿಯೂ ಹೇಳಿದರು. ಆ ಕಾಡಿನ ಮೂಲೆ

ಮೂಲೆಗಳ ಪರಿಚಯವಿದ್ದ ಬೇಟೆಗಾರನು ಅಂತಹ ಪ್ರಾಣಿ ನಿಜಕ್ಕೂ ಈ ಕಾಡಿನಲ್ಲಿ ಇಲ್ಲವೇ ಇಲ್ಲ ಎಂದು ನುಡಿದನು. ಆದರೆ ಅಷ್ಟೇ ಹಠದಿಂದ ಪದ್ಮಪಾದರು ಅದು ಆ ಕಾಡಿನಲ್ಲೇ ಇರುವುದು ನಿಶ್ಚಯ ಎಂದರು. ಕಡೆಗೆ ಬೇಟೆಗಾರನು ಅವರನ್ನು ಹೀಗೆ ಪ್ರಾರ್ಥಿಸಿದನು : ''ಸ್ವಾಮಿ, ಹಾಗಿದ್ದರೆ ಸಂಜೆ 6 ಗಂಟೆವರೆಗೆ ದಯಮಾಡಿ ಇಲ್ಲಿಯೇ ಕಾದಿರಿ. ಖಂಡಿತಾ ಈ ಕಾಡಿನಲ್ಲಿ ಅಂಥ ಪ್ರಾಣಿ ಇರುವುದಾದರೆ ಕತ್ತಲಾಗುವುದರ ಒಳಗೆ ಹುಡುಕಿ ತರುತ್ತೇನೆ. ಅದು ಸಾಧ್ಯವಾಗದಿದ್ದರೆ ನಾನೇ ಪ್ರಾಣ ಕಳೆದುಕೊಳ್ಳುತ್ತೇನೆ. ಅನಂತರ ತಾವು ಮನಬಂದಂತೆ ಮಾಡಬಹುದು.'' ಹೀಗೆ ಹೇಳಿ ಅವನು ಹೊರಟು ಹೋದನು.

ಹಸಿದು ಬಾಯಾರುತ್ತಾ ಬೇಟೆಗಾರನು ಕಾಡಿನ ಮೂಲೆ ಮೂಲೆಗಳಲ್ಲಿ ಆ ವಿಚಿತ್ರ ಪ್ರಾಣಿಯನ್ನು ಹುಡುಕತೊಡಗಿದನು. ಅದರ ಚಿಂತೆಯನ್ನು ಬಿಟ್ಟು ಬೇರೇನನ್ನೂ ಅವನು ಯೋಚಿಸಲಿಲ್ಲ. ಇಡಿಯ ಕಾಡನ್ನೇ ಜಾಲಾಡಿ ಬಂದರೂ ಸಂಜೆ 5.30 ರವರೆಗೂ ಆ ಪ್ರಾಣಿ ಸಿಗಲೇ ಇಲ್ಲ. ಬೇಟೆಗಾರನು ಈಗ ಒಂದಿಷ್ಟು ಒಣಗಿದ ಕಟ್ಟಿಗೆಯನ್ನೂ ಬಳ್ಳಿಯನ್ನೂ ಒಟ್ಟು ಮಾಡಿದನು. ಭಾರಿ ಬೆಂಕಿ ಹೊತ್ತಿಸಿದನು. ಅದರಲ್ಲಿ ಇನ್ನೇನು ಹಾರಿಕೊಳ್ಳಬೇಕು ಎನ್ನುವಷ್ಟರಲ್ಲಿ ಭಯಂಕರವಾದ ಸಿಂಹ ಗರ್ಜನೆ ಕೇಳಬಂದಿತು. ಅರ್ಧ ಮನುಷ್ಯ, ಇನ್ನರ್ಧ ಸಿಂಹದ ಸ್ವರೂಪ ಗೋಚರಿಸಿತು. ತನ್ನ ಬಳಿ ಇದ್ದ ಹಗ್ಗದಿಂದ ಬೇಟೆಗಾರನು ಆ ಪ್ರಾಣಿಯನ್ನು ಹಿಂಗಟ್ಟು ಮುಂಗಟ್ಟು ಕಟ್ಟಿ, ಉದ್ವೇಗದಿಂದ ಕಾಯುತ್ತಿದ್ದ ಪದ್ಮಪಾದರ ಬಳಿಗೆ ಎಳೆದುಕೊಂಡು ಹೋದನು. ''ಓ ಪೂಜ್ಯ ಬ್ರಾಹ್ಮಣ, ಈ ಪುಂಡನನ್ನು ಕಡೆಗೂ ಕಟ್ಟಿ ತಂದಿದ್ದೇನೆ. ಇವನನ್ನೇ ಅಲ್ಲವೇ ತಾವು ಹುಡುಕುತ್ತಿದ್ದುದು ? ಇಲ್ಲಿದ್ದಾನೆ ನೋಡಿ'' ಎಂದನು. ಪದ್ಮಪಾದರು ಹಗ್ಗದಲ್ಲಿ ಎಳೆ ತಂದ ಏನೋ ಭಾರಿ ಪ್ರಾಣಿಯನ್ನೇನೋ ಕಂಡರು, ಆದರೆ ಹೀಗೆ ಸ್ವಯಂ ಬಂಧಿತನಾದ ಪ್ರಭು ನರಸಿಂಹನನ್ನು ಗುರುತಿಸಲೇ ಇಲ್ಲ! ಕಣ್ಣು ತುಂಬ ಕಂಬನಿ



ತುಂಬಿಕೊಂಡು – ''ಓ ಪ್ರಭು, ಈ ಅವಿದ್ಯಾವಂತ ಬೇಟೆಗಾರನಿಗೆ ದರ್ಶನವಿತ್ತೆ ! ಈ ಬೇಡನಿಗೆ ತೋರಿದ ನಿನ್ನ ಸ್ವರೂಪವನ್ನು ನನಗೆ ಕಾಣಿಸದಷ್ಟು ಪಾಪಿಯೇ ನಾನು ?'' ಎಂದು ರೋದಿಸಿದರು. ಆ ಕೂಡಲೆ ಒಂದು ಆಕಾಶವಾಣಿ ಮೊಳಗಿತು : ''ಈ ಬೇಡನು ಏಕಾಗ್ರಚಿತ್ತದಿಂದ, ನನ್ನ ಬ್ರಾಹ್ಮಣ ಭಕ್ತನಿಗೆ ಸಹಾಯ ಮಾಡುವ ಏಕಮಾತ್ರ ಉದ್ದೇಶದಿಂದ, ಯಾವ ಸ್ವಾರ್ಥವೂ ಇಲ್ಲದೇ ನನ್ನನ್ನು ಹುಡುಕಿದನು. ಆದುದರಿಂದ ನಾನು ಅವನಿಗೆ ದರ್ಶನ ನೀಡಲೇಬೇಕಾಯಿತು. ಆದರೆ ನನ್ನ ಪೂರ್ಣಾನುಗ್ರಹವನ್ನು ನೀನು ದೊರಕಿಸಿಕೊಳ್ಳುವ ಕಾಲ ಇನ್ನೂ ಪ್ರಾಪ್ತವಾಗಿಲ್ಲ. ಆದರೆ ಸದಾಕಾಲ ನಾನು ನಿನ್ನ ಬಳಿಯಲ್ಲಿಯೇ ಇರುವೆ. ಅವಶ್ಯಕತೆ ಒದಗಿದಾಗಲೆಲ್ಲ ನಿನ್ನ ಸಹಾಯಕ್ಕೆ ಧಾವಿಸುವೆ. ಈ ಬೇಡನ ಬಗೆಗೆ ನಿನಗೆ ಅಸೂಯೇ ಬೇಡ ! ಅವನೂ ನನ್ನ ಸ್ವರೂಪವನ್ನು ಇನ್ನೂ ಗುರುತಿಸದುದರಿಂದ, ಕೇವಲ ನನ್ನನ್ನು ನೋಡಿದುದರಿಂದ ಯಾವ ಪ್ರಯೋಜನವೂ ಇಲ್ಲ''.

ಬೇಡನು ಕಾಡಿನ ಮತ್ತೊಂದು ಭಾಗಕ್ಕೆ ಹೊರಟುಹೋದನು. ನನ್ನ ಸ್ವರೂಪವನ್ನು ಅವನು ಗುರುತಿಸಲಿಲ್ಲ ಎಂಬ ಆಕಾಶವಾಣಿಯನ್ನೇ ಮತ್ತೆ ಮತ್ತೆ ಚಿಂತಿಸತೊಡಗಿದನು. ಇದೆಲ್ಲ ಬಹುಶಃ ದೇವರ ಲೀಲೆ ಎಂಬುದಷ್ಟೇ ಅವನಿಗೆ ಅರಿವಾಯಿತು. ಪ್ರಾಯಶಃ ದೇವರೇ ಈ ರೂಪದಲ್ಲಿ ಬಂದಿರಬಹುದು, ಪದ್ಮ ಪಾದರಂತಹ ಪೂಜ್ಯರ ಸಹವಾಸ ದೊರಕಿದುದರಿಂದಲೇ ಇದು ಸಾಧ್ಯವಾಯಿತು ಎಂದುಕೊಂಡನು. ತನ್ನ ಮೂರ್ಖತನಕ್ಕೆ ಕಂಬನಿ ಸುರಿಸಿದನು. ತಾನು ಕುಳಿತಲ್ಲಿಂದ ಸ್ವಲ್ಪವೂ ಕದಲುವುದಿಲ್ಲ, ಭಗವಂತನ ದರ್ಶನವಾಗುವವರೆಗೂ ಅವನನ್ನು ಹುಡುಕುತ್ತಲೇ ಇರುತ್ತೇನೆ ಎಂದು ಪ್ರತಿಜ್ಞೆ ಮಾಡಿದನು.

✤ ✤ ✤

# 16. ಭಗವಂತನು ಸುಖ-ದುಃಖ ಎರಡನ್ನೂ ಕೊಟ್ಟಿದ್ದಾದರೂ ಏಕೆ ?

ಒಬ್ಬ ಗುರು ಹಾಗೂ ಆತನ ಶಿಷ್ಯ ಇಬ್ಬರೂ ಒಂದು ದೋಣಿಯಲ್ಲಿ ಪ್ರಯಾಣಿಸುತ್ತಿದ್ದರು. ಗುರುವು ಎರಡು ಕೈಗಳಲ್ಲಿಯೂ ಒಂದೊಂದು ಕೋಲನ್ನು ಹಿಡಿದು ಹುಟ್ಟು ಹಾಕುತ್ತಾ ದೋಣಿಯನ್ನು ನಡೆಸುತ್ತಿದ್ದನು. ಶಿಷ್ಯನು ಪ್ರಶ್ನಿಸಿದನು : ''ಗುರೂಜಿ, ಭಗವಂತನು ನಮಗೆ ಸಂತೋಷದ ಜೊತೆಯಲ್ಲೇ ದುಃಖವನ್ನೂ ಏಕೆ ಕೊಡಬೇಕಿತ್ತು? ಕೇವಲ ಸಂತೋಷವನ್ನೇ ಕರುಣಿಸಿದ್ದರೆ ಆಗುತ್ತಿರಲಿಲ್ಲವೆ?''

ದೋಣಿಯನ್ನು ನಡೆಸುವುದರಲ್ಲೇ ಮಗ್ನನಾಗಿದ್ದ ಗುರು ಮೌನವಾಗಿದ್ದನು. ತನ್ನ ಕೈಯಲ್ಲಿದ್ದ ಕೋಲನ್ನು ಶಿಷ್ಯನಿಗೆ ನೀಡಿ, ದೋಣಿಯನ್ನು ನಡೆಸುವಂತೆ ಹೇಳಿ, ತಾನು ಆಯಾಸಗೊಂಡು ಸುಮ್ಮನೆ ಕುಳಿತುಬಿಟ್ಟನು. ದೋಣಿಯು ತಾನು ಇದ್ದ ಸ್ಥಳದಲ್ಲಿಯೇ ಗಿರ್ರನೆ ತಿರುಗುತ್ತಿರುವುದನ್ನು, ಒಂದು ಅಂಗುಲವೂ ಮುಂದೆ ಸರಿಯದುದನ್ನು ಕಂಡು ಶಿಷ್ಯನು ದುಃಖಿತನಾದನು. ಈ ವಿಷಯವನ್ನು ಗುರುವಿಗೆ ತಿಳಿಸಿ ತಾನು ಮುಂದೇನು ಮಾಡಬೇಕೆನ್ನುವುದನ್ನು ತಿಳಿಸಿಕೊಡಿ ಎಂದು ಶಿಷ್ಯನು ಪ್ರಾರ್ಥಿಸಿದನು. ಗುರು



ತನ್ನ ಬಳಿಯಿದ್ದ ಮತ್ತೊಂದು ಕೋಲನ್ನು ನೀಡಿದನು. ಎರಡೂ ಕೋಲುಗಳನ್ನು ಬಳಸಿ ಹುಟ್ಟುಹಾಕಲು ತೊಡಗಿದಾಗ, ದೋಣಿ ಮುಂದೆ ಸಾಗತೊಡಗಿತು. ಗುರು ಈಗ ಶಿಷ್ಯನನ್ನು ಕುರಿತು ನುಡಿದನು : ''ನಮ್ಮ ಬದುಕು ಒಂದು ದೋಣಿಯಂತೆ. ಸುಖ-ದುಃಖ ಈ ಎರಡೂ ದೋಣಿಯ ಎರಡು ಕಡೆಯ ಹುಟ್ಟುಗಳು. ನಾವು ಮುಂದೆ ಮುಂದೆ ಸಾಗಬೇಕಾದರೆ. ಈ ಎರಡು ಹುಟ್ಟುಗಳೂ ಅವಶ್ಯಕ.

✣ ✣ ✣

## 17. ವಿನೀತ ವೈದ್ಯ-ಸಂತ

ಭಗವಾನ್‌ದಾಸರು ರೋಗ ಚಿಕಿತ್ಸಕರೂ ಆದ ಸಂತರು. ಹಿಮಾಲಯ ಪ್ರದೇಶದ ತೆಹರಿ ಘರವಾಲ ಜಿಲ್ಲೆಯ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದರು. ಅವರ ಹಸ್ತದಿಂದ ವಿಭೂತಿಯನ್ನು ಪಡೆಯಲು ಭಾರತದ ಎಲ್ಲ ಭಾಗಗಳಿಂದಲೂ ಜನರು ಬರುತ್ತಿದ್ದರು. ಹತ್ತು ದಿನಗಳ ಕಾಲ ದೇಹದ ಮೇಲೆ ಲೇಪಿಸುವುದರಿಂದ ಅರ್ಬುದ (ಕ್ಯಾನ್ಸರ್) ರೋಗವೂ ಸೇರಿದಂತೆ ಎಲ್ಲ ಬಗೆಯ ವ್ಯಾಧಿಗಳೂ ಅದಷ್ಟರಿಂದಲೇ ಗುಣವಾಗಿಬಿಡುತ್ತಿದ್ದವು. ಆ ಕಾಲದಲ್ಲಿ ಇಂದೂರಿನಲ್ಲಿ ಒಬ್ಬ ವೃದ್ಧೆ ಇದ್ದಳು. ಆಕೆಯ ಒಬ್ಬನೇ ಮಗನ ಕೈಕಾಲುಗಳು ಪೂರಾ ಚರ್ಮವ್ಯಾಧಿಯಿಂದ ತುಂಬಿ ಆ ಹುಡುಗ ಸಂಕಟಪಡುತ್ತಿದ್ದನು. ಭಗವಾನ್‌ದಾಸರಿಗೆ ಇಂಥದೇ ಎಂಬ ನಿರ್ದಿಷ್ಟ ಸ್ಥಳವಿರಲಿಲ್ಲ. ಹೀಗಾಗಿ ಆ ವೃದ್ಧೆ ಘರವಾಲದ ಕಾಡುಗಳಲ್ಲಿ ಕೇವಲ ಪಾದಚಾರಿಯಾಗಿ, ಒಂದು ವರ್ಷಕ್ಕೂ ಹೆಚ್ಚು ಕಾಲ ಸುತ್ತಿಯೇ ಸುತ್ತಿದಳು. ಒಂದು ದಿನ ಆಕೆ ಒರಟು ಒರಟಾದ ಗಡ್ಡ ಗಂಟುಗಂಟಾದ ಕೂದಲಿನ ಮುದುಕನೊಬ್ಬನನ್ನು ಕಂಡಳು. ಭಗವಾನ್‌ದಾಸರು ಎಲ್ಲಿ ಸಿಗಬಹುದೆಂದು ಆಕೆ ಆ ವೃದ್ಧನನ್ನು ವಿಚಾರಿಸಿದಳು. ಯಾವ ಕಾರಣಕ್ಕಾಗಿ? ಎಂದು ಆತ ಕೇಳಿದನು. ವ್ಯಾಧಿಪೀಡಿತನಾದ ತನ್ನ ಮಗನ ಬಗ್ಗೆ ವೃದ್ಧೆ ವಿವರಿಸಿದಳು. ಮುದುಕ ಉತ್ತರಿಸಿದ : "ಆ ಭಗವಾನ್‌ದಾಸನೆಂಬ



ವಂಚಕನ ಹೆಸರು ಎತ್ತಬೇಡ. ಅವನೊಬ್ಬ ಕಪಟಿ, ಸ್ಕೌಂಡ್ರಲ್ ! ನಾನು ನಿನಗೆ ಪವಿತ್ರವಾದ ಭಸ್ಮವೊಂದನ್ನು ಕೊಡುತ್ತೇನೆ. ಪ್ರತಿದಿನ ಅದನ್ನು ನಿನ್ನ ಮಗನ ಶರೀರದ ಮೇಲೆ ಲೇಪಿಸು. ಹತ್ತು ದಿನದೊಳಗೆ ಅವನು ಗುಣ ಹೊಂದುತ್ತಾನೆ ಎಂದು ಭರವಸೆ ನೀಡುತ್ತೇನೆ." ಭಸ್ಮವನ್ನು ಸ್ವೀಕರಿಸಿದ ಮುದುಕಿ, ಆತನ ಹೆಸರನ್ನು ಕೇಳಿದಳು. "ಜನಗಳು ನನ್ನನ್ನು ಕಳ್ಳುದಾಸ ಎಂದು ಕರೆಯುತ್ತಾರೆ" ಎಂದ ಅವನು.

ಆ ವೃದ್ಧೆ ಅಲ್ಲಿಂದ ಹೊರಟ ಮೇಲೆ, ಭಗವಾನ್‌ದಾಸರೇ ಆಗಿದ್ದ ಆ ವ್ಯಕ್ತಿ ತನಗೆ ತಾನೇ ನಗತೊಡಗಿದರು.

ನಿಜವಾದ ಸಂತರಿಗೆ ಹೆಸರು - ಖ್ಯಾತಿಗಳ ಪರಿವೆಯೇ ಇರುವುದಿಲ್ಲ. ತಮ್ಮ ಹೆಸರನ್ನು ಅವರು ಜಾಹೀರು ಮಾಡುವುದೂ ಇಲ್ಲ. ಅದು ನಿಜವಾದ ವಿನಯ.

✤ ✤ ✤

## 18. ಭಗವಂತನ ಕರುಣೆ

ವೆನಿಸ್ ಪಟ್ಟಣದ ಖ್ಯಾತ ವಿಜ್ಞಾನಿ ಪ್ರೊ|| ಮೈಖೇಲ್ ಒಂದು ವಿಚಾರಗೋಷ್ಠಿಯಲ್ಲಿ ಭಾಗವಹಿಸಲು ನವದೆಹಲಿಗೆ ಬಂದಿದ್ದರು. ವಿಜ್ಞಾನ ಭವನದಲ್ಲಿ ಗೋಷ್ಠಿ ನಡೆದ ಎರಡು ದಿನಗಳ ನಂತರ, ತಮ್ಮದೇ ಇತ್ತೀಚಿನ ಸಂಶೋಧನೆಯ ಬಗ್ಗೆ ಪ್ಯಾರಿಸ್‌ನಲ್ಲಿ ನಡೆಯುವ ಒಂದು ಅಂತಾರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಅವರು ಪ್ರಬಂಧ ಮಂಡಿಸಬೇಕಿತ್ತು.

ದೆಹಲಿಯ ಗೋಷ್ಠಿಯ ಮರುದಿನ ತಾವು ತಂಗಿದ್ದ ವಸತಿ ಗೃಹದಲ್ಲಿ ಕೆಲವು ಪತ್ರಿಕಾ ಪ್ರತಿನಿಧಿಗಳೊಡನೆ ಸಂದರ್ಶನವಿದ್ದ ಕಾರಣ, ಅವರು ವಿಮಾನ ನಿಲ್ದಾಣವನ್ನು ಸೇರುವುದು ತೀರಾ ತಡವಾಯಿತು. ವಿಮಾನವು ಮೇಲೇರುವ ಸ್ಥಳವನ್ನು ಸೇರುವ ಮುಖ್ಯಬಾಗಿಲಲ್ಲಿ ಕಾವಲುಗಾರನು ಅವರನ್ನು ತಡೆದು ಬಿಟ್ಟನು. ಒಳಗೆ ಕಳುಹಿಸಲು ನಿರಾಕರಿಸಿದನು. ವಿಮಾನವು ಪ್ರಯಾಣಕ್ಕೆ ಸಿದ್ಧವಾಗಿರುವುದನ್ನು ಪ್ರಯಾಣಿಕರು ಒಳಗೆ ಸೇರಲು ಇದ್ದ ಕಡೆಯ ಏಣಿಯನ್ನು ದೂರವಿರಿಸಿದುದನ್ನೂ ಅವರು ಕಂಡರು. ಪ್ರೊಫೆಸರ್ ಸಾಹೇಬರು ತಮ್ಮ ಏರ್ ಟಿಕೆಟ್‌ಅನ್ನು ತೋರಿಸಿ, ಅಲ್ಲಿದ್ದ ಅಧಿಕಾರಿಯೊಡನೆ, ಪೈಲಟ್‌ಗೆ ಒಂದೆರಡು ನಿಮಿಷ ತಮಗಾಗಿ ಕಾಯುವಂತೆ ಫೋನ್ ಮಾಡಲು



ಗೋಗರೆದರು. ಆದರೆ ಆತ ಅತಿ ಕಠೋರವಾಗಿ ಅವರ ವಿನಂತಿಯನ್ನು ನಿರಾಕರಿಸಿಬಿಟ್ಟ. ವಿಮಾನವು ಮೇಲೇರಿತು.

ನಿರಾಸೆ ಹಾಗೂ ಕೋಪದಿಂದ ಆ ವಿಜ್ಞಾನಿಯು ಕಂಬದಿಂದ ಕಂಬಕ್ಕೆ ಓಡುತ್ತಾ ಹೋದರು. ಕಡೆಗೆ ಬಹು ಉದ್ದವಾದ ಕ್ಯೂ ಇದ್ದ ಒಂದು ಕಿಟಕಿಯ ಬಳಿಗೆ, ಟಿಕೆಟ್ ರದ್ದಿಯಾತಿಗಾಗಿ ಅವರನ್ನು ನಿರ್ದೇಶಿಸಲಾಯಿತು. ಪ್ರೊಫೆಸರ್ ಆ ಕ್ಯೂದ ಬಾಲದ ತುದಿಯಲ್ಲಿ ನಿಂತಿದ್ದರು. ಮುಂದಿನ ವಿಮಾನ ಒಂದು ದಿನದ ತರುವಾಯವೇ ಹೊರಡುವುದಿತ್ತು. ಸಕಾಲದಲ್ಲಿ ವಿಚಾರ ಸಂಕಿರಣಕ್ಕಾಗಿ ಪ್ಯಾರಿಸ್ ಸೇರುವುದು ಅವರಿಗೆ ಸಾಧ್ಯವೇ ಇಲ್ಲದುದರಿಂದ ನಿರಾಸೆ ಮತ್ತಷ್ಟು ತೀವ್ರವಾಯಿತು. ಬಹಳ ಹೊತ್ತಿನ ನಂತರ, ಕ್ಯೂ ಕರಗುತ್ತಾ ಇನ್ನೇನು ತಮ್ಮ ಮುಂದಿನ ಮೂರೋ ನಾಲ್ಕೋ ಮಂದಿ ಇದ್ದಾರೆ ಎನ್ನುವಾಗ, ಇದೀಗ ಮೇಲೇರಿದ ವಿಮಾನಕ್ಕೆ ಎರಡು ಭಾರಿ ಹದ್ದುಗಳು ಢಿಕ್ಕಿ ಹೊಡೆದು, ದೊಡ್ಡ ಅಪಘಾತವಾಗಿ, ಹಲವು ಪ್ರಯಾಣಿಕರು ಮಡಿದರೆಂದೂ ಮತ್ತೆ ಕೆಲವರು ತೀವ್ರವಾಗಿ ಗಾಯಗೊಂಡರೆಂದೂ ಗಟ್ಟಿದನಿಯ ಪ್ರಕಟಣೆ ಕೇಳಬಂದಿತು. ವಿಜ್ಞಾನಿಯ ಕಣ್ಣುಗಳಲ್ಲಿ ಕಂಬನಿ ಚಿಮ್ಮಿತು. ತಾವು ನಿಂತ ಸ್ಥಳದಲ್ಲೇ ಮಂಡಿಯೂರಿ ತಮ್ಮನ್ನು ತಡವಾಗಿ ನಿಲ್ದಾಣಕ್ಕೆ ತಲುಪಿಸಿದ ಭಗವಂತನ ಕೃಪೆಗಾಗಿ ಮತ್ತೆ ಮತ್ತೆ ವಂದಿಸಿದರು.

ಆಗುವುದೆಲ್ಲ ಪರಮಾತ್ಮನ ಇಚ್ಛೆಯಂತೆಯೇ ಸಂಭವಿಸುತ್ತದೆ. ಅಂತಿಮವಾಗಿ ಅದು ಒಳಿತಿಗಾಗಿಯೇ. ಓ ಭಗವಂತ ನಿನ್ನ ನಾಮವೇ ಅನುಕಂಪವಷ್ಟೆ!

✤ ✤ ✤

# 19. ತುಣುಕುಗಳು

## (ಅ) ಒಬ್ಬ ಗುರುವನ್ನು ಆಯ್ಕೆ ಮಾಡಿಕೊಳ್ಳಿ

ಒಂದು ಆಶ್ರಮದಲ್ಲಿ ರಾಮದಾಸ್ ಮತ್ತು ಶ್ಯಾಮದಾಸ್ ಎಂಬ ಇಬ್ಬರು ಸಾಧುಗಳಿದ್ದರು. ಇಬ್ಬರೂ ಭಗವಂತನ ಶ್ರೇಷ್ಠ ಭಕ್ತರು. ವಿನೀತರು, ಅತ್ಯಂತ ವಿದ್ವಾಂಸರು, ಪರಮಾತ್ಮನ ನಾಮಸ್ಮರಣೆಯಲ್ಲಿ ಆತನ ಮಹಿಮೆಯನ್ನು ಸ್ಮರಿಸುವುದರಲ್ಲಿ ಸದಾ ನಿರತರು. ಈ ಇಬ್ಬರು ಸಾಧುಗಳಲ್ಲಿ ತುಂಬ ಭಕ್ತಿಯುಳ್ಳ ಒಬ್ಬ ತರುಣ ಶಿಷ್ಯನಿದ್ದ. ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿದ್ದ. ಅಧ್ಯಾತ್ಮ ಸಾಧನೆಯಲ್ಲಿ ಇಬ್ಬರು ಸಾಧುಗಳೂ ಸಾಕಷ್ಟು ಪರಿಪಕ್ವತೆಯನ್ನು ಹೊಂದಿದ್ದರಿಂದ, ತನ್ನನ್ನು ಈ ಸಂಸಾರಸಾಗರದಿಂದ ಪಾರುಮಾಡಲು ಯಾರನ್ನು ಗುರುವಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲಾಗದೆ ಹೋದ. ಈ ವಿಷಯದಲ್ಲಿ ತನಗೆ ಮಾರ್ಗದರ್ಶನ ನೀಡುವಂತೆ ಭಗವಂತನನ್ನೇ ಪ್ರಾರ್ಥಿಸಿದ. ಅದೇ ರಾತ್ರಿ ಒಂದು ಕನಸನ್ನು ಕಂಡ. ಒಂದು ವಿಶಾಲವಾದ ಸಾಗರದಲ್ಲಿ ಎರಡು ದೋಣಿಗಳಿವೆ. ಆದರೆ ತಾನು ಕುಳಿತ ದೋಣಿ ಅಥವಾ ಸಾಗರದ ಪರಿವೆಯೇ ಧ್ಯಾನ ಮಗ್ನನಾಗಿ ಬಿಟ್ಟಿದ್ದಾನೆ. ಆದರೆ ಭಗವಂತನ ಇಚ್ಛೆಯಂತೆ, ಆ ದೋಣಿ ತನಗೆ ತಾನೇ ಸುಲಲಿತವಾಗಿ ಸಾಗುತ್ತಿದೆ. ಇನ್ನೊಂದು ದೋಣಿಯಲ್ಲಿ ಶ್ಯಾಮದಾಸನು ಸಂತೋಷವಾಗಿ ಹುಟ್ಟು ಹಾಕುತ್ತಾ,



ಭಗವಂತನನ್ನು ಭಾವೋನ್ಮತ್ತನಾಗಿ ಹಾಡುತ್ತಾ ಕುಳಿತಿದ್ದಾನೆ. ''ನೀನೇ ಆಯ್ಕೆ ಮಾಡಿಕೋ'' ಎಂಬ ಧ್ವನಿ ಸ್ವರ್ಗದಿಂದ ಆದೇಶವಾಗಿ ಕೇಳಬರುತ್ತಿದೆ. ಈ ಶಿಷ್ಯನು ಶ್ಯಾಮನ ದೋಣಿಯ ಕಡೆಗೆ ಬೆರಳು ಮಾಡಿ ತೋರಿಸುತ್ತಾ ಹೇಳಿದ: ''ಭಗವಂತನ ಗುಣಗಾನದಲ್ಲಿ ತೊಡಗಿದ್ದರೂ, ಜಗತ್ತನ್ನು ಮರೆಯದೆ ಸಂಕಷ್ಟದಲ್ಲಿರುವ ಈಜುಗಾರನನ್ನು ರಕ್ಷಿಸುವಷ್ಟು ಎಚ್ಚರದಲ್ಲಿರುತ್ತಾನೆ. ಅವನನ್ನೇ ನಾನು ಗುರುವಾಗಿ ಆಯ್ಕೆ ಮಾಡಿಕೊಳ್ಳುತ್ತೇನೆ.'' ದೈವವಾಣಿ ಪುನಃ ನುಡಿಯುತ್ತದೆ: ''ಆ ಇನ್ನೊಂದು ದೋಣಿ ಭಗವಂತನ ಇಚ್ಛೆಯಂತೆ ನನಗೆ ತಾನೇ ಚಲಿಸುತ್ತಿದೆ. ಹೀಗೆ ನೇರವಾಗಿ ದೈವದ ಇಚ್ಛೆಯಂತೆ ನಡೆಯುವ ದೋಣಿಯಲ್ಲಿಯೇ ನೀನು ಏಕೆ ಪಯಣಿಸಬಾರದು?''

ಶಿಷ್ಯನು ಕೇಳಿದ : ''ಭಗವಂತನ ಮಾರ್ಗದರ್ಶನವಿಲ್ಲದೆ ಈ ಜಗತ್ತಿನಲ್ಲಿ ನಡೆಯುವಂತಹುದು ಏನಾದರೂ ಇದೆಯೆ? ಅದೇ ಇಚ್ಛೆಯೇ ಎರಡನೆಯ ದೋಣಿಯನ್ನೂ ಚಲಿಸುವಂತೆ ಮಾಡುತ್ತಿದೆ. ನಾನಂತೂ ನನ್ನ ಮೊದಲ ಆಯ್ಕೆಯಂತೆಯೇ ನಡೆಯುತ್ತೇನೆ. ನನ್ನ ಈ ಆಯ್ಕೆಯೂ ನಿನ್ನದೇ ಇಚ್ಛೆಯಂತೆಯೇ. ಅಂತಿಮವಾಗಿ ಆಯ್ಕೆ ಎಂಬುದಾದರೂ ಎಲ್ಲಿದೆ? ನಾನು ಆರಿಸಿಕೊಂಡಿರುವುದು ನನ್ನ ಗುರುವನ್ನು, ದೋಣಿಯನ್ನಲ್ಲ!''

## (ಆ) ಅದೆಷ್ಟು ಹೊತ್ತು ನೀನು ಹೊರಗೇ ನಿಂತಿರುವೆ?

ರಬ್ಬಿಯಾ, ಸೂಫಿ ಪಂಥದ ಒಬ್ಬ ಶ್ರೇಷ್ಠ ಸಂತಳು. ಆಕೆಯ ಸಮಕಾಲೀನವಾದ ಮತ್ತೊಬ್ಬ ಸಂತ, ರಬ್ಬಿಯಾಳ ಆಪ್ತ ಮಿತ್ರನೂ ಆದ ಹಸನ್. ಬೆಳಗಿನ ಹೊತ್ತಿನಲ್ಲಿ ಚಹಾ ತಯಾರಿಸುವುದರಲ್ಲಿ ರಬ್ಬಿಯಾ ಮಗ್ನಳಾಗಿದ್ದಳು. ಹಸನ್, ಮನೆಯಿಂದ ಹೊರಗೆ ಬಂದು, ಸಮೀಪದ ಪರ್ವತದ ಹಿಂದಿನಿಂದ ಆದೇ ತಾನೇ ಮೂಡುತ್ತಿರುವ ಸೂರ್ಯೋದಯದ ಚೆಲುವನ್ನು

ಸವಿಯುವುದರಲ್ಲಿ ತೊಡಗಿದ್ದ. ಆನಂದಮತ್ತನಾಗಿ ಹಸನ್ ಕೂಗಿದ: "ರಬ್ಬಿಯಾ ಒಳಗೆ ಕುಳಿತು ಏನು ಮಾಡುತ್ತಿದ್ದೀಯ? ಹೊರಗೆ ಬಂದು ಈ ಸೊಬಗನ್ನು ಅನುಭವಿಸು ಬಾ!" ರಬ್ಬಿಯಾ ವೇದನೆಯ ಧ್ವನಿಯಲ್ಲಿ ನುಡಿದಳು: "ಓಹ್! ಹಸನ್, ಹಸನ್ ಅದಿನ್ನು ಎಷ್ಟು ಹೊತ್ತು ನೀನು ಹೊರಗಡೆಯೇ ನಿಂತಿರುವೇ? ಒಳಗೆ-ಒಳಗೆ ಬಾರಯ್ಯಾ! ಈ ಎಲ್ಲ ಚೆಲುವಿನ ಮೂಲವಾದ ಪರಿಪೂರ್ಣ ಸೌಂದರ್ಯ ಒಳಗೇ - ನಿನ್ನ ಒಳಗೇ - ನಿನ್ನ ಒಳಗೇ ಇದೆ. ಹೊರಗಿನದು ಕೇವಲ ಮರೀಚಿಕೆ. ಒಳಗಿನದೇ ಸತ್ಯಸ್ಯ ಸತ್ಯ!"

## (ಇ) ದೇವಾಲಯ ಎನ್ನುವುದು ಏನು?

ಬಸ್ತಾರದ ದುರ್ಗಮವಾದ ಅರಣ್ಯದ ಮಧ್ಯದಲ್ಲಿ, ವೃದ್ಧನಾದ ಸಂತನೊಬ್ಬ ವಾಸವಿರುತ್ತಿದ್ದ ಒಂದು ಸಣ್ಣ ಆಶ್ರಮವಿತ್ತು. ಆತನು ಆ ಗುಡ್ಡಗಾಡು ಜನಗಳ ನಡುವೆ ಓಡಾಡುತ್ತಾ, ಅವರ ಮಕ್ಕಳಿಗೆ ಪಾಠ ಕಲಿಸುತ್ತಾ, ಕಥೆಗಳನ್ನು ಹೇಳುತ್ತಾ, ಅವುಗಳ ತಾಯಂದಿರು ಕೆಲಸದ ಮೇಲೆ ಹೊರಗೆ ಹೋದಾಗ ಅವುಗಳನ್ನು ನೋಡಿಕೊಳ್ಳುತ್ತಾ, ಬಡರೋಗಿಗಳ ಶುಶ್ರೂಷೆಗೆಂದು ಒಂದು ಸಣ್ಣ ಚಿಕಿತ್ಸಾಲಯವನ್ನು ನಡೆಸುತ್ತಿದ್ದ. ಕೆಲವು ಮಾತ್ರೆಗಳನ್ನು ಒಳಗೊಂಡ ಹನ್ನೆರಡು ಶೀಷೆಗಳು ಮಾತ್ರಾ ಆತನ ಬಳಿ ಇದ್ದವು. ಆದರೆ ಯಾವು ರೋಗಿಯೇ ಆಗಲಿ ಒಮ್ಮೆ ಅವನ ಬಳಿ ಬಂದು ಒಂದು ಡೋಸ್ ಔಷಧವನ್ನು ಸೇವಿಸಿದರೆ ಸಾಕು, ರೋಗಿ ಸಂಪೂರ್ಣವಾಗಿ ಗುಣಹೊಂದಿ ಬಿಡುತ್ತಿದ್ದ. ಮತ್ತೆಂದೂ ಕಾಯಿಲೆ ಬೀಳುತ್ತಿರಲಿಲ್ಲ. ಸ್ಥಳೀಯರಾದ ಗುಡ್ಡಗಾಡಿನ ಜನ ಆ ಸಂತನನ್ನು ಸಾಕ್ಷಾತ್ ದೇವರೆಂದೇ ಭಾವಿಸಿ ಆರಾಧಿಸುತ್ತಿದ್ದರು. ಸ್ವತಃ ತಾನೇ ಬಡತನದಲ್ಲಿದ್ದರೂ ಒಬ್ಬ ಮಹಾಮಂಡಲೇಶ್ವರನ ಉದಾರ ನೆರವಿನಿಂದ ಆ ಚಿಕಿತ್ಸಾಲಯವನ್ನು ನಡೆಸಿಕೊಂಡು ಹೋಗುತ್ತಿದ್ದ. ಆ ಮಹಾಮಂಡಲೇಶ್ವರ



ಹಲವಾರು ಸ್ಥಳಗಳಲ್ಲಿ ಹಲವಾರು ಆಶ್ರಮಗಳನ್ನು ನಿಯಂತ್ರಿಸುತ್ತಿದ್ದ ಬಿಷಪ್‌ರಂತಹ ಗೌರವಾನ್ವಿತ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದು ಝೂನ್ಸಿಯಲ್ಲಿ ನೆಲೆಸಿದ್ದ. ಹಿಂದುಳಿದ ಪ್ರದೇಶಗಳಲ್ಲಿ ಧಾರ್ಮಿಕ ಪೂಜಾದಿಗಳನ್ನು ನಡೆಸಲೆಂದೇ ನೆರವು ನೀಡುವ ಒಂದು ಯೋಜನೆಯ ಅಡಿಯಲ್ಲಿ ಈ ಕೆಲಸ ನಡೆಯುತ್ತಿತ್ತು. ಬಸ್ತಾರ್ ಜಿಲ್ಲೆಯಲ್ಲಿ ಶ್ರೀಕೃಷ್ಣಮಂದಿರದ ನಿರ್ಮಾಣಕ್ಕೆಂದೇ ಲಕ್ಷಾಂತರು ರೂ.ಗಳ ಹಣ ವಿನಿಯೋಗವಾಗಿತ್ತು. ವೃದ್ಧ ಸಂತ ಇದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ಮಂದಿರದ ನಿರ್ಮಾಣದ ಪ್ರಗತಿಯನ್ನು ಕಾಲಕಾಲಕ್ಕೆ ವರದಿ ಒಪ್ಪಿಸುತ್ತಾ, ಗುಡ್ಡಗಾಡಿನ ಜನ ಅದೆಷ್ಟು ಸಂತುಷ್ಟರಾಗಿರುವರೆಂದು ತಿಳಿಸುತ್ತಾ ಇದ್ದ ಸಂತನಿಗೆ ಬಹುದೊಡ್ಡ ಮೊತ್ತದ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿತ್ತು. ಈ ಸಂತನ ಬಗೆಗೆ ಇದ್ದಕ್ಕಿದ್ದಂತೆ ಅಸೂಯೆಯನ್ನು ಬೆಳೆಸಿಕೊಂಡ ಬಸ್ತಾರ್ ನಿವಾಸಿಯೊಬ್ಬ ಝೂನ್ಸಿಗೆ ಬಂದು ವೃದ್ಧ ಸಂತನು ಪಡೆದುಕೊಂಡ ಐವತ್ತು ಲಕ್ಷ ರೂಪಾಯಿ ಸಹಾಯಧನದಲ್ಲಿ ಒಂದು ನಯಾಪೈಸೆಯೂ ಖರ್ಚಾಗಿಲ್ಲವೆಂದು ಯಾವ ಒಂದು ದೇವಾಲಯ ನಿರ್ಮಾಣವನ್ನೂ ಪ್ರಾರಂಭಿಸಿಲ್ಲವೆಂದೂ ದೂರು ಹೇಳಿದ. ಈ ಸುದ್ದಿಯು ಮಂಡಲೇಶ್ವರನಿಗೆ ಸಿಡಿಲಿನಂತೆ ಬಂದೆರಗಿತು. ಹೀಗೆ ದೇವಾಲಯ ನಿರ್ಮಾಣ ಪ್ರಾರಂಭವೇ ಆಗಿಲ್ಲವೇ ಎಂಬುದನ್ನು ವೈಯಕ್ತಿಕವಾಗಿ ಭೇಟಿಯಿತ್ತು ಪರಿಶೀಲಿಸಲು ಹಾಗೂ ಅದು ನಿಜವಾಗಿದ್ದಲ್ಲಿ ಝೂನ್ಸಿಗೆ ಆ ವೃದ್ಧನನ್ನು ಪ್ರಶ್ನಿಸಲೆಂದು ಕರೆತರಬೇಕೆಂದೂ ಮಂಡಲೇಶ್ವರರು ಕೆಲವು ಮಂದಿಯ ಒಂದು ಸಮಿತಿಯನ್ನು ಕಳುಹಿಸಿದರು. ಅಗತ್ಯವಾದರೆ ಆತನನ್ನು ಹಣದುರುಪಯೋಗದ ಆಪಾದನೆಯ ಮೇಲೆ ಪೊಲೀಸರಿಗೆ ಒಪ್ಪಿಸಲಾಗುತ್ತದೆ ಎಂದೂ ತಿಳಿಸಿದರು.

ಕಟ್ಟಕಡೆಗೆ, ವೃದ್ಧ ಸಂತರು ತಾವೇ ಮಂಡಲೇಶ್ವರರ ಮಹಾಸನ್ನಿಧಾನಕ್ಕೆ ನಡುನಡುಗುತ್ತಾ ಬಂದರು. ಅವರು ತುಂಬ ಬಳಲಿದ್ದರು. ಆದರೂ ಮುಖ ಶಾಂತವಾಗಿತ್ತು. ದೈವಿಕ ಪ್ರಕಾಶದಿಂದ ಬೆಳಗುತ್ತಿತ್ತು. ಬಸ್ತಾರ್‌ನಲ್ಲಿ ತಮ್ಮ ಕನ್ನಡಕವನ್ನು ಮರೆತು ಬಂದುದರಿಂದ ತಾವು ಬಂದ ದಾರಿಯನ್ನಾಗಲೀ ಅಥವಾ ಕೋಣೆಯಲ್ಲಿದ್ದ ಪದಾರ್ಥಗಳಾಗಲೀ ಅವರಿಗೆ ಸರಿಯಾಗಿ ಗೋಚರಿಸುತ್ತಿರಲಿಲ್ಲ. ಮೇಲಣ ಬೆಳಕಿಂಡಿಯಿಂದ ತೆಳುವಾದ ಸೂರ್ಯಕಿರಣ ಬಂದು ಸಂತರು ನಿಂತ ಸ್ಥಳದ ಮೇಲೆ ಬಿದ್ದಿತ್ತು. ತುಂಬ ಆಯಾಸದಿಂದ ಅವರು ಬೆವರುತ್ತಿದ್ದರು. ತಮ್ಮ ಹರಕು ಚಿಂದಿಯ ಕೋಟನ್ನು ಅವರು ತೆಗೆದು, ಸೂರ್ಯರಶ್ಮಿಯ ಮೇಲೆ ತಮ್ಮ ಛತ್ರಿಯೊಡನೆ ತಗುಲಿ ಹಾಕಿದರು. ಅವರು ಆ ಕಿರಣವನ್ನು ಒಂದು ತಂತಿ ಎಂದೇ ಭ್ರಮಿಸಿಬಿಟ್ಟರು. ಅಚ್ಚರಿ ಎಂದರೆ ಆ ಕೋಟು ಹಾಗೂ ಛತ್ರಿ ಕೆಳಗೆ ಬೀಳದೆ ಆ ಕಿರಣದ ಮೇಲೆಯೇ ತೂಗಿ ಬಿದ್ದಿತು. ಕೊಠಡಿಯಲ್ಲಿದ್ದವರೆಲ್ಲ ಈ ಪವಾಡವನ್ನು ಕಂಡು ವಿಸ್ಮಿತರಾದರು. ಕೆಲವರಂತೂ ಆ ಪೂಜ್ಯ ಸಂತರ ಕಾಲುಗಳಿಗೆ ಎರಗಿದರು. ಮಂಡಲೇಶ್ವರರೂ ಈ ಪವಾಡವನ್ನು ಕಂಡು ಚಕಿತರಾದರು, ತಮ್ಮ ಸಿಂಹಾಸನದಿಂದ ಕೆಳಗೆ ಇಳಿದು ಬಂದು, ಗೌರವದಿಂದ ಬಾಗಿ ನಮಸ್ಕರಿಸಿ, ವೃದ್ಧಸಂತನನ್ನು ತಮ್ಮ ಪಕ್ಕದ ಪೀಠದಲ್ಲಿಯೇ ಕುಳ್ಳಿರಿಸಿಕೊಂಡರು.

ಸಂತರು ಶಾಂತವಾದ ದನಿಯಲ್ಲಿ ನುಡಿದರು: “ಮಹಾಪ್ರಭು, ತಾವು ನನ್ನನ್ನು ಇಲ್ಲಿಗೆ ಕರೆಸಿರುವುದು ಏಕೆ ಎಂದು ನಾನು ಬಲ್ಲೆ. ಭಗವಂತ ಕೃಷ್ಣನಿಗೆ ಯಾವ ಪ್ರತ್ಯೇಕ ದೇವಾಲಯವನ್ನೂ ನಾನು ಕಟ್ಟಿಸಿಲ್ಲ ಎಂಬುದು ನಿಜ. ಈ ಗುಡ್ಡಗಾಡಿನ ಜನವೆಲ್ಲ ಮಳೆಗಾಲದಲ್ಲಿ ಸೋರುತ್ತಿರುವ ತಾತ್ಕಾಲಿಕ ಜೋಪಡಿಗಳಲ್ಲಿ ಚಳಿಗಾಲದಲ್ಲಿ ನಡುಗುತ್ತಾ ವಾಸಿಸುತ್ತಿದ್ದಾರೆ. ಪರಿಸರವೋ ಚಿಂತಾಜನಕ. ಇಂಥ ಸಾವಿರಾರು ಮಂದಿಗೆ ಸಣ್ಣ ಮನೆಗಳನ್ನು ಕಟ್ಟಿಸಿಕೊಡಲು



ಐವತ್ತು ಲಕ್ಷ ರೂ.ಗಳನ್ನೂ ಖರ್ಚುಮಾಡಿಬಿಟ್ಟಿದ್ದೇನೆ. ಅಂಗಡಿಮುಂಗಟ್ಟುಗಳು, ಕ್ರೀಡಾರಂಗಗಳು ಮಕ್ಕಳಿಗಾಗಿ ಎರಡು ಶಾಲಾ ಕಟ್ಟಡಗಳು ನಿರ್ಮಾಣವಾಗಿ ಒಂದು ಸಣ್ಣ ಬಡಾವಣೆಯೇ ಸಿದ್ಧವಾಗಿದೆ. ಆ ಜನಗಳೆಲ್ಲ ಈಗ ತುಂಬ ಸಂತಸಗೊಂಡು ತಮಗೆ ಕೃತಜ್ಞರಾಗಿದ್ದಾರೆ. ತಿರಸ್ಕೃತರಾದ ಈ ಜನರ ಹೃದಯಗಳಲ್ಲೂ ಪ್ರಭುಕೃಷ್ಣನೇ ನೆಲಸಿದ್ದಾನಲ್ಲವೆ ? ಅಗತ್ಯವುಳ್ಳವರಿಗಾಗಿ ನಿರ್ಮಿತವಾದ ಈ ಎಲ್ಲ ಮನೆಯೂ ಕೃಷ್ಣ ಮಂದಿರವೇ ಅಲ್ಲವೆ ? ನಾನೇನು ಮಾಡಿದೆನೋ ಅದರ ಬಗ್ಗೆ ನನಗಂತೂ ಯಾವ ಪಶ್ಚಾತ್ತಾಪವೂ ಇಲ್ಲ. ತಮಗೆ ಉಚಿತವೆಂದು ತೋರಿದಂತೆ ನನ್ನನ್ನು ತಾವು ದಂಡಿಸಬಹುದು.” ಮಂಡಲೇಶ್ವರರ ಕಣ್ಣುಗಳಲ್ಲಿ ಕಂಬನಿ ಉಕ್ಕಿತ್ತು. ಆ ವೃದ್ಧ ಸಂತರನ್ನು ಗಾಢವಾಗಿ ಆಲಂಗಿಸಿದರು.

✤ ✤ ✤

# 20. ಭಗವಂತನ ನಿಜವಾದ ಪೂಜೆ

ಸ್ವಾಮಿ ಆನಂದರು ನೆಲ್ಲೂರಿನ ಪ್ರಖ್ಯಾತ ಗುರು. ನಗರದಲ್ಲಿ ಹಾಗೂ ಸುತ್ತಮುತ್ತ ಜನರು ಅವರನ್ನು ತುಂಬ ಗೌರವ-ಆದರಗಳಿಂದ ನೋಡುತ್ತಿದ್ದರು. ಆದರೆ ನಗರದ ಕೆಲವು ಅಸೂಯಾಪರರಾದ ಗಣ್ಯರು ಸ್ವಾಮಿ ಆನಂದರ ಈ ಖ್ಯಾತಿಯನ್ನು ಸಹಿಸದೆ ಹೋದರು. ಒಂದು ದಿನ ಅವರೆಲ್ಲ ಸ್ವಾಮೀಜಿಯ ಬಳಿ ಬಂದ ಅವರನ್ನು ಖಂಡಿಸತೊಡಗಿದರು- "ತಮಗೆ ಭಗವಂತನ ಸಾಕ್ಷಾತ್ಕಾರವಾಗಿದೆ. ಒಂದು ನಿರ್ಜನ ಪ್ರದೇಶದಲ್ಲಿ ಪ್ರತಿದಿನ ದೇವರೊಡನೆ ಮಾತನಾಡುತ್ತಾ ಮೂರುಗಂಟೆಗಳ ಕಾಲ ಸುತ್ತಾಡುತ್ತಿರುವಿರಿ ಎಂದು ವ್ಯಾಪಕವಾಗಿ ನಂಬಲಾಗಿದೆ. ಈ ಪಟ್ಟಣದ ಸರಳ ಸಾಮಾನ್ಯರನ್ನು ವಂಚಿಸುವ ತಮ್ಮ ಈ ಕಪಟವನ್ನು ನಾವು ಸಹಿಸಲಾರೆವು. ಒಬ್ಬ ಸಂತರು ಹೀಗೆ ತಾವು ಭಗವಂತನನ್ನು ಸಾಕ್ಷಾತ್ಕರಿಸಿಕೊಂಡಿದ್ದೇನೆ ಎಂದು ವೇಷಹಾಕುತ್ತಾ ಅವರ ಮುಗ್ಧಭಕ್ತಿಯನ್ನು ಶೋಷಿಸುವುದು ದೊಡ್ಡ ಪಾಪವೇ ಸರಿ. ಈ ದಿನ ನಾವು ತಮ್ಮ ಕಪಟವನ್ನು ಬಯಲು ಮಾಡಲು ನಿಶ್ಚಯಿಸಿಬಿಟ್ಟಿದ್ದೇವೆ. ಪ್ರತಿದಿನ ತಾವು ಮಾತುಕತೆ ನಡೆಸುತ್ತಿರುವ ಆ ದೇವದೇವನನ್ನು ಇಂದು ನಮಗೂ ತಾವು ತೋರಿಸಲೇಬೇಕು. ಹಾಗಲ್ಲದಿದ್ದರೆ ನೀವು ಅಪಮಾನಿತರಾಗಿ ಎಲ್ಲರ ತಿರಸ್ಕಾರಕ್ಕೂ ಬಲಿಯಾಗಬೇಕಾಗುತ್ತದೆ."



ಈ ಕಠೋರ ಉಕ್ತಿಗಳನ್ನು ಕೇಳಿದ ನಂತರವೂ ಸ್ವಾಮಿ ಆನಂದರು ಕೊಂಚವೂ ವಿಚಲಿತರಾಗಲಿಲ್ಲ. ಬದಲಾಗಿ ಮಂದಹಾಸದಿಂದ ಮಧುರ ದನಿಯಲ್ಲಿಯೇ ಅವರೊಡನೆ ನುಡಿದರು: "ಸಮಾಜದ ಬಗೆಗೆ ತಮಗಿರುವ ಕಾಳಜಿಯನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿರುವೆ. ನಾನು ಸಮಾಜವನ್ನು ವಂಚಿಸುತ್ತಿರುವೆ ಎಂದು ನಿಮ್ಮ ಕಳಕಳಿ. ನಾಳೆ ಬೆಳಿಗ್ಗೆ ಆರು ಗಂಟೆಗೆ ತಾವೆಲ್ಲ ನನ್ನನ್ನು ಹಿಂಬಾಲಿಸಿ, ಭಗವಂತನೊಡನೆ ನನ್ನ ಸಂವಾದದ ಸ್ಥಳಕ್ಕೆ ಬನ್ನಿ, ನನ್ನ ಭಗವಂತನನ್ನು ಸ್ವತಃ ತಾವು ಕಾಣುವಿರಿ."

ಅವರೆಲ್ಲ ಸಮ್ಮತಿಸಿದರು. ಆದರೆ ಮಾರನೆಯ ದಿನ ಈ ಕಪಟಿ ಮಹಾತ್ಮನನ್ನು ಹೇಗೆ ಬಯಲು ಮಾಡಿಬಿಡುತ್ತೇವೆ ಎಂಬ ಚಿಂತೆಯಲ್ಲಿ ಅವರಿಗೆ ಇಡೀ ರಾತ್ರಿ ನಿದ್ರೆ ಬರಲೇ ಇಲ್ಲ. ಬೆಳಗ್ಗೆ ಬಹುಬೇಗನೆಯೇ ಅವರು ಸ್ವಾಮೀಜಿಯ ಆಶ್ರಮಕ್ಕೆ ಬಂದರು. ತಮ್ಮ ಪ್ರಾತರ್ವಿಧಿಗಳನ್ನೆಲ್ಲ ಪೂರೈಸಿಕೊಂಡ ಸ್ವಾಮೀಜಿ ಸಮೀಪದ ಅರಣ್ಯದ ಕಡೆಗೆ ನಡೆದರು. ಸುಮಾರು ಎರಡು ಕಿಲೋಮೀಟರ್ ನಡೆದನಂತರ ಒಂದು ನದಿಯ ದಂಡೆಯಲ್ಲಿದ್ದ ಗುಡಿಸಲನ್ನು ಪ್ರವೇಶಿಸಿದರು. ಅಲ್ಲಿ ಮೈಯೆಲ್ಲ ತೊನ್ನುರೋಗ ಪೀಡಿತರಾಗಿದ್ದ ವೃದ್ಧ ದಂಪತಿಗಳು ಒಂದು ಹಳೆಯ ಮಂಚದ ಮೇಲೆ ಮಲಗಿದ್ದರು. ಸ್ವಾಮೀಜಿ ಎರಡು ಬಟ್ಟಲು ಚಹಾ ತಯಾರಿಸಿ ಅವರಿಗೆ ಕುಡಿಯಲು ಕೊಟ್ಟರು. ಅನಂತರ ಒಂದು ಶೀಷೆ ಔಷಧಿಯುಕ್ತ ತೈಲವನ್ನು ತೆಗೆದುಕೊಂಡು ದಂಪತಿಗಳ ಕೈಕಾಲುಗಳಿಗೆ ಮಸಾಜ್ ಮಾಡತೊಡಗಿದರು. ಬಚ್ಚಲು ಮನೆಯಲ್ಲಿ ಬಿಸಿ ನೀರು ಕಾಯಿಸಿ ಸ್ನಾನ ಮಾಡಿಸಿದರು. ತಮ್ಮೊಡನೆ ತಂದಿದ್ದ ಹೊಸ ಬಟ್ಟೆಗಳನ್ನು ಉಡಿಸಿದರು. ಬಿಸಿಬಿಸಿ ಗಂಜಿಯನ್ನೂ ತಯಾರಿಸಿ ಕುಡಿಸಿದರು.

ಸ್ವಾಮೀಜಿಯನ್ನು ಹಿಂಬಾಲಿಸಿದ್ದ ಸ್ವಯಂಘೋಷಿತ ಸಮಾಜ ಸುಧಾರಕರು ಈ ದೃಶ್ಯವನ್ನು ಕಂಡು ಸ್ತಂಭೀಭೂತರಾದರು. ಅಂತಹ ಮಹಾನ್ ಸ್ವಾಮೀಜಿಯನ್ನು ತಾವು ಅಪಮಾನಿಸಿದ ಬಗೆಗೆ ಕಣ್ಣೀರು ಸುರಿಸಿದರು. ಅವರ ಪಾದಗಳಿಗೆ ನಮಸ್ಕರಿಸಿ ತಮ್ಮ ಕುಕಾರ್ಯಕ್ಕೆ ಕ್ಷಮೆ ಕೋರಿದರು. ''ಓ, ಮಹಾತ್ಮರೇ, ತಮ್ಮನ್ನು ಸಂದೇಹಿಸಿದ ನಮ್ಮ ಪಾಪವನ್ನು ದಯಮಾಡಿ ಮನ್ನಿಸಿ. ದುಃಖಸಂಕಟಗಳಿಂದ ಪೀಡಿತರಾದವರಿಗಿಂತ ದೊಡ್ಡ ದೇವರು ಯಾರುಂಟು? ಎಂಬುದನ್ನು ನಮಗೆ ತೋರಿಸಿಕೊಟ್ಟಿರಿ. ತಮ್ಮ ಭಗವಂತನನ್ನು ಕಣ್ಣಾರೆ ಕಂಡ ನಾವೇ ಪುಣ್ಯವಂತರು'' ಎಂದು ಉದ್ಗರಿಸಿದರು.

ಅವರೆಲ್ಲ ಪಟ್ಟಣಕ್ಕೆ ಹಿಂತಿರುಗಿ ಕಂಡಕಂಡವರಿಗೆಲ್ಲ ನಡೆದ ಘಟನೆಯನ್ನು ವಿವರಿಸಿ ಹೇಳುತ್ತಾ: ''ಇಂದು ಬೆಳಗ್ಗೆ ನಾವು, ಸ್ವಾಮಿ ಆನಂದರ ರೂಪದಲ್ಲಿ ಅವತರಿಸಿರುವ ಸಾಕ್ಷಾತ್ ಚೈತನ್ಯ ಪ್ರಭುವನ್ನೇ ಕಂಡೆವು. ಇಂತಹ ಶ್ರೇಷ್ಠ ಅನುಗ್ರಹವನ್ನು ನಮಗೆ ನೀಡಿದ ಪರಮಾತ್ಮನಿಗೆ ಮತ್ತೆ ಮತ್ತೆ ವಂದನೆ'' ಎಂದರು.

✤ ✤ ✤



## 21. 'ನಾನು' ಎಂಬುದು ಏನು? 'ನೀನು' ಎಂಬುದು ಏನು? (ರಿಭು ಗೀತ)

ರಿಭು, ವೇದಾಂತದಲ್ಲಿ ಪರಿಣತನಾಗಿದ್ದ ಮಹಾನ್ ಸಂತರು. ಅವರ ಉಜ್ಜಯಿನಿ ಆಶ್ರಮದಲ್ಲಿ ಹದಿನೈದು ವರ್ಷ ಅಭ್ಯಾಸಮಾಡಿದ ನಿದಾಘ ರಿಭುಗಳ ಶಿಷ್ಯ. ನಾನು ಕಲಿಯುವುದನ್ನೆಲ್ಲ ಕಲಿತಾಯ್ತು ಇನ್ನೇನು? ಎಂಬ ಬೇಸರ ನಿದಾಘನನ್ನು ಮುತ್ತಿತು. ಒಂದು ದಿನ, ಆಶ್ರಮವನ್ನು ನೋಡಿಕೊಳ್ಳು ವಂತೆ ನಿದಾಘನಿಗೆ ತಿಳಿಸಿ ಸುದೀರ್ಘಕಾಲದ ಯಾತ್ರೆಗೆ ರಿಭು ಹೊರಟರು. ಇಪ್ಪತ್ತು ವರ್ಷಗಳ ಅನಂತರವೇ ಅವರು ಉಜ್ಜಯಿನಿಗೆ ಹಿಂತಿರುಗಿದುದು. ಇದೀಗ ಅವರಿಗೆ ಸಾಕಷ್ಟು ವಯಸ್ಸಾಗಿತ್ತು, ಗಡ್ಡ ಮೀಸೆಗಳು ಬೆಳ್ಳಗಾಗಿದ್ದವು. ಕಣ್ಣುಗಳು ಒಳ ಸರಿದಿದ್ದವು, ಮುಖದಲ್ಲಿ ಸೋತ ಕಳೆ ತುಂಬಿತ್ತು. ಹಳ್ಳಿಯ ರೈತನಂತೆ ಈಗ ಅವರ ವೇಷ, ತಲೆಯ ಮೇಲೊಂದು ಲಪಾಟೆ. ಆಶ್ರಮದ ಕಡೆಗೆ ಹೊರಟಾಗ, ತಮ್ಮ ಶಿಷ್ಯ ನಿದಾಘ ಪೇಟೆಯ ಒಂದು ಅಂಗಡಿಯ ಮುಂದೆ ನಿಂತಿರುವುದನ್ನು ನೋಡಿದರು. ಗುರುವನ್ನು ಗುರುತಿಸಲು ನಿದಾಘನಿಗೆ ಸಾಧ್ಯವಾಗಲಿಲ್ಲ. ಯಾರೋ ನಿರಕ್ಷರಿಯಾದ ಹಳ್ಳಿಯವ ಎಂದೇ

ಭಾವಿಸಿದನು. ''ತಾವು ಏಕೆ ಇಲ್ಲಿ ನಿಂತಿದ್ದೀರಿ ಸ್ವಾಮಿ?'' ಎಂದು ಗುರು ಕೇಳಿದರು.

**ನಿದಾಘ :** ಅಗೋ ಅಲ್ಲಿ ದೂರದಲ್ಲಿ ನಿಂತಿದ್ದಾರಲ್ಲಾ ದೊರೆಗಳು ಅವರು ಇತ್ತ ಕಡೆಯೇ ಹೊರಟಿದ್ದಾರೆ. ಅವರು ಮುಂದೆ ಸರಿದ ನಂತರ ನನ್ನ ಆಶ್ರಮಕ್ಕೆ ಹೊರಡುತ್ತೇನೆ.

**ಗುರು :** ಪೂಜ್ಯರೆ, ದೂರದಲ್ಲಿ ಸುಮಾರು ಜನ ನಿಂತಿದ್ದಾರೆ. ಅವರಲ್ಲಿ ನಿಮ್ಮ ದೊರೆ ಯಾರು?

**ಶಿಷ್ಯ :** ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತಿದ್ದಾರಲ್ಲ, ಅವರೇ ದೊರೆ. ರಾಜರ ಕೆಳಗೆ ಇರುವುದೇ ಆನೆ. ಸ್ಪಷ್ಟವಾಯಿತಾ?

**ಗುರು :** ''ಮೇಲೆ'' ಎಂದರೆ ಏನು? ''ಕೆಳಗೆ'' ಯಾವುದು?

ನಿದಾಘನು ತಿರಸ್ಕಾರದಿಂದ ಗುರುವಿನ ಬೆನ್ನನ್ನು ಬಾಗಿಸಿ, ತನ್ನ ಕೈಗಳಿಂದ ನೆಲವನ್ನು ತಾಗುವಂತೆ, ಕುದುರೆಯಂತೆ, ಅವರನ್ನು ಮಾಡಿ, ಅವರ ಬೆನ್ನ ಮೇಲೆ ಎಗರಿ ಕುಳಿತುಬಿಟ್ಟನು.

**ನಿದಾಘ :** ನೋಡಯ್ಯಾ, ಈಗ ನಾನು ನಿನ್ನ ''ಮೇಲೆ'' ನೀನು ನನ್ನ ''ಕೆಳಗೆ'' - ತಿಳೀತಾ?

**ಗುರು :** ಓಹ್ ! ತುಂಬಾ ಉಪಕಾರವಾಯಿತು ಸ್ವಾಮಿ. ಈ ಮೇಲೆ, ಕೆಳಗೆ ಎಂಬ ಲೆಕ್ಕಾಚಾರವೆಲ್ಲ ನನಗೆ ಬೇಡ. ತಾವು ಹೇಳಿದ ನೀನು-ನಾನು ಎಂದಿರಲ್ಲಾ ಅದು ನನಗೆ ಅರ್ಥ ಆಗಲಿಲ್ಲ. ನನ್ನನ್ನು ''ನಾನು''



ಎಂದು ಕೊಂಡಿದ್ದೇನೆ. ನಿಮ್ಮನ್ನು ಈಗ ತಾನೇ ''ನಾನು'' ಎಂದಿರಿ. ಹಾಗಾದರೆ ನಿಜವಾದ ''ನಾನು'' ಯಾರು?

ಈಗ ನಿದಾಘ ರಿಭುವನ್ನು ದಿಟ್ಟಿಸಿ ನೋಡಿ ಅವರು ತನ್ನ ಗುರುವೇ ಹೌದು ಎಂದು ಗುರುತಿಸಿದನು. ಅವರ ಕಾಲುಗಳಿಗೆ ಎರಗಿ - ''ಅಂಥ ಪ್ರಶ್ನೆಯನ್ನು ನನ್ನ ಗುರುವಲ್ಲದೆ ಬೇರೆ ಯಾರು ? ಕೇಳಲು ಸಾಧ್ಯ ? ದಯವಿಟ್ಟು ನನಗೆ ಉಪದೇಶಿಸಿ'' ಎಂದ.

✤ ✤ ✤

# 22. ಒಬ್ಬ ದೊರೆ ಹಾಗೂ ಒಬ್ಬ ಸಾಧುವಿನ ನಡುವೆ ಇರುವ ವ್ಯತ್ಯಾಸ

ಸ್ವಾಮಿ ವಿಶುದ್ಧಾನಂದರು ಕಾಶಿಯಿಂದ ಬಹು ದೂರದ ಯಾವುದೋ ಕಾಡಿನಲ್ಲಿ ಒಂದು ಮರದ ಕೆಳಗೆ ವಾಸಿಸುತ್ತಿದ್ದ ಪ್ರಾಮಾಣಿಕ ಸಂನ್ಯಾಸಿ. ಮಳೆ ಬರಲಿ ಚಳಿಯಿರಲಿ ಅಲ್ಲಿಯೇ ಇದ್ದುಕೊಂಡು, ರಾತ್ರಿ ಅಲ್ಲಿಯೇ ನಿದ್ರಿಸುತ್ತಿದ್ದರು. ಮಳೆಯಲ್ಲಿ ತಮ್ಮ ದೇಹ ತೊಯ್ದು ಹೋಗದಂತೆ, ತಮ್ಮ ಕೆಳಗೆ ಕೆಲವು ಇಟ್ಟಿಗೆಗಳನ್ನು ಪೇರಿಸಿ, ಅದರ ಮೇಲೆ ಮಲಗುತ್ತಿದ್ದರು. ಹಾದಿಹೋಕರು ಏನು ನೀಡಿದರೆ ಅದೇ ಅವರ ಆಹಾರ. ಬಿಹಾರದ 'ಡಿ' ಎಂಬ ರಾಜ್ಯದ ದೊರೆ ಬೇಟೆಯ ಸಾಹಸಕ್ಕಾಗಿ ಕಾಡಿಗೆ ಬರುತ್ತಿದ್ದವನು ಸಂನ್ಯಾಸಿಯ ವೈರಾಗ್ಯ, ಔದಾಸೀನ್ಯ, ಸಾಧು ಜೀವನದಿಂದ ತುಂಬಾ ಪ್ರಭಾವಿತನಾಗಿದ್ದ. ತಾನು ಕಾಡಿಗೆ ಬಂದಾಗಲೆಲ್ಲ ಏನಾದರೂ ಅವಶ್ಯಕ ವಸ್ತುಗಳನ್ನು ತರುತ್ತಿದ್ದ, ಅವರೊಡನೆ ಮೌನದಿಂದ ಗಂಟೆಗಟ್ಟಲೆ ಕುಳಿತಿರುತ್ತಿದ್ದ. ಅಂಥ ಒಂದು ಸಾನ್ನಿಧ್ಯದಲ್ಲಿ, ದೊರೆ ಸ್ವಾಮೀಜಿಯನ್ನು ಕುರಿತು ತನ್ನೊಡನೆ ಅವರು ಅರಮನೆಗೆ ದಯಮಾಡಿಸಿ ಹಲವಾರು ದಿನಗಳಾದರೂ ಇರಬೇಕೆಂದು ಬಿನ್ನವಿಸಿದ. ಸ್ವಾಮೀಜಿ ತಕ್ಷಣ ಒಪ್ಪಿ. ಒಂದು ಚೀಲವನ್ನು ಹಿಡಿದು ಹೊರಟೇ ಬಿಟ್ಟರು. ಅಷ್ಟು ಬೇಗ ಅವರು ಒಪ್ಪಿದುದನ್ನು ಕಂಡು ದೊರೆಗೆ ಕೊಂಚ ನಿರಾಸೆಯೇ ಆಯಿತು. ಅಂಥ ತೀವ್ರ



ವಿರಾಗಿ ಯಾವುದೋ ಪ್ರತಿರೋಧವಿಲ್ಲದೆ ತನ್ನ ಕೋರಿಕೆಗೆ ಓಗೊಡಲಾರರು ಎಂದೇ ಆತನು ಭಾವಿಸಿದ್ದ.

ಅವರು ಅರಮನೆಗೆ ಬರುತ್ತಿದ್ದಂತೆಯೇ, ಸಕಲ ಸೌಲಭ್ಯಗಳಿಂದ ಸುಸಜ್ಜಿತವಾದ, ಹವಾನಿಯಂತ್ರಿತ ಕೋಣೆಗಳು, ಬಿಸಿನೀರು, ಹಾಸಿಗೆ, ಪೀಠೋಪಕರಣಗಳೆಲ್ಲವೂ ಸಿದ್ಧವಿದ್ದ ಭವ್ಯ ಭವನವನ್ನು ಸ್ವಾಮೀಜಿಗೆಂದೇ ಒದಗಿಸಲಾಯಿತು. ಪ್ರತಿ ಪ್ರಾತಃಕಾಲ, ಕಾದ ಹಾಲು, ಉಪಹಾರ, ಮಧ್ಯಾಹ್ನದ ಊಟ, ಸಂಜೆಯ ಚಹಾ ಚೂಡಾ, ತರಕಾರಿಗಳ ಸಾರು, ಹಣ್ಣಿನ ರಸ, ಇವುಗಳೆಲ್ಲವನ್ನೂ ಸ್ವಾಮೀಜಿಗೆ ನೀಡಲಾಗುತ್ತಿತ್ತು. ಅವುಗಳನ್ನು ಸ್ವಾಮೀಜಿ ಚಪ್ಪರಿಸುತ್ತಲೇ ಚೆನ್ನಾಗಿಯೇ ಸೇವಿಸುತ್ತಿದ್ದರು. ಹೀಗೆಯೇ ಮೂರು ತಿಂಗಳುಗಳು ಉರುಳಿದವು. ಸ್ವಾಮೀಜಿ ಅರಮನೆಯನ್ನು ಬಿಡುವ ಲಕ್ಷಣವೇ ಕಾಣಲಿಲ್ಲ !

ತಾನು ತನ್ನ ರಾಣಿಯರೊಡನೆ ಗೃಹಸ್ಥ ಜೀವನವನ್ನು ನಡೆಸುತ್ತಿರುವ ಒಂದು ಅಂಶವನ್ನು ಬಿಟ್ಟರೆ, ಉಳಿದೆಲ್ಲ ರೀತಿಯಿಂದ ತನಗೂ ಈ ಸಾಧುವಿಗೂ ಏನೇನೂ ವ್ಯತ್ಯಾಸ ಕಾಣುವುದಿಲ್ಲ ಎಂದೇ ದೊರೆಯು ಭಾವಿಸಿದ. ಈ ಸ್ವಾಮಿ ಎಲ್ಲ ರಾಜವೈಭವವನ್ನೂ ಚೆನ್ನಾಗಿಯೇ ಆಸೆಯಿಂದಲೇ ಅನುಭವಿಸುತ್ತಿದ್ದಾನೆ. ಸೋಮಾರಿಯಾಗಿ ಕಾಲ ಕಳೆಯುತ್ತಿದ್ದಾನೆ. ತಾನು ಮಾತ್ರ ರಾಜನ ಕರ್ತವ್ಯಗಳನ್ನೂ ನಿರ್ವಹಿಸಿಕೊಂಡಜು, ಬೆಳಗೆಲ್ಲ ಬೆವರು ಸುರಿಸುತ್ತಾ ದುಡಿಯುತ್ತಿದ್ದೇನೆ. ಈ ಸ್ವಾಮೀಜಿಯ ಹಿಂದಿನ ವೈರಾಗ್ಯಕ್ಕೆ ಹಣ ಇಲ್ಲದುದರ ಅನಿವಾರ್ಯ ಒತ್ತಡ ಕಾರಣವಿರಬಹುದೇ ವಿನಾ ಮಾನಸಿಕ ಸಂಸ್ಕಾರವಿರಲಾರದು. ಎಂದು ದೊರೆ ಯೋಚಿಸಲು ತೊಡಗಿದ. ಹೆಚ್ಚು ಕಾಲ ಈ ಪರಿಸ್ಥಿತಿಯನ್ನು ಸಹಿಸಲು ಅವನಿಗೆ ಸಾಧ್ಯವಾಗಲಿಲ್ಲ. ಒಂದು ಸಂಜೆ ಸ್ವಾಮೀಜಿಯನ್ನು ಕುರಿತು ನೇರವಾಗಿಯೇ ಪ್ರಶ್ನಿಸಿದ: "ತಾವು ಈಗ

ಅರಮನೆಯ ಎಲ್ಲ ವೈಭವ-ಆತಿಥ್ಯಗಳನ್ನು ಸಂತೋಷದಿಂದಲೇ ಅನುಭವಿಸುತ್ತಿದ್ದೀರಿ. ಈ ಕ್ಷಣದಲ್ಲಿ ತಮ್ಮ ಹಾಗೂ ನನ್ನ ಬದುಕಿನ ನಡುವೆ ಏನಾದರೂ ವ್ಯತ್ಯಾಸ ಉಂಟೆ ಸ್ವಾಮಿಗಳೇ?''

ಸ್ವಾಮೀಜಿ ಹೇಳಿದರು: ''ಈ ವಿಷಯವನ್ನು ನಾಳೆ ಚರ್ಚಿಸೋಣ. ಈಗ ಸ್ವಲ್ಪ ತಿರುಗಾಡಿ ಬರೋಣ ರಾಜರೇ. ನಾವಿಬ್ಬರು ಮಾತ್ರವೇ ಹೋಗೋಣ.'' ದೊರೆ ಒಪ್ಪಿದನು. ಕಾಡಿನ ಹಾದಿಯಲ್ಲಿ ಇಬ್ಬರೂ ನಡೆದರು. ಮೂರು ಗಂಟೆ ಕಾಲ ನಡೆಯುವಷ್ಟರಲ್ಲಿ ಕತ್ತಲು ಆವರಿಸಿತು. ರಾತ್ರಿ ದಟ್ಟವಾಯಿತು. ರಾಜಧಾನಿಗೆ ಹಿಂತಿರುಗುವುದಕ್ಕೆ ಮತ್ತೆ ಮೂರು ಗಂಟೆ ಬೇಕಾಗುತ್ತದೆ ಎಂಬ ಕಳವಳ ರಾಜನನ್ನು ಕಾಡಿತು. ತುಂಬ ತಡವಾಗಿದೆ ಹಿಂತಿರುಗೋಣ ಎಂದು ಸ್ವಾಮೀಜಿಯನ್ನು ಕುರಿತು ಹೇಳಿದನು. ಆದರೆ ಅವರು, ''ಇಲ್ಲ ಇಲ್ಲ, ಮುಂದೆ ಹೋಗೋಣ. ದಕ್ಷಿಣ ಭಾರತದ ರಾಮೇಶ್ವರದತ್ತ ನಾವು ನಡೆದಿದ್ದೇವೆ'' ಎಂದರು. ದೊರೆ ಹೌಹಾರಿದನು. ಪ್ರತಿಭಟಿಸಿದನು. ''ಏನು ಹೇಳುತ್ತಿದ್ದೀರಿ ತಾವು? ಬಿಹಾರ ಎಲ್ಲಿ? ರಾಮೇಶ್ವರ ಎಲ್ಲಿ? ಮೂರು ಕಿಲೋಮೀಟರ್ ದೂರದ ಹಾದಿ ಅಲ್ಲಿಗೆ. ನಮ್ಮ ಬಳಿ ಬಟ್ಟೆ ಇಲ್ಲ ಬರಿ ಇಲ್ಲ. ಹಣವೂ ಇಲ್ಲ. ನನ್ನ ಹೆಂಡತಿ ಮಕ್ಕಳಿಗೆ ಮಂತ್ರಿಗಳಿಗೆ ಇತರರು ಯಾರಿಗೂ ಸಹ ಹೇಳಿಬಂದಿಲ್ಲ. ನಾನಿಲ್ಲದೆ ಅವರೆಲ್ಲ ಗಾಬರಿಗೊಂಡು ಚಿಂತಾಕ್ರಾಂತರಾಗಿಬಿಡುತ್ತಾರೆ. ನನ್ನ ಗೈರುಹಾಜರಿಯಲ್ಲಿ ರಾಜ್ಯದ ಕಾರ್ಯಗಳನ್ನು ನೋಡಿಕೊಳ್ಳಲು ನಾನು ಯಾವ ವ್ಯವಸ್ಥೆಯನ್ನೂ ಮಾಡಿ ಬಂದಿಲ್ಲ. ಈ ಕಾಡಿನಲ್ಲೊ ಭಯಂಕರ ಪ್ರಾಣಿಗಳಿವೆ. ನಮ್ಮೊಡನೆ ಬಂದು ಬೆಂಕಿಪೊಟ್ಟಣವನ್ನೂ ತಂದಿಲ್ಲ. ತಕ್ಷಣ ಹಿಂತಿರುಗಿ ಬಿಡೋಣ.'' ಎಂದನು.

ಸ್ವಾಮೀಜಿ ಗಟ್ಟಿಯಾಗಿ ನಕ್ಕು ಹೇಳಿದರು? ''ನಿನ್ನ ಮತ್ತು ನನ್ನ ನಡುವಿನ ವ್ಯತ್ಯಾಸ ತಿಳಿಯಿತೇ ಮಹಾ ರಾಜ? ಎಲ್ಲ ವೈಭವದ ಸವಲತ್ತುಗಳನ್ನೂ ಬಂದು



ಕ್ಷಣದಲ್ಲಿ ತೊರೆದು ನಾನು ಹೊರಟುಬಿಡಬಲ್ಲೆ. ನಿನಗೆ ಅದು ಸಾಧ್ಯವಿಲ್ಲ. ನಿನ್ನ ಕಲ್ಪಿತ ಕರ್ತವ್ಯಗಳಿಂದ, ಸಂಸಾರದ ವ್ಯಾಮೋಹದಿಂದ, ರಾಜ್ಯದ ವಿಷಯಗಳಿಂದ, ಸುಖಗಳಿಂದ ನೀನು ಬಂಧಿತನಾಗಿದ್ದೀಯೆ. ನಾನು ಸದಾ ಸರ್ವದಾ ಸ್ವತಂತ್ರ. ಯಾವುದೂ ನನ್ನನ್ನು ಬಂಧಿಸದು. ರಾತ್ರಿಯ ವೇಳೆ ಪ್ರಯಾಣಿಸಲು ನಿನಗೆ ಭಯ. ನನ್ನ ದೇಹದ ಪರಿವೆಯೇ ನನಗಿಲ್ಲ. ನನಗೆ ಭೀತಿಯಿಲ್ಲ. ಆಯಿತು ನಿನ್ನನ್ನು ರಾಜ್ಯದ ಗಡಿಯವರೆಗೂ ತಲುಪಿಸುತ್ತೇನೆ. ನಂತರ ನನ್ನ ಹಾದಿ ಹಿಡಿದು ಹೊರಡುತ್ತೇನೆ. ದೇವರ ಆಶೀರ್ವಾದ ನಿನ್ನ ಮೇಲಿರಲಿ!''

✤ ✤ ✤

# 23. ಶ್ರೀಧರಾಚಾರ್ಯರ ಕಥೆ

ಶ್ರೀಧರ ತನ್ನ ಬಾಲ್ಯದ ದಿನಗಳಲ್ಲಿ ಅಷ್ಟೇನೂ ಬುದ್ಧಿವಂತನಾಗಿರಲಿಲ್ಲ, ಎರಡನೆಯ ತರಗತಿಗಿಂತ ಮುಂದೆ ದಾಟಲು ಅವನಿಗೆ ಸಾಧ್ಯವಾಗಲಿಲ್ಲ. ಒಂದು ದಿನ ಅವನು ರಸ್ತೆಯಲ್ಲಿ ಹೋಗುತ್ತಿದ್ದಾಗ, ಆ ನಗರದ ದೊರೆ, ತನ್ನ ಅರಮನೆಯ ಅಟ್ಟದ ಮೇಲೆ ಓಡಾಡುತ್ತಿದ್ದವರು, ಈ ಶ್ರೀಧರನನ್ನು ನೋಡುತ್ತಲೇ ಇದ್ದ. ತನ್ನ ದಿವಾನನಿಗೆ ಆ ಬಾಲಕನನ್ನು ತೋರಿಸಿ – "ಪ್ರಿಯ ದಿವಾನಜೀ, ನಿಮ್ಮ ದೇವರು ಅಪರಿಮಿತ ಶಕ್ತ, ಅಸಾಧ್ಯವಾದುದನ್ನೂ ಸಾಧ್ಯಗೊಳಿಸುತ್ತಾನೆ ಎಂದು ನೀವು ಯಾವಾಗಲೂ ಸಾಧಿಸುತ್ತೀರಲ್ಲಾ ಈಗ ನಿಮ್ಮ ಹೇಳಿಕೆಯನ್ನು ಸಮರ್ಥಿಸಿ ಕೊಡುವ ಒಂದು ಅವಕಾಶವನ್ನು ನೀಡುತ್ತೇನೆ. ಅಲ್ಲಿ ದೂರದಲ್ಲಿ ಅಡ್ಡಾಡುತ್ತಿರುವ ಶ್ರೀಧರನನ್ನು ನೋಡಿರಿ. ಅವನೊಬ್ಬ ಶುದ್ಧ ದಡ್ಡ ಎಂದೇ ಖ್ಯಾತನಾಗಿದ್ದಾನೆ. 18 ವರ್ಷವಾದರೂ ಏನೇನೂ ವಿದ್ಯೆ ಕಲಿತಿಲ್ಲ. ಅವನನ್ನು ನಿಮ್ಮ ಸುಪರ್ದಿಗೆ ತೆಗೆದುಕೊಂಡು ಒಂದು ವರ್ಷದೊಳಗೆ ಅವನನ್ನು ಸಂಸ್ಕೃತದಲ್ಲಿ ಪಂಡಿತನನ್ನಾಗಿಸಿ. ನೀವು ಯಾವಾಗಲೂ ನನ್ನನ್ನು ಒತ್ತಾಯಿಸುತ್ತಿರುವಂತೆ ಹಲವಾರು ಶ್ರೀ ರಾಮಮಂದಿರಗಳನ್ನು ಆಗ ಕಟ್ಟಿಸುತ್ತೇನೆ." ಎಂದನು. ಈ ಸವಲನ್ನು ದಿವಾನನು ಒಪ್ಪಿದನು. ಆ



ಹುಡುಗನನ್ನು ಕರೆಸಿಕೊಂಡನು. ರಾಜನ ಸಮ್ಮುಖದಲ್ಲಿ, ಆ ಬಾಲಕನು ಇನ್ನು ಮುಂದೆ ದಿವಾನ್‌ಜೀ ಮನೆಯಲ್ಲಿದ್ದುಕೊಂಡು ಸಂಸ್ಕೃತವನ್ನೂ ಶಾಸ್ತ್ರಗಳನ್ನು ಕಲಿಯತಕ್ಕದ್ದೆಂದೂ ತೀರ್ಮಾನವಾಯಿತು. ಹುಡುಗನ ತಂದೆ ತಾಯಿಗಳನ್ನು ಒಪ್ಪಿಸುವ ಜವಾಬ್ದಾರಿಯನ್ನು ರಾಜನೇ ತೆಗೆದುಕೊಂಡು ಅವರ ಯೋಗಕ್ಷೇಮವನ್ನೂ ನೋಡಿಕೊಳ್ಳಲು ಸಮ್ಮತಿಸಿದನು.

ಮಾರನೆಯ ದಿನವೇ ದಿವಾನನು ಶ್ರೀಧರನಿಗೆ ನರಸಿಂಹ ಪೂರ್ವತಾಪಿನೀ ಮಂತ್ರವನ್ನು ಉಪದೇಶಿಸಿ, ವಿದ್ಯಾಭ್ಯಾಸ ಮಾಡಿಸಲು ತೊಡಗಿದನು. ಪರಮಾತ್ಮನ ಅನುಗ್ರಹದಿಂದ ಒಂದು ವರ್ಷದ ಅವಧಿಯಲ್ಲಿಯೇ ಬಾಲಕನು ಶ್ರೇಷ್ಠ ವಿದ್ವಾಂಸನಾದನು. ಶ್ರೀಧರನಿಗೆ ಅತ್ಯಂತ ಪ್ರಿಯವಾದ ಗ್ರಂಥವೆಂದರೆ ಮಹರ್ಷಿ ವೇದವ್ಯಾಸರಿಂದ ರಚಿತವಾದ ಶ್ರೀಮದ್ಭಾಗವತಂ. ಆ ಗ್ರಂಥವನ್ನು ಅದೆಷ್ಟು ಬಾರಿ ಪಠಿಸಿದರೂ ಅವನಿಗೆ ತೃಪ್ತಿಯಿಲ್ಲ.

ಒಂದು ದಿನ ಉದ್ಯಾನವನದಲ್ಲಿ ಒಂದು ಮರದ ಕೆಳಗೆ ಕುಳಿತು ಅವನು ಭಾಗವತ ಗ್ರಂಥವನ್ನು ಓದುತ್ತಿದ್ದನು. ಇದ್ದಕ್ಕಿದ್ದಂತೆ ಎರಡು ಮೊಟ್ಟೆಗಳು ಮರದ ಮೇಲಿದ್ದ ಗೂಡಿನಿಂದ ಕೆಳಗೆ ಬಿದ್ದು ಒಡೆದುಹೋದವು. ಅವು ಸಾಕಷ್ಟು ಪಕ್ವವಾಗಿದ್ದುದರಿಂದ ಎರಡು ಪುಟ್ಟ ಮರಿಗಳು ಹೊರಬಂದವು. ಅವು ತುಂಬ ಹಸಿದಿದ್ದು ಏನನ್ನಾದರೂ ತಿನ್ನಲೆಂದು ಅತ್ತಿತ್ತ ನೋಡುತ್ತಿದ್ದವು. ತಮ್ಮ ಪುಟ್ಟ ಬಾಯನ್ನು ತೆರೆದೇ ಇದ್ದವು. ಅದೇ ವೇಳೆಗೆ ಎರಡು ದೊಡ್ಡ ಸೊಳ್ಳೆಗಳು ಪರಸ್ಪರ ಕಚ್ಚಾಡುತ್ತಾ ತೀವ್ರವಾಗಿ ಗಾಯಗೊಂಡವು. ಆ ಎರಡು ಗುಬ್ಬಚ್ಚಿ ಮರಿಗಳ ತೆರೆದ ಬಾಯಲ್ಲಿ ಸತ್ತು ಬಿದ್ದವು! ಮರಿಗಳ ಹಸಿವು ಕೂಡಲೇ ತಣಿಯಿತು. ಈ ದೃಶ್ಯವನ್ನು ನೋಡುತ್ತಿದ್ದ ಶ್ರೀಧರ ತನ್ನಲ್ಲೇ ಆಲೋಚಿಸತೊಡಗಿದ.

"ನೋಡಿದೆಯಾ, ಅದೇ ತಾನೇ ಕಣ್ಣು ಬಿಟ್ಟ ಪುಟ್ಟ ಮರಿಗಳ ಆಹಾರವನ್ನೂ ಪರಮಾತ್ಮನು ಸಿದ್ಧಪಡಿಸಿದ್ದಾನೆ. ಎಂದಮೇಲೆ ಸಕಲ ಜೀವಿಗಳ ಅಗತ್ಯವನ್ನೂ ಅವನೇ ಪೂರೈಸುತ್ತಾನೆ. ಮೂರ್ಖನಂತೆ ನಾನೇಕೆ ದಿವಾನಜೀ ಅವರ ಅನ್ನ ವಸತಿಗಾಗಿ ಬಾಯಿ ಬಿಡಬೇಕು!" ಹೀಗೆ ಚಿಂತಿಸುತ್ತಾ ಭಾಗವತ ಗ್ರಂಥದೊಡನೆ ಕೂಡಲೇ ಕಾಡಿಗೆ ಹೊರಟುಬಿಟ್ಟನು. ಶ್ರೀಮದ್ಭಾಗವತಂ ಗ್ರಂಥದ ಸುಂದರ ವ್ಯಾಖ್ಯಾನವನ್ನು ರಚಿಸತೊಡಗಿದನು. ಅದನ್ನು ಪೂರೈಸಲು ಹಲವಾರು ವರ್ಷಗಳೇ ಹಿಡಿದವು. ಅದನ್ನು ಕಾಶಿಗೆ ತೆಗೆದುಕೊಂಡು ಹೋಗಿ ಪಂಡಿತರ ಸಮ್ಮತಿಗಾಗಿ ನೀಡಿದನು. ಅದನ್ನು ಪರಾಮರ್ಶಿಸಿದ ಪಂಡಿತರು. ವ್ಯಾಖ್ಯಾನವು ವೈಷ್ಣವ ಸಿದ್ಧಾಂತದ ಬೆಳಕಿನಲ್ಲಿದ್ದೆಯೆಂದೂ ಭಾಗವತದ ಮೂಲ ನಿಲವು ಅದ್ವೈತ ಪರವಾದದ್ದೆಂದೂ ತೀರ್ಮಾನಿಸಿ, ಶ್ರೀಧರ ವ್ಯಾಖ್ಯಾನವನ್ನು ತಿರಸ್ಕರಿಸಿದರು. ಅತ್ಯಂತ ಶ್ರದ್ಧೆ-ಶ್ರಮಗಳಿಂದ ರಚಿಸಿದ ವ್ಯಾಖ್ಯಾನವು ಹೀಗೆ ತಿರಸ್ಕೃತವಾದುದಕ್ಕೆ ಶ್ರೀಧರನಿಗೆ ಅತೀವ ನಿರಾಸೆಯಾಯಿತು. ತನ್ನ ಉದ್ವೇಗದಲ್ಲಿ ಅವನು ಪಂಡಿತರನ್ನು ಕುರಿತು, "ಈ ಗ್ರಂಥದ ಅಂತಿಮ ತೀರ್ಪಿನ ಅಧಿಕಾರಿಗಳು ನೀವಲ್ಲ, ಕಾಶಿ ವಿಶ್ವನಾಥಜೀಯ ಬಳಿಗೆ ತೆರಳೋಣ. ಆತನ ತೀರ್ಪನ್ನು ಕೇಳೋಣ" ಎಂದನು. ಎಲ್ಲರೂ ವಿಶ್ವನಾಥನ ಮಂದಿರವನ್ನು ಪ್ರವೇಶಿಸಿ, ವ್ಯಾಖ್ಯಾನವನ್ನು ದೇವದೇವನ ಮುಂದೆ ಇರಿಸಿದರು, ಭಗವಂತನ ತೀರ್ಮಾನಕ್ಕಾಗಿ ಪ್ರಾರ್ಥಿಸಿದರು. ಪ್ರಭು ವಿಶ್ವನಾಥಜೀಯ ಸಿಡಿಲಿನಂತಹ ಧ್ವನಿ ಎಲ್ಲೆಲ್ಲೂ ಮೊಳಗಿತು: "ಭಾಗವತದ ಕರ್ತೃ ವ್ಯಾಸರು ಅದನ್ನು ಸಂಪೂರ್ಣವಾಗಿ ತಿಳಿದಿದ್ದಾರೆ. ಹಾಗೆಯೇ ಶುಕಮಹರ್ಷಿ. ಪರೀಕ್ಷಿತ ಮಹಾರಾಜನು ಪೂರ್ಣವಾಗಿ ತಿಳಿದಿದ್ದಾನೋ ಇಲ್ಲವೋ ಹೇಳಲಾಗದು. (ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ ಶೇಕಡ ನಲವತ್ತು ಅಂಕ ಪಡೆದವನೂ ತೇರ್ಗಡೆಯಾಗಬಹುದು. ಅವನು ನೂರು ಅಂಕವನ್ನು ಗಳಿಸಲೇ ಬೇಕಿಲ್ಲ!)



ಆದರೆ ಶ್ರೀಧರನು ಪ್ರಭು ನರಸಿಂಹದೇವರ ಕೃಪಾಕಟಾಕ್ಷದಿಂದ ಶ್ರೀಮದ್ಭಾಗವತವನ್ನು ಪರಿಪೂರ್ಣವಾಗಿ ತಿಳಿದಿದ್ದಾನೆ ಎಂದು ನಾನು ಘೋಷಿಸುತ್ತೇನೆ!" ಭಾಗವತದ ಶ್ರೀಧರ ವ್ಯಾಖ್ಯಾನವು ಅತ್ಯಂತ ಅಧಿಕಾರಯುತವಾದದ್ದು ಎಂದು ಇಂದಿಗೂ ಗೌರವಿಸಲ್ಪಟ್ಟಿದೆ.

✤ ✤ ✤

1 ವ್ಯಾಸೋವೇತ್ತಿ ಶುಕೋವೇತ್ತಿ ರಾಜಾವೇತ್ತಿ ವಾನವಾ ।
ಶ್ರೀಧರಃ ಸಕಲಂವೇತ್ತಿ ಶ್ರೀ ನೃಸಿಂಹ ಪ್ರಸಾದತಃ ॥

# 24. ಅವರೇ ನನ್ನ ಗುರು

ಜೀವನ್ಮುಕ್ತರೆಂದು ತಿಳಿಯಲಾದ ಇಬ್ಬರು ಸಂತರು ಬದರೀನಾಥ ಕ್ಷೇತ್ರದಲ್ಲಿದ್ದರು. ರಸ್ತೆಯ ಮೊದಲ ಕುಟೀರದಲ್ಲಿ ಮಧ್ಯ ವಯಸ್ಸಿನ ತರುಣ ಸಂತ ವಾಸವಿದ್ದ. ಅದೇ ರಸ್ತೆಯ ಕಡೆಯ ಕುಟೀರದಲ್ಲಿ ನೀಳವಾದ ಬಿಳಿಯ ಗಡ್ಡವನ್ನು ಹೊಂದಿದ್ದ ವೃದ್ಧ ಸಂತ ವಾಸವಿದ್ದ. ಬದರಿಗೆ ಯಾತ್ರೆ ಬಂದ ಪ್ರವಾಸಿಗರು ಈ ಪಟ್ಟದಲ್ಲಿ ದರ್ಶನ ಮಾಡಲು ಯೋಗ್ಯರಾದ ಮಹಾತ್ಮರು ಯಾರಿದ್ದಾರೆ ಎಂದು ಸ್ಥಳೀಯರನ್ನು ವಿಚಾರಿಸುವಾಗ, ಅವರು ಈ ಇಬ್ಬರು ಸಂತರನ್ನೇ ತೋರಿಸುತ್ತಿದ್ದರು. ಸಾಧಾರಣವಾಗಿ ಪ್ರವಾಸಿಗರು ರಸ್ತೆಯ ಮೊದಲ ಕುಟೀರಕ್ಕೆ ತೆರಳುತ್ತಿದ್ದರು. ಅವರು ಅಲ್ಲಿಂದ ಹೊರಡುವಾಗ, ತರುಣ ಸಂತನು ವ್ಯಂಗ್ಯದ ದನಿಯಲ್ಲಿ ''ಕಡೆಯ ಕುಟೀರದಲ್ಲಿರುವ ಆ ಕಪಟಿ ಮುದುಕನನ್ನೂ ನೀವೇಕೆ ನೋಡಿ ಹೋಗಬಾರದು ? ನಿಮ್ಮನ್ನೆಲ್ಲ ಮರಳು ಮಾಡಲು ಅವನು ನೀಳವಾದ ಬಿಳಿಯ ಗಡ್ಡ ಬಿಟ್ಟಿದ್ದಾನೆ. ಜೇಬು ತುಂಬ ಹಣವುಳ್ಳ ಮಿಕಗಳಿಗಾಗಿ ಕಾದಿದ್ದಾನೆ'' ಎನ್ನುತ್ತಿದ್ದನು. ಅವರೆದುರಿನಲ್ಲಿ ನೇರವಾಗಿ ಇಲ್ಲವೇ ಪರ್ಯಾಯವಾಗಿ ವೃದ್ಧ ಸಂತನನ್ನು ನಿಂದಿಸುತ್ತಿದ್ದನು. ಇದರಿಂದ ನಿರಾಸೆಗೊಂಡ ಬಹು ಮಂದಿ ಪ್ರವಾಸಿಗರು, ಆತನನ್ನು ಸಂದರ್ಶಿಸದೆಲೇ ಹಿಂತಿರುಗಿ ಹೋಗುತ್ತಿದ್ದರು. ಈ ವಿಷಯ ವೃದ್ಧನ ಕಿವಿಗೂ ಬೀಳುತ್ತಲೇ ಇದ್ದಿತು. ಆತನ



ಶಿಷ್ಯರಲ್ಲಿ ಒಬ್ಬನು ವೃದ್ಧ ಸಂತನನ್ನು ಒಮ್ಮೆ ಕೇಳಿದ: ''ಮಹರಾಜ್ ಈ ಧೂರ್ತ ನಿಂದನೆಯನ್ನು ತಾವೇಕೆ ಸಹಿಸಿಕೊಂಡಿರುವಿರಿ? ಆ ತರುಣ ಸಾಧುವನ್ನು ಬರಮಾಡಿಕೊಂಡು ಏಕೆ ತರಾಟೆಗೆ ತೆಗೆದುಕೊಳ್ಳಬಾರದು?'' ವೃದ್ಧ ಸಂತ ಹೇಳಿದರು : ''ಆ ತರುಣನಿಗೆ ನನ್ನ ಬಗ್ಗೆ ಯಾವ ವೈಯಕ್ತಿಕ ದ್ವೇಷವಿದೆಯೋ ನನಗೆ ತಿಳಿಯದು. ಆ ತರುಣನ ಬಳಿಗೆ ನೀನು ಹೋಗಿ ಪ್ರಚ್ಛನ್ನ ಶಿಷ್ಯನಂತೆ ವರ್ತಿಸಿ, ನನ್ನೊಡನೆ ನಿನ್ನ ಸಂಬಂಧವನ್ನು ಬಯಲು ಮಾಡದೆ ಇದ್ದು ಬಾ. ಅವನ ಪ್ರೀತಿಯನ್ನು ಸಂಪಾದಿಸಲು ಯತ್ನಿಸು. ನನ್ನಿಂದ ಅವನಿಗೆ ಏನು ಅಪರಾಧವಾಗಿದೆ, ಯಾವ ಕಾರಣಕ್ಕಾಗಿ ಅವನು ನನ್ನನ್ನು ಹೀಗೆ ಬಂದವರೆದುರಿಗೆ ನಿಂದಿಸುತ್ತಿದ್ದಾನೆ ತಿಳಿದುಕೋ.''

ಬಹುಬೇಗ ಆ ಶಿಷ್ಯ ತರುಣ ಸಂತನ ಮೆಚ್ಚಿಗೆಯನ್ನು ಗಳಿಸಿ ನಂಬಿಕಸ್ತನೆನಿಸಿಕೊಂಡ. ಒಂದು ದಿನ ಏಕಾಂತದಲ್ಲಿ ಆತನನ್ನು ಕೇಳಿದ: ''ಪೂಜ್ಯ ಸ್ವಾಮೀಜಿ, ತಾವು ಅತ್ಯಂತ ಶ್ರೇಷ್ಠ ಮಹಾತ್ಮರೆಂದು ನಾನು ಅರಿತಿದ್ದೇನೆ. ಆದರೆ ಆ ವೃದ್ಧ ಸಂತರನ್ನು ತಾವು ಏಕೆ ಸತತವಾಗಿ ಸಂದರ್ಶಕರೆದುರಿಗೆ ಅಪಮಾನಿಸುವುದರಲ್ಲಿ ತತ್ಪರರಾಗಿದ್ದೀರಿ ? ಅವರು ನಿಮಗೆ ಯಾವ ರೀತಿಯಲ್ಲಿ ತೊಂದರೆ ಮಾಡಿದ್ದಾರೆ?''

ತರುಣ ಸಂನ್ಯಾಸಿ ಮುಕ್ತವಾಗಿ ನಗುತ್ತಾ, ತನ್ನ ಜೇಬಿನಿಂದ ಒಂದು ಛಾಯಾಚಿತ್ರವನ್ನು ತೆಗೆದು ಈ ಶಿಷ್ಯನಿಗೆ ತೋರಿಸಿ ಹೇಳಿದ: ''ಏಕೆ ಎಂದರೆ ಇವರೇ ನನ್ನ ಗುರು.'' ಅದು ಆ ವೃದ್ಧ ಸಂತನ ಚಿತ್ರವೇ ಆಗಿತ್ತು. ಮತ್ತೆ ಹೇಳಿದ: '' ನನ್ನ ಗುರು ಕಂಡ ಕಂಡವರಿಗೆಲ್ಲ ದರ್ಶನ ನೀಡಲು ಬಯಸುವುದಿಲ್ಲ.

ಸಂದರ್ಶಕರನ್ನು ಸೂಕ್ತವಾಗಿ ಪರೀಕ್ಷಿಸಲೆಂದೇ ಅವರು ನನ್ನನ್ನು ಈ ಕುಟೀರದಲ್ಲಿರಿಸಿದ್ದಾರೆ. ನನ್ನ ನಿಂದನೆಯನ್ನೆಲ್ಲ ಕೇಳಿದ ನಂತರವೂ ಕೇವಲ ಕೆಲವರು ಅವರನ್ನು ನೋಡಲೇಬೇಕೆಂದು ಒತ್ತಾಯಿಸಿದರೆ, ಅಂಥವರನ್ನು

ಮಾತ್ರ ನನ್ನ ಗುರು ಸ್ವಾಗತಿಸುತ್ತಾರೆ. ನನಗೆ ವಹಿಸಲಾದ ಕರ್ತವ್ಯವನ್ನು ಮಾತ್ರ ನಾನು ನಿರ್ವಹಿಸುತ್ತಿದ್ದೇನೆ. ನಿನ್ನನ್ನು ಇಲ್ಲಿಗೆ ಕಳುಹಿಸಿಕೊಡುವ ಬಗೆಗೆ ಸಹ ಅವರೇ ನನಗೆ ಸೂಚನೆಯನ್ನು ನೀಡಿದ್ದರು. ಅವರ ಅತ್ಯುತ್ತಮ ಶಿಷ್ಯನಾದ ನಿನ್ನನ್ನು ನನ್ನ ಸೇವೆಗೆಂದು ಸ್ವಲ್ಪ ಕಾಲ ನಿಯೋಜಿಸಿದ್ದರು !"

✤ ✤ ✤



## 25. ಶ್ರೇಷ್ಠ ಕವಿ ಯಾರು ?

ಕಾಳಿದಾಸ ಹಾಗೂ ಸಮಕಾಲೀನರಾದ ಪ್ರಸಿದ್ಧ ಸಂಸ್ಕೃತ ಕವಿಗಳು. ಕಾಳಿದಾಸನು ಉಪಮೆ ಎಂಬ ಕಾವ್ಯಾಲಂಕಾರದ ಬಳಕೆಗೆ ಪ್ರಸಿದ್ಧನಾದರೆ ದಂಡಿಯು ಮಧುರ ಪದ ರಚನೆಗೆ ಹೆಸರಾದವನು. ಕಾಳಿದಾಸ ಹಾಗೂ ದಂಡಿ ಇವರಲ್ಲಿ ಯಾರು ಶ್ರೇಷ್ಠರು ಎಂಬ ಬಗೆಗೆ ಅವರವರ ಪ್ರಶಂಸಕರಲ್ಲಿ ಸದಾ ವಾಗ್ವಾದಗಳು ನಡೆಯುತ್ತಿದ್ದವು. ಇಬ್ಬರೂ ಕವಿಗಳು ಒಮ್ಮೆ ಒಟ್ಟುಗೂಡಿದಾಗ ಮುಂದೆ ಇಂತಹ ವಿರೋಧಗಳು ಇರಬಾರದು ಎಂಬ ದೃಷ್ಟಿಯಿಂದ ಈ ವಿಷಯವನ್ನು ಅಂತಿಮವಾಗಿ ನಿರ್ಧರಿಸಿಬಿಡಲು ತೀರ್ಮಾನಿಸಲಾಯಿತು. ತಮ್ಮ ಯೌಗಿಕ ಶಕ್ತಿಯಿಂದ ಇಬ್ಬರೂ ವಿದ್ಯಾ ವಿವೇಕಗಳ ಅಧಿದೇವತೆಯಾದ ಸರಸ್ವತಿಯನ್ನು ಆವಾಹನೆ ಮಾಡಿದರು. ದೇವಿ ಅವರಿಗೆ ದರ್ಶನವಿತ್ತಳು. ಈ ವಿಷಯದ ಬಗ್ಗೆ ತಾನೇ ತೀರ್ಪು ನೀಡಬೇಕೆಂದು ಕೋರಿದಾಗ, ದೇವಿಯು

---

1. ಉಪಮಾ ಕಾಳಿದಾಸಸ್ಯ ಭಾರವೇರರ್ಥ ಗೌರವಂ ।
   ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋ ಗುಣಾಃ ॥
2. ಕವಿರ್ದಂಡೀ ಕವಿರ್ದಂಡೀ ಕವಿರ್ದಂಡೀ ನ ಸಂಶಯಃ ॥
3. ತ್ವಮೇವಾಹಂ ತ್ವಮೇವಾಹಂ ತ್ವಮೇವಾಹಂ ನ ಸಂಶಯಃ ॥

ತಕ್ಷಣವೇ ಹೀಗೆಂದಳು: ''ದಂಡಿಯು ಕವಿ ದಂಡಿಯು ಕವಿ. ನಿಸ್ಸಂದೇಹವಾಗಿ ದಂಡಿಯು ಕವಿ.'' ಇದರಿಂದ ಕುಪಿತನಾದ ಕಾಳಿದಾಸನು ಆವೇಶದಿಂದ ಕೂಗಿದನು, ''ಓ ಕುಟಿಲೆ, ಹಾಗಾದರೆ ನಾನು ಯಾರು ?'' ಮಂದಹಾಸದಿಂದ ಸರಸ್ವತಿ ಡಿಕ್ರೀ ನೀಡಿದಳು ! ''ನೀನು ನಾನೇ ಆಗಿದ್ದೀಯೆ. ಸಂದೇಹವೇ ಇಲ್ಲ, ನೀನು ನಾನೇ ಆಗಿದ್ದೀಯೆ.'' ಈ ವಿಶಿಷ್ಟ ತೀರ್ಪಿನ ಬಗ್ಗೆ ಇಬ್ಬರು ಕವಿಗಳೂ ಸಂತುಷ್ಟರಾದರು.

✤ ✤ ✤



## 26. ಜನ್ಮದಿನದ ವಿಶಿಷ್ಟ ಉಡುಗೊರೆ

ರಾಮಾನುಜಾಚಾರ್ಯರು ಶ್ರೇಷ್ಠ ವೈಷ್ಣವ ಸಂತರಲ್ಲಿ ಒಬ್ಬರು. ಒಂದು ವರ್ಷ ಶ್ರೀರಾಮ ನವಮಿಯ ಹಿಂದಿನ ದಿನವೇ ಅವರು ತುಂಬ ವಿಚಲಿತರಾಗಿದ್ದರು. ರಾಮನವಮಿ ಶ್ರೀರಾಮನ ಜನ್ಮದಿನವಾದುದರಿಂದ ಶ್ರೀರಾಮನಿಗೆ ಏನಾದರೂ ಉಡುಗೊರೆ ನೀಡಬೇಕು. ಅದು ರಾಮನಲ್ಲಿ ಇಲ್ಲದೆ ಇರುವಂತಹುದಾಗಿರಬೇಕು ಎಂಬುದೇ ಅವರ ಚಿಂತೆ. ರಾತ್ರೆಯೆಲ್ಲ ತಲೆ ಕೆರೆದುಕೊಂಡರೂ, ಸೂಕ್ತವಾದ ಉಡುಗೊರೆ ಅವರಿಗೆ ಹೊಳೆಯಲಿಲ್ಲ. ಬೆಳಗಿನ ಜಾವ ಅವರು ಮೇಲೆ ಎದ್ದಾಗ ಅವರ ತಲೆಯಲ್ಲಿ ಮಿಂಚಿನಂತೆ ಒಂದು ವಿಷಯ ಹೊಳೆಯಿತು. ಪೂಜೆಯ ಕೋಣೆಗೆ ಹೋಗಿ ''ಇಂದು ನನ್ನ ಪ್ರೀತಿಯ ಶುಭಾಶಯಗಳನ್ನು ಸ್ವೀಕರಿಸಪ್ಪಾ ಶ್ರೀರಾಮ. ನಿನಗೆ ಒಂದು ಜನ್ಮದಿನದ ಉಡುಗೊರೆ ನೀಡಲಿದ್ದೇನೆ. ನನ್ನೆಲ್ಲ ಅಜ್ಞಾನವನ್ನೂ ನಿನಗೆ ಅರ್ಪಿಸಿಬಿಡುತ್ತೇನೆ. ಅದೊಂದು ಮಾತ್ರ ನಿನ್ನಲಿಲ್ಲ, ನನ್ನಲ್ಲಿ ಅದು ಸಮೃದ್ಧವಾಗಿದೆ !''

ಪ್ರಭು ರಾಮ ಈ ವಿಶಿಷ್ಟ ಉಡುಗೊರೆಯಿಂದ ತುಂಬ ಸಂತಸಗೊಂಡ !

✤ ✤ ✤

## 27. ಗುಣಪಡಿಸಲೇ ಆಗದ ಉದರಶೂಲೆ

ದೊರೆ ಆದಿಶೇಷನು ಒಂದು ಸಹಸ್ರ ಹೆಡೆಯುಳ್ಳ ಸರ್ಪರಾಜ. ಅವನ ಬೆನ್ನ ಮೇಲೆಯೇ ಪ್ರಭು ವಿಷ್ಣುವು ನಿದ್ರಿಸುವುದು. ಒಮ್ಮೆ ಅವನಿಗೆ ಸಹಿಸಲಾಗದ ತಲೆಶೂಲೆ ಉಂಟಾಯಿತು. ಆಯುರ್ವೇದದಲ್ಲಿ ವಿಶೇಷ ತಜ್ಞರಿಂದ ಆಯುರ್ವೇದ ಔಷಧಗಳನ್ನು ತೆಗೆದುಕೊಂಡಾಯಿತು. ಎರಡು ವರ್ಷಗಳು ಕಳೆದರೂ ಎಳ್ಳಷ್ಟೂ ಗುಣ ಕಾಣಲಿಲ್ಲ. ಆಯುರ್ವೇದದ ಬಗೆಗೇ ಅವನಿಗೆ ಜಿಗುಪ್ಸೆ ಉಂಟಾಯಿತು. ಅಷ್ಟಾಂಗ ಹೃದಯಮ್, ಚರಕ ಸಂಹಿತಾ, ಮಾಧವಾ, ಮಾಧವ ನಿದಾನಮ್ ಮುಂತಾದ ಗ್ರಂಥಗಳ ಪ್ರತಿಗಳನ್ನೆಲ್ಲ ಸಂಗ್ರಹಿಸಿದ, ಎಲ್ಲವನ್ನೂ ಒಟ್ಟಾಗಿಸಿ ಬೆಂಕಿ ಹೊತ್ತಿಸಿಬಿಡಲು ಒಂದು ಬೆಂಕಿಪೊಟ್ಟಣ ತರುತ್ತಿದ್ದ. ಅದೇ ಕ್ಷಣದಲ್ಲಿ ವೈದ್ಯನಾಥನಾದ ಧನ್ವಂತರಿ ಓರ್ವ ವೃದ್ಧ ಬ್ರಾಹ್ಮಣನ ವೇಷದಲ್ಲಿ ಸರ್ಪರಾಜ ಆದಿಶೇಷನ ಎದುರು ಬಂದು ನಿಂತ. ಇಷ್ಟೆಲ್ಲ ಗ್ರಂಥಗಳನ್ನು ಒಮ್ಮೇಲೆ ಸುಟ್ಟು ಹಾಕುತ್ತಿರುವುದೇಕೆ ? ಎಂದು ಪ್ರಶ್ನಿಸಿದ. ಕಾರಣವನ್ನು ತಿಳಿದು ಆದಿಶೇಷನು ಬಳಸಿದ ಔಷಧಗಳಲ್ಲಿ ಯಾವುದೇ ಒಂದರಿಂದಲೇ ಅವನ ಉದರ ಶೂಲೆಯನ್ನು ವಾಸಿ ಮಾಡುವುದಾಗಿ ಭರವಸೆ ನೀಡಿದ. ಆದಿಶೇಷನ ಗಂಟಲಿಗೆ ಉದ್ದವಾದ ಒಂದು ರಬ್ಬರ್ ಕೊಳವೆಯನ್ನು ತುರುಕಿದ. ಅದರ ಮತ್ತೊಂದು ತುದಿಯನ್ನು ಒಂದು ಕಾಲುವೆಗೆ ಜೋಡಿಸಿದ.



ತಿಂಗಳುಗಟ್ಟಲೆ ಆದಿಶೇಷನು ಬಳಸಿದ ಎಲ್ಲ ಔಷಧ ದ್ರವಗಳನ್ನೂ ಹೊರತೆಗೆದ. ಅದನ್ನು ನೇರವಾಗಿ ಅವನ ಗಂಟಲಿಗೆ ಫನಲ್ ಹಾಗೂ ರಬ್ಬರ್ ಕೊಳವೆಯ ಮೂಲಕ ಸುರಿದ. ಔಷಧವು ನೇರವಾಗಿ ಅವನ ಹೊಟ್ಟೆಯನ್ನೇ ಸೇರಿತು. ಅರ್ಧಗಂಟೆಯೊಳಗೆ ಪವಾಡದಂತೆ ಆದಿಶೇಷನ ಹೊಟ್ಟೆನೋವು ಮಾಯವಾಯಿತು. ಆದಿಶೇಷನಿಗೆ ಆಶ್ಚರ್ಯವಾಯಿತು. ಧನ್ವಂತರಿ ಅವನನ್ನು ಕುರಿತು ಹೇಳಿದ: ''ಔಷಧ ವಿಜ್ಞಾನ ಹಾಗೂ ಔಷಧಿಗಳು ಎಲ್ಲವೂ ಸಮರ್ಪಕವಾಗಿಯೇ ಇವೆ. ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುವುದರಲ್ಲಿ ಕುಶಲತೆ ಬೇಕು. ಸರ್ಪವಾದ ನಿನಗೆ ವಿಷಯುಕ್ತವಾದ ಹಲ್ಲುಗಳಿವೆ. ಬಾಯಲ್ಲಿ ಸುರಿದುಕೊಂಡ ಔಷಧಗಳೆಲ್ಲ ನಿನ್ನ ಹಲ್ಲಿನಿಂದ ಹೊರಹೊಮ್ಮಿದ ವಿಷದಿಂದ ತಾವೂ ವಿಷಭರಿತವಾಗಿ ಯಾವ ಪ್ರಯೋಜನಕ್ಕೂ ಬರದಂತಾಗಿವೆ. ಹಾಗೆ ಆಗದಂತೆ ನಾನು ರಬ್ಬರ್‌ಟ್ಯೂಬ್ ಮೂಲಕ ಔಷಧವನ್ನು ನೇರವಾಗಿ ನಿನ್ನ ಗಂಟಲಿಗೇ ಸುರಿದದ್ದರಿಂದ, ಅದು ಕೂಡಲೆ ಪ್ರಯೋಜನಕರವಾಗಿದೆ.'' ವೇದಾಂತವಾಗಲೀ ವಿಜ್ಞಾನವಾಗಲೀ ಪ್ರಯೋಗಕ್ಕೆ ಒಳಪಡಿಸುವಾಗ ಸಂದರ್ಭ ಹಾಗೂ ಪರಿಸರವನ್ನು ಗಮನಿಸಿ. ಅವಶ್ಯಕತೆಗೆ ತಕ್ಕಂತೆ ನೇರ್ಪಡಿಸಿಕೊಳ್ಳಬೇಕು!

✤ ✤ ✤

## 28. ನರಕದಲ್ಲೂ ದೇವರಿದ್ದಾನೆ !

ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಜರ್ಮನಿಯ ನಾಜಿಗಳು ಪೋಲೆಂಡನ್ನು ಆಕ್ರಮಿಸಿದಾಗ ಬೆಟ್ಟಿ ಮತ್ತು ಬೆಸ್ಸಿ ಎಂಬ ದೈವಭಕ್ತ ಸೋದರಿಯರು ಅಲ್ಲಿ ವಾಸವಿದ್ದರು. ಇಬ್ಬರಿಗೂ ದೇವರಲ್ಲಿ ಗಾಢ ಭಕ್ತಿ. ದಿನವೂ ಗಂಟೆಗಟ್ಟಲೆ ಪ್ರಾರ್ಥನೆಯಲ್ಲಿ ತೊಡಗಿಸಿರುತ್ತಿದ್ದರು. ನಾಜಿಗಳು ಮನೆ ಮನೆಗೆ ನುಗ್ಗಿ ಮಕ್ಕಳು ಮಹಿಳೆಯರು ಸೇರಿದಂತೆ ಪೋಲೆಂಡಿನ ಯೆಹೂದಿಗಳನ್ನು ಸೆರೆಹಿಡಿಯುತ್ತಿದ್ದರು. ಅಮಾನವೀಯ ಹಿಂಸೆ - ಪಾಶವೀ ಶಿಕ್ಷೆಗಳನ್ನು ಗುರಿಪಡಿಸಲು ಕಾನ್‌ಸೆಂಟ್ರೇಷನ್ ಕ್ಯಾಂಪ್‌ಗಳಲ್ಲಿ ತಳ್ಳುತ್ತಿದ್ದರು. ಚಿತ್ರಹಿಂಸೆಯ ನಂತರವೂ ಬದುಕಿ ಉಳಿದವರನ್ನು ಎಳೆದುಕೊಂಡು ಹೋಗಿ ಕುಲುಮೆಗಳಲ್ಲಿ ಜೀವಂತವಾಗಿ ಸುಟ್ಟುಬಿಡುತ್ತಿದ್ದರು. ಅವರಿಗೆ ತಮ್ಮ ಮನೆಗಳಲ್ಲಿ ಯಾರಾದರೂ ಆಶ್ರಯವಿತ್ತರೆ, ಬಚ್ಚಿಟ್ಟರೆ, ಅಂಥವರನ್ನೂ ಕ್ಯಾಂಪ್‌ಗಳಿಗೆ ತಳ್ಳುತ್ತಿದ್ದರು. ಬೆಟ್ಟಿ ಮತ್ತು ಬೆಸ್ಸಿ ಎಲ್ಲ ಯೆಹೂದ್ಯರ ಸುರಕ್ಷತೆಗಾಗಿ ಪ್ರಾರ್ಥಿಸುತ್ತಿದ್ದರು. ಕೆಲವು ಯೆಹೂದ್ಯ ಕುಟುಂಬಗಳನ್ನು ತಮ್ಮ ಮನೆಯ ಉಪ್ಪರಿಗೆಯ ಕೋಣೆಯಲ್ಲಿ ಬಚ್ಚಿಟ್ಟಿದ್ದರು. ನಾಜಿ ಪೊಲೀಸರಿಗೆ ಹೇಗೋ ಅದರ ಸುಳಿವು ಸಿಕ್ಕಿತು. ಈ ಸೋದರಿಯರ ಮನೆಯನ್ನು ತಲಾಶು ಮಾಡಿ ಯೆಹೂದಿಗಳನ್ನು ಪತ್ತೆಹಚ್ಚಿಬಿಟ್ಟರು. ಅವರೊಡನೆ ಈ ಸೋದರಿಯರನ್ನೂ



ಕ್ಯಾಂಪಿಗೆ ಕಳುಹಿಸಿದರು. ತೀರಾ ಕಡಿಮೆ ವಸ್ತ್ರಗಳನ್ನು ಅವರಿಗೆ ನೀಡಲಾಯಿತು. ಎಲ್ಲೋ ಕೆಲವರಿಗೆ ತೆಳ್ಳನೆಯ ಹೊದಿಕೆಯ ಅದೃಷ್ಟ ಸಿಕ್ಕತು. ಬೆಟ್ಟಿಯು ಪ್ರತಿದಿನ ಅವರಿಗೆ ಉಪದೇಶ ನೀಡುತ್ತಾ, ಅಗೋಚರನಾಗಿದ್ದರೂ ದೇದೇವನು ಆ ಸೆರೆಮನೆಯಲ್ಲೂ ಅವರೊಡನೆ ರಕ್ಷಕನಾಗಿ ಇರುವನೆಂದೂ ಅವನ ಕರುಣೆ ಅನುಕಂಪ ಅಪಾರವಾದುದೆಂದೂ ಗುಣಗಾನ ಮಾಡುತ್ತಿದ್ದಳು. ಅವಳ ಒಡನಾಡಿಗಳಲ್ಲದ ಇತರರು ಈ ಮಾತುಗಳನ್ನು ಒಪ್ಪದೆ ಪ್ರತಿಭಟಿಸುತ್ತಿದ್ದರು, ಈ ಸೆರೆಮನೆ ಅತ್ಯಂತ ಕೆಟ್ಟ ನರಕ. ಅಂಥಲ್ಲಿ ದೇವರು ಇರುವು ಸಾಧ್ಯವೇ ಇಲ್ಲ ಎಂಬುದು ಅವರ ವಾದ.

ಕ್ಯಾಂಪಿನಲ್ಲಿ ಫ್ಲೂ ಜ್ವರದ ಸಾಂಕ್ರಾಮಿಕ ಹಬ್ಬಿತು. ಹಲವಾರು ಖೈದಿಗಳು ಮಡಿದರು. ಬೆಟ್ಟಿ ಹಾಗೂ ಬೆಸ್ಸಿ ತಮಗೆ ಶಕ್ಯವಿದ್ದಷ್ಟು ರೋಗಿಗಳ ಶುಶ್ರೂಷೆಯಲ್ಲಿ ಆಯಾಸವಿಲ್ಲದೆ ತೊಡಗಿಕೊಂಡಿದ್ದರು. ಕಿರಿಯ ಬೆಸ್ಸಿಗೂ ಫ್ಲೂ ಜ್ವರ ತಗುಲಿತು-ಹಾಸಿಗೆ ಹಿಡಿದಳು. ಮೂಳೆ ಚಕ್ಕಳದಂತಾಗಿ ತುಂಬ ನಿಶ್ಶಕ್ತಳಾದಳು. ಬೆಟ್ಟಿಯ ಬಳಿ ಬಂದು ಒಳ್ಳೆಯ ಹೊದಿಕೆ ಇದ್ದುದನ್ನು ಗುಟ್ಟಾಗಿ ಮಾರಿ ಒಂದು ಶೀಷೆ ವಿಟಮಿನ್ ಮಾತ್ರೆಗಳನ್ನು ತರಿಸಿಕೊಂಡಳು. ಅದನ್ನು ಕ್ರಮವಾಗಿ ಬೆಸ್ಸಿಗೆ ಕೊಡತೊಡಗಿದಳು. ಅದರಿಂದ ಆಕೆ ಚೇತರಿಸಿಕೊಳ್ಳುವಂತಾಯ್ತು. ವಿಟಮಿನ್ ಶೀಷೆಯಲ್ಲಿ ಕೇವಲ ಹನ್ನೆರಡು ಮಾತ್ರೆಗಳು ಉಳಿದಿದ್ದಾಗ, ಇತರ ಜೈಲುಗಳಿಂದ ಒಂದು ನೂರು ಜನರನ್ನು ಸೆರಮನೆಗೆ ಕರೆತಂದರು. ಅವರೆಲ್ಲ ಜ್ವರಪೀಡಿತರೇ ಆಗಿದ್ದು ಸ್ಥಿತಿ ಚಿಂತಾಜನಕವಾಗಿತ್ತು. ಹೀಗೆ ಹೊಸದಾಗಿ ಬಂದ ರೋಗಿಗಳಿಗೆ ಬೆಟ್ಟಿ ಮಾತ್ರೆಗಳನ್ನು ಹಂಚಿಬಿಟ್ಟಳು. ಅವಳ ಅಚ್ಚರಿಗೆ ಆ ನೂರು ಜನರಿಗೆ ಹಂಚಿದ ಮೇಲೆಯೂ ಮತ್ತೆ ಹನ್ನೆರಡು ಮಾತ್ರೆಗಳು ಉಳಿದವು. ದಿನ ದಿನವೂ ಹೀಗೆ ರೋಗಿಗಳು ಚಿಂತಾಜನಕ ಸ್ಥಿತಿಯಲ್ಲಿ ಕ್ಯಾಂಪಿಗೆ ಬರುತ್ತಲೇ ಇದ್ದರು, ಬೆಟ್ಟಿ

ಮಾತ್ರೆಗಳನ್ನು ಹಂಚುತ್ತಲೇ ಇದ್ದಳು. ದಿನದ ಅಂತ್ಯದಲ್ಲಿ ಅದೇ ಹನ್ನೆರಡು ಮಾತ್ರೆಗಳು ಉಳಿಯುತ್ತಿದ್ದವು ! ಮೊದಮೊದಲು ಬೆಟ್ಟಿ ದಿನವೂ ಯಾವುದೋ ಒಂದು ಅಂಗಡಿಯಿಂದ ಮಾತ್ರೆಗಳನ್ನು ತರಿಸಿಕೊಳ್ಳುತ್ತಿದ್ದಾಳೆ ಎಂದೇ ಅವರೆಲ್ಲ ತಿಳಿದಿದ್ದರು. ಎಲ್ಲರಿಗೂ ಹಂಚುತ್ತಿದ್ದುದು ಹನ್ನೆರಡೇ ಮಾತ್ರೆಗಳಿದ್ದ ಅದೇ ಶೀಷೆಯಿಂದ ಎಂಬುದು ಅವರಿಗೆ ನಂಬಿಕೆಯಾದ ಮೇಲೆ, ಇದು ನಿಜಕ್ಕೂ ಒಂದು ಪವಾಡ ಎಂಬುದು ಖಾತರಿಯಾಯಿತು. ಭಗವಂತನು ಬೆಟ್ಟಿಯನ್ನು ಮಾತ್ರ ಹೀಗೆ ಅನುಗ್ರಹಿಸಿದ್ದಾನೆ, ಉಳಿದವರು ಅವರವರ ಹಣೆಬರಹ ಅನುಭವಿಸುತ್ತಾರೆ ಎಂದು ಅವರೆಲ್ಲ ಭಾವಿಸಿದರು. ಬೆಟ್ಟಿ ಮತ್ತು ಬೆಸ್ಸಿ ಎಲ್ಲ ಸೆರೆಯಾಳುಗಳ ಪರವಾಗಿ ಉತ್ಕಟವಾಗಿ ಪ್ರಾರ್ಥಿಸುತ್ತಿದ್ದರು. ಅದು ಅಕ್ಟೋಬರ್ ತಿಂಗಳು. ಒಂದು ದಿನ ಬೆಟ್ಟಿ ತಂಗಿಯನ್ನು ಕುರಿತು ಹೇಳಿದಳು: ''ಬೆಸ್ಸಿ: ಮುಂದಿನ ಕ್ರಿಸ್‌ಮಸ್ ಹಬ್ಬದ ದಿನ ನಾವಿಬ್ಬರೂ ಬಿಡುಗಡೆ ಹೊಂದಿಬಿಡುತ್ತೇವೆ.'' ಬೆಟ್ಟಿ ಕಾಯಿಲೆ ಮಲಗಿ ಸರಿಯಾಗಿ ಡಿಸೆಂಬರ್ 25ರಂದೇ ಸಾವಿಗೆ ಈಡಾದಳು. ಕಡೆಯ ಉಸಿರಿನವರೆಗೂ ಅವಳು ದೇವರ ಸ್ಮರಣೆಯಲ್ಲೇ ಇದ್ದಳು. ತನ್ನ ಸಹೋದರಿಯು ಬಿಡುಗಡೆ ಹೊಂದಿ ಹೊರಗಡೆ ಹೋದಮೇಲೆ ಈ ಕಾನ್ಸೆಂಟ್ರೇಷನ್ ಕ್ಯಾಂಪ್ ಹಾಗೂ ವಿಟಮಿನ್ ಮಾತ್ರೆಗಳ ಪವಾಡದ ವಿವರಗಳನ್ನು ಪ್ರಪಂಚಕ್ಕೆ ಸಾರುತ್ತಾ ಹೋಗಬೇಕೆಂದು ತಿಳಿಸಿ ಆ ಬಗೆಗೆ ಬೆಟ್ಟಿಯಿಂದ ವಚನ ತೆಗೆದುಕೊಂಡಳು. ತಮ್ಮವರನ್ನೇ ಕ್ಯಾಂಪಿಗೆ ಸೇರಿಸಿ, ಅವರನ್ನು ಬಿಡುಗಡೆ ಮಾಡುವ ಪ್ರದರ್ಶನ ಮಾಡಿ ಹಣ, ಬಟ್ಟೆ, ಆಹಾರ ಪದಾರ್ಥಗಳನ್ನು ಕೊಟ್ಟು ಕಳುಹಿಸುವ ಪದ್ಧತಿಯೇ ಅಲ್ಲಿಯ ಅಧಿಕಾರಿಗಳಲ್ಲಿ ಚಾಲ್ತಿಯಲ್ಲಿತ್ತು. ಸೆರೆಯಾಳುಗಳನ್ನು ತಾವು ತುಂಬ ಚೆನ್ನಾಗಿ ನೋಡಿಕೊಳ್ಳುತ್ತಿದ್ದೇವೆ ಎಂದು ಪ್ರಪಂಚಕ್ಕೆ ತೋರ್ಪಡಿಸುವ ಹೂಟವೇ ಇದಾಗಿತ್ತು. ಸೆರೆಯಾಳುಗಳ ಉತ್ತಮ ನಡತೆಗಾಗಿ ಅವರಿಗೆ ದೊರೆಯುವ ಬಹುಮಾನ ಇದು ಎಂದು ಬಿಂಬಿಸಲಾಗುತ್ತಿತ್ತು. ಈ ಬಾರಿಯ ಕ್ರಿಸ್ಮಸ್ ಹಬ್ಬಕ್ಕೆ



ಇಬ್ಬರು ಸೆರೆಯಾಳುಗಳ ಬಿಡುಗಡೆಗೆ ಅನುಮತಿ ದೊರೆತಿತ್ತು. ತಮ್ಮದೇ ವ್ಯಕ್ತಿಯ ಬದಲಿಗೆ ಅಚಾತುರ್ಯದಿಂದ ಬೆಸ್ಸಿಯ ಹೆಸರನ್ನು ಬರೆದು ಬಿಟ್ಟಿದ್ದರು! ಅವಳನ್ನೇ ಬಿಡುಗಡೆ ಮಾಡಿ ಮನೆಗೆ ಕಳುಹಿಸಲಾಯಿತು. ಕ್ಯಾಂಪಿನಿಂದ ಹೊರಡುವಾಗ, ತನ್ನ ಸೋದರಿ ಬೆಟ್ಟಿ ಅವಳ ಕಿವಿಗಳಲ್ಲಿ ಉಸಿರಿದಂತಾಯಿತು: ''ಬೆಸ್ಸಿ, ನೀನು ನೀಡಿದ ವಚನಗಳನ್ನು ಮರೆಯಬೇಡ. ಪ್ರಪಂಚಕ್ಕೆ ನೀವು ಈ ಪವಾಡವನ್ನು ಪ್ರಚಾರ ಮಾಡಬೇಕಿದೆ.'' ಬೆಸ್ಸಿ ಇಡಿಯ ಕಥೆಯನ್ನು ಬರೆದು ಒಂದು ಪುಸ್ತಕವನ್ನೇ ಪ್ರಕಟಿಸಿದಳು. ತನ್ನ ಬದುಕಿನ ಉದ್ದಕ್ಕೂ ಆಕೆ ಪ್ರವಚನಗಳನ್ನು ಮಾಡುತ್ತಾ ದೂರವಾಹಿನಿ ಕಾರ್ಯಕ್ರಮಗಳನ್ನು ನೀಡುತ್ತಾ ಕ್ಯಾಂಪಿನ ಭಯಂಕರ ಅನುಭವಗಳನ್ನೂ, ಭಗವಂತನು ಸದಾ ತಮ್ಮ ರಕ್ಷಕನಾಗಿದ್ದುದನ್ನೂ ಪ್ರಚಾರ ಮಾಡಿದಳು. ಯಾವಾಗಲೂ ಅವಳು ಸಮರ್ಥಿಸುತ್ತಿದ್ದಳು: ''ಕಾನ್‌ಸೆಂಟ್ರೇಷನ್ ಕ್ಯಾಂಪ್ ಎಂಬುದು ನರಕದ ಆಳವಾದ ಅಧೋಲೋಕ. ಆದರೆ ನೆನಪಿಡಿ : ಅದೆಷ್ಟೇ ಆಳವಿದ್ದರೂ ಭಗವಂತನು ಪ್ರವೇಶಿಸಲಾರದಷ್ಟು ಆಳವಿಲ್ಲ. ಅವನ ಅನುಗ್ರಹ ಇನ್ನೂ ಆಳವಾದದ್ದು.''

ಮುಂದಿನ ಮೂರು ತಿಂಗಳಲ್ಲಿ ಮಿತ್ರರಾಷ್ಟ್ರಗಳ ವಿಮಾನಗಳು ಕ್ಯಾಂಪಿನ ಮೇಲೆ ಇಳಿದು, ಅಲ್ಲಿದ್ದ ಗಾರ್ಡ್‌ಗಳನ್ನು ಕೊಂದು ಸೆರೆಯಾಳುಗಳನ್ನು ಬಂಧಮುಕ್ತರನ್ನಾಗಿಸಿದರು. ಭಗವಂತನ ನ್ಯಾಯದ ತೀರ್ಪು ತಡವಾದೀತು. ಆದರೆ ನ್ಯಾಯ ನಿರಾಕೃತವಾಗುವುದಿಲ್ಲ.

✤ ✤ ✤

## 29. ಶಾಸ್ತ್ರಗಳನ್ನು ಅರ್ಥಮಾಡಿಕೊ

ಕನ್ಯಾಕುಮಾರಿಯಲ್ಲಿ ಅಧ್ಯಾತ್ಮ ಜ್ಞಾನ ದಾಹವುಳ್ಳ ಅಮೂಲ್ಯ ಎಂಬ ಯುವಕನಿದ್ದ. ಆಧುನಿಕ ಪರಿಸರಕ್ಕೆ ಅನುಗುಣವಾಗಿ ಶಾಸ್ತ್ರಗಳನ್ನು ವ್ಯಾಖ್ಯಾನ ಮಾಡಬಲ್ಲ ಹಾಗೂ ಬೋಧಿಸಬಲ್ಲ ಗುರುವನ್ನು ಹುಡುಕುತ್ತಾ ಹೊರಟ. ಹೃಷೀಕೇಶ, ಹರಿದ್ವಾರ ಉತ್ತರಕಾಶಿ ಮುಂತಾದ ಹಿಮವತ್ ಪ್ರದೇಶಗಳಲ್ಲಿ ಹಲವಾರು ಗುರುಗಳ ಸಾನ್ನಿಧ್ಯದಲ್ಲಿ ವರ್ಷಗಟ್ಟಲೆ ಕಳೆದ. ಅವರೆಲ್ಲ ವಿದ್ವನ್ಮಣಿಗಳು, ವೇದಗಳನ್ನೂ ಶ್ರೀ ಶಾಂಕರ ಭಾಷ್ಯಗಳನ್ನೂ ಕರತಲಾಮಲಕ ಮಾಡಿಕೊಂಡವರು. ಆದರೆ ಅಧ್ಯಾತ್ಮ ಸಾಧನೆಯಿಂದ ಸ್ವಾನುಭವಕ್ಕೆ ತಂದುಕೊಂಡವರಲ್ಲ. ಅವರನ್ನು ಸಾಕ್ಷಾತ್ ದೇವರೆಂದೇ ತಿಳಿದು ಗೌರವಿಸುವ ಶಿಷ್ಯರ ಸಮೂಹವೇ ಅವರಿಗಿತ್ತು. ವಾಗ್ಝರಿಯ ಕೌಶಲವಂತೂ ಅವರಿಗಿತ್ತು. ನಿರರ್ಗಳವಾದ ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪ್ರವಚನ ಪಟುಗಳಾಗಿದ್ದರು. ಅವರು ಯಾರಿಂದಲೂ ಅಮೂಲ್ಯನಿಗೆ ಸಮಾಧಾನ ದೊರೆಯಲಿಲ್ಲ. ಆದರೂ ಅಲ್ಮೋರಾದ ಅರಣ್ಯಗಳಲ್ಲಿ ಅವನು ತಿರುಗಾಡುತ್ತಲೇ ಇದ್ದ. ಅಧ್ಯಾತ್ಮ ಪಥದಲ್ಲಿ ತನ್ನನ್ನು ನಡೆಸಬಲ್ಲ ಸೂಕ್ತ ಗುರುವಿನ ಬಳಿಗೆ ತನ್ನನ್ನು ಕರೆದೊಯ್ಯುವಂತೆ ದಿನದಿನವೂ ಅವನು ದೇವರಲ್ಲಿ ಮೊರೆಯಿಡುತ್ತಿದ್ದ. ಒಮ್ಮೆ ದುರ್ಗಮವಾದ ಬೆಟ್ಟದ ತುದಿಯಲ್ಲಿನ ಗುಹೆಯಲ್ಲಿ ವಾಸವಿದ್ದ



ಸಂನ್ಯಾಸಿಯೊಬ್ಬನ ಬಗೆಗೆ ಕೇಳಿದ. ಗುರುವನ್ನು ಹುಡುಕುವ ಕಟ್ಟಕಡೆಯ ಪ್ರಯತ್ನ ಇದು ಎಂದು ಪ್ರತಿಜ್ಞೆ ಮಾಡಿದ. ಈ ಬಾರಿಯೂ ಸಫಲನಾಗದಿದ್ದರೆ ಪ್ರಪಂಚಕ್ಕೆ ಹಿಂತಿರುಗಿ, ಮದುವೆಯಾಗಿ, ಲೌಕಿಕ ಜೀವನದಲ್ಲಿ ಮುಳುಗಿಬಿಡುತ್ತೇನೆ ಎಂದು ನಿಶ್ಚಯಿಸಿದ. ಅತ್ಯಂತ ಕಷ್ಟದಿಂದ ಹಲವಾರು ದಿನಗಳ ನಂತರ ಬೆಟ್ಟದ ತುದಿಯ ಗವಿಯನ್ನು ಸೇರಿದ ಆಯಾಸಗೊಂಡು ಬಿದ್ದುಬಿಟ್ಟ. ದಯಾಮಯನಾದ ಸಂನ್ಯಾಸಿ ಅವನನ್ನು ಸೂಕ್ತವಾಗಿ ಶುಶ್ರೂಷೆಮಾಡಿ ಆರೋಗ್ಯವಂತನನ್ನಾಗಿ ಮಾಡಿದ. ಗುಹೆಯ ತುಂಬ ಹಿಂದೂ, ಬೌದ್ಧ, ಜೈನ, ಕ್ರೈಸ್ತ ಧರ್ಮಗಳ ಶಾಸ್ತ್ರಗ್ರಂಥಗಳು ತುಂಬಿ ತುಳುಕುತ್ತಿದ್ದುದನ್ನು ಅಮೂಲ್ಯ ಗಮನಿಸಿದ. ಸಂನ್ಯಾಸಿ ಅತ್ಯಂತ ವಿನೀತ ಹಾಗೂ ಪ್ರಾಮಾಣಿಕರು. ಅಮೂಲ್ಯನು ತಾನು ಅಲ್ಲಿಗೆ ಬಂದ ಉದ್ದೇಶವನ್ನೂ ತನ್ನ ಆ ವರೆಗಿನ ನಿರಾಸೆಯನ್ನೂ ಬಿನ್ನವಿಸಿಕೊಂಡ. ಸಂನ್ಯಾಸಿ, ತನಗೆ ತಿಳಿದಷ್ಟನ್ನು ಅಮೂಲ್ಯನಿಗೆ ಬೋಧಿಸುವುದಾಗಿ ಭರವಸೆ ಇತ್ತರು. ತನ್ನ ಗುರು ತನಗೆ ಬೋಧಿಸಿದ ಎರಡು ಸೂಚನೆಗಳನ್ನು ನೀಡಿದರು :

1. ಹಿಂದಿನ ವಾಕ್ಯ ಅಥವಾ ಪ್ಯಾರಾವನ್ನು ಚೆನ್ನಾಗಿ ಅರ್ಥಮಾಡಿಕೊಂಡ ಹೊರತು ಶಾಸ್ತ್ರಗ್ರಂಥದ ಓದನ್ನು ಮುಂದುವರೆಸಬೇಡ.

2. ಯಾವುದೇ ಶಾಸ್ತ್ರಗ್ರಂಥದ ವಾಕ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ವಿಧಾನವೆಂದರೆ, ಅರ್ಥವು ತನಗೆತಾನೇ ಹೊಳೆಯುವವರೆಗೂ ವಾಕ್ಯವನ್ನು ಮತ್ತೆ ಮತ್ತೆ ಧ್ಯಾನಿಸುತ್ತಲೇ ಇರುವುದು. ತೈತ್ತಿರೀಯ ಉಪನಿಷತ್ತಿನ ಭೃಗುವಲ್ಲಿಯಲ್ಲಿ ಬ್ರಹ್ಮವನ್ನು ತಿಳಿಯಬೇಕಾದರೆ ಅದನ್ನು ಕುರಿತೇ ಧ್ಯಾನ ಮಾಡಬೇಕು-''ತಪಸಾ ಬ್ರಹ್ಮ ವಿಜಿಜ್ಞಾಸಸ್ವ ತಪೋ ಬ್ರಹ್ಮೇತಿ'' ಎಂದು ಹೇಳಲಾಗಿದೆ. ಅಧ್ಯಾತ್ಮ ಪಥದಲ್ಲಿ ಧ್ಯಾನವೇ ಗುರಿ ತಲುಪುವ ಖಚಿತ ಮಾರ್ಗ.

ಮರುದಿನ ಬೆಳಗ್ಗೆ ಸಂನ್ಯಾಸಿಯು ಪಾಠವನ್ನು ಪ್ರಾರಂಭಿಸಿದರು. ಒಂದು ಶಾಸ್ತ್ರಗ್ರಂಥವನ್ನು ತೆಗೆದುಕೊಂಡು ಓದತೊಡಗಿದರು. ಯಾವ ಶಾಸ್ತ್ರಗ್ರಂಥದಿಂದ ಅವರು ಓದುತ್ತಿದ್ದಾರೆ ಎಂಬುದು ಅಮೂಲ್ಯನಿಗೆ ತಿಳಿಯಲಿಲ್ಲ : ಆ ಮೊದಲ ವಾಕ್ಯ ಹೀಗಿತ್ತು:

"ರಾಜನು ಸಿಂಹಾಸನದ ಮೇಲೆ ಕುಳಿತಿರುವಾಗ, ಎಲ್ಲ ಪ್ರಜೆಗಳೂ ಅವನನ್ನು ಸೇವಿಸುತ್ತಾರೆ. ಹೀಗಾಗಿ ಯಾವ ವಿಪತ್ತೂ ಸಂಭವಿಸುವುದಿಲ್ಲ."

ಇದು ಹಳೆ ಒಡಂಬಡಿಕೆಯ ಒಂದು ವಾಕ್ಯ. ಆ ವಾಕ್ಯವನ್ನು ಕೇಳುತ್ತಿದ್ದಂತೆಯೇ ಅಮೂಲ್ಯನು ಎದ್ದು ನಿಂತ. ಗುಹೆಯಿಂದ ಹೊರಗೆ ಹೋದ. ಅವನನ್ನು ಮತ್ತೆ ಯಾರೂ ಕಾಣಲಿಲ್ಲ. ಹೀಗೆಯೇ ದಿನಗಳು ಕಳೆದವು. ಒಂದು ವರ್ಷದ ಅನಂತರ ಅವನು ಬಂದು ಸಂನ್ಯಾಸಿಯ ಎದುರು ಕುಳಿತುಕೊಂಡ. "ಪರಮ ಪೂಜ್ಯರೇ, ಕಳೆದ ಸಲ ತಾವು ಆ ವಾಕ್ಯವನ್ನು ಓದಿದಾಗ, ಅದರ ಅರ್ಥವನ್ನು ನಾನು ಗ್ರಹಿಸಲಾಗಲಿಲ್ಲ. ಬೇರೊಂದು ಗುಹೆಯಲ್ಲಿ ಕುಳಿತು, ಹಗಲೂ ರಾತ್ರೆ ಆ ವಾಕ್ಯವನ್ನೇ ಅನುಸಂಧಾನ ಮಾಡತೊಡಗಿದೆ. ಭಗವಂತನು ಅದರ ಅರ್ಥವನ್ನು ಈಗ ನನಗೆ ಮನಗಾಣಿಸಿದ್ದಾನೆ. ಈಗ ತಾವು ಮುಂದುವರೆದು ಓದಬಹುದಾಗಿದೆ. ಅಮೂಲ್ಯನ ಮುಖ ಒಂದು ವಿಶೇಷ ಕಾಂತಿಯಿಂದ ಬೆಳಗಲು ತೊಡಗಿತ್ತು – ಅದೊಂದು ದೈವೀಪ್ರಕಾಶ – ಅತ್ಯಂತ ಪರಿಪಕ್ವವಾದ ಚೇತನದ ಗುರುತು ಅದು. ಈಗ ಸಂನ್ಯಾಸಿಯು ವಿನೀತನಾಗಿ ಕೇಳಿದರು : "ಆ ಮೊದಲ ವಾಕ್ಯದ ಅರ್ಥವನ್ನು ತಾವು ದಯಮಾಡಿ ನನಗೆ ವಿವರಿಸುವಿರಾ?"

ಅಮೂಲ್ಯ ವಿವರಿಸಿದ : ರಾಜ ಎಂದರೆ ಪರಮಾತ್ಮ. ಸಿಂಹಾಸನವು ಭಕ್ತನ ಹೃದಯವನ್ನು ಸೂಚಿಸುತ್ತದೆ. ನಿರಂತರ ಪ್ರಾರ್ಥನೆ-ಧ್ಯಾನದಿಂದ ನಾವು ಪರಮಾತ್ಮನನ್ನು ನಮ್ಮ ಹೃದಯ ಗುಹೆಯಲ್ಲಿ ಸಂಸ್ಥಾಪಿಸುತ್ತೇವೆ. ಆತನನ್ನಲ್ಲದೆ ಬೇರೆ ಏನನ್ನೂ ಚಿಂತಿಸುವುದಿಲ್ಲ. ಕಣ್ಣು ಕಿವಿ, ನಾಲಗೆ, ಎಲ್ಲವೂ ನಿಗ್ರಹಿಸಲ್ಪಟ್ಟು



ಅವುಗಳ ಗಮನವೆಲ್ಲ ಭಗವಂತನ ಕಡೆಗೇ ತಿರುಗುತ್ತವೆ. ಶ್ರೀಮದ್ ಭಾಗವತಮ್ ಗ್ರಂಥದಲ್ಲಿ ಇದನ್ನೇ ಹೋಲುವ ವಿವರಣೆ ದೊರೆಯುತ್ತದೆ: "ಅವನ ಮನಸ್ಸು ಸದಾ ಪರಮಾತ್ಮ ಶ್ರೀಕೃಷ್ಣನ ಪಾದಕಮಲಗಳಲ್ಲಿ ಬೇರೂರಿತ್ತು. ಅವನ ಗುಣಗಾನದಲ್ಲಿ ಮಾತ್ರ ಅವನ ಮಾತುಗಳು ತತ್ಪರವಾಗಿತ್ತು. ಭಗವಂತನ ಮಂದಿರವನ್ನು ಶುಚಿಗೊಳಿಸುವುದರಲ್ಲಿಯೇ ಕೈಗಳು ತೊಡಗಿದ್ದವು. ಕೃಷ್ಣಕಥನದಲ್ಲೇ ಅವನ ಕಿವಿಗಳು ಆಸಕ್ತವಾಗಿದ್ದವು. ಯಾವ ಪ್ರಾಪಂಚಿಕ ಪ್ರಲೋಭನೆಗಳು ಅವನನ್ನು ಆಕ್ರಮಿಸಲು ಶಕ್ತವಾಗಲಿಲ್ಲ, ಎಂದರೆ ಯಾವ ಪಾಪವೂ-ಕೆಡುಕೂ ಅವನನ್ನು ಸೋಂಕಲಿಲ್ಲ."

ವೃದ್ಧ ಸಂನ್ಯಾಸಿ ಅಮೂಲ್ಯನನ್ನು ಗಾಢವಾಗಿ ಆಲಂಗಿಸಿದರು. ಅಮೂಲ್ಯ ನೀನು ಧನ್ಯ ! ಎಲ್ಲ ಸಾಧನೆಗಳ ಸಾರವನ್ನು ನೀನು ಹಿಡಿದಿದ್ದೀಯೇ. ಇನ್ನೇನನ್ನೂ ನೀನು ಓದುವ ಅಗತ್ಯವಿಲ್ಲ. ಈ ಒಂದು ವಾಕ್ಯವೇ ಸಾಕು. ಪ್ರೇಮಪೂರ್ವಕ ಪ್ರಾರ್ಥನೆಯಿಂದ ನಿರಂತರ ಸ್ಮರಣೆಯಿಂದ ಪರಮಾತ್ಮನನ್ನು ನಿನ್ನ ಹೃದಯದಲ್ಲಿ ನೆಲೆಗೊಳಿಸಿಬಿಡು. ಈಗಿನಿಂದಲೇ ನಾನೂ ಈ ಪಥವನ್ನೇ ಹಿಡಿಯುವೆ. ಈ ಎಲ್ಲ ಶಾಸ್ತ್ರಗ್ರಂಥಗಳ ಅಗತ್ಯ ನನಗಿಲ್ಲ ನೀನು ನನ್ನ ಕಣ್ಣುಗಳನ್ನೂ ತೆರೆಸಿದೆ. ನಾನು ಸದಾ ನಿನಗೆ ಕೃತಜ್ಞನಾಗಿರುವೆ" ಎಂದುಬಿಟ್ಟರು.

"ಸವ್ವೈ ಮನಃ ಕೃಷ್ಣ ಪದಾರವಿಂದಯೋಃ
ವಚಾಂಸಿ ವೈಕುಂಠ ಗುಣಾನುವರ್ಣನೇ ।
ಕರೌ ಹರೇರ್ಮಂದಿರ ಮಾರ್ಜನಾದಿಷು
ಶ್ರುತಿಂಚಕಾರಾಚ್ಯುತ ಸತ್ಕಥೋದಯೇ ॥"

ಭಾಗವತಮ್ : Ix-4-18

✤ ✤ ✤

# 30. ಸಂವಹನದ ಕಂದರ

ಗೋವಿಂದ ಎಂಬುವನು ಅರೇಬಿಯನ್ ಮರುಭೂಮಿಯಲ್ಲಿ ನಡೆಯುತ್ತಿದ್ದ. ಹಗಲು ಹೊತ್ತು ಸೂರ್ಯ ತಾಪ ತೀಕ್ಷ್ಣವಾಗಿತ್ತು. ತನ್ನ ಸೊಂಟದ ಸುತ್ತ ಚಿನ್ನದ ನಾಣ್ಯಗಳನ್ನು ತುಂಬಿದ್ದ ಪಟ್ಟಿಯನ್ನು ಕಟ್ಟಿಕೊಂಡಿದ್ದ. ಅವನ ಬೂಟುಗಳೆಲ್ಲ ಹರಿದು ಚೂರಾಗಿದ್ದವು. ಮುಂದೆ ನಡೆಯುವುದು ಕಷ್ಟಕರವಾಗಿತ್ತು. ಪ್ರತಿ ಹೆಜ್ಜೆಯೂ ನೋವಿನದು ಆದರೂ ಕ್ರಮಿಸಬೇಕಾದ ಹಾದಿ ಬಹುದೂರ.

ಭಗವಾನ್ ಶ್ರೀರಾಮನನ್ನು ಕುರಿತು ಗೋವಿಂದ ಪ್ರಾರ್ಥಿಸಿದ : "ಓ ಪ್ರಭು ಶ್ರೀರಾಮ, ನನಗೊಂದು ಕುದುರೆಯನ್ನು ಕರುಣಿಸು." ಕೂಡಲೇ ಓರ್ವ ಶೇಖ್ ತನ್ನ ಸೈನಿಕರು ಹಾಗೂ ಅಧಿಕಾರಿಗಳ ಗುಂಪಿನೊಡನೆ ಅತ್ತಲೇ ಬರುತ್ತಿರುವುದನ್ನು ಕಂಡ. ಒಂದು ಹೆಣ್ಣು ಕುದುರೆ ಇನ್ನೂ ನಡೆಯಲೂ ಆರದ ಮರಿಗೆ ಜನ್ಮವಿತ್ತಿತು. ಈ ಗೋವಿಂದನು ಹಾದಿಯಲ್ಲಿ ನಡೆಯುತ್ತಿರುವುದನ್ನು ಕಂಡ ಶೇಖ್ ಸಾಹೇಬ, ಅದೇ ಹುಟ್ಟಿದ ಕುದುರೆ ಮರಿಯನ್ನು ಹೊತ್ತುಕೊಂಡು ತನ್ನನ್ನು ಹಿಂಬಾಲಿಸಲು ಆಜ್ಞಾಪಿಸಿದ! ಗೋವಿಂದನು ದುಃಖತಪ್ತನಾಗಿ ಮನಸ್ಸಿನಲ್ಲಿಯೇ ರೋದಿಸಿದ "ಹೇ! ರಾಮ ನನ್ನ ಪ್ರಾರ್ಥನೆ ನಿನಗೆ ಅರ್ಥವಾದಂತಿಲ್ಲ, ನಾನು ಕೋರಿದುದು ಸವಾರಿಮಾಡುವಂತಹ, ಒಂದು ಕುದುರೆಯನ್ನು ಕರುಣಿಸುವಂತೆ. ಆದರೆ ನನ್ನ ಮೇಲೆಯೇ ಸವಾರಿ ಮಾಡುವ ಕುದುರೆ ಕೊಟ್ಟೆಯಲ್ಲಾ!"



# 31. ಮಾನಸಿಕ ಪೂಜೆ

'ರಾಮಚರಿತ ಮಾನಸ' ಮಹಾಕಾವ್ಯದ ಕರ್ತೃ ತುಳಸೀದಾಸ್‌ಜೀ ಅವರ ಸಮಕಾಲೀಕನನಾಗಿ ವೈಶ್ಯ ಸಮುದಾಯಕ್ಕೆ ಸೇರಿದ ಧನಪಾಲ ಎಂಬ ವ್ಯಾಪಾರಿಯಿದ್ದ. ಒಂದು ದಿನ ಅವನು ತುಳಸೀದಾಸರ ಬಳಿಬಂದು, "ಸ್ವಾಮಿಗಳೇ, ನಾನು ಪ್ರಭುರಾಮನನ್ನು ಪ್ರತಿದಿನ ವೈಭವದಿಂದ ಪೂಜಿಸಲು ಬಯಸುತ್ತೇನೆ. ಆದರೆ ಏನು ಮಾಡಲಿ? ನನ್ನ ಬಳಿ ಹಣ್ಣು, ಹಾಲು, ಕರ್ಪೂರ, ಊದಬತ್ತಿ ಇವನ್ನೆಲ್ಲ ಕೊಳ್ಳಲು ಒಂದು ನಯಾಪೈಸೆಯೂ ಇಲ್ಲ. ಯಾವುದಾದರೂ ಸೂಕ್ತ ಪೂಜಾವಿಧಾನವನ್ನು ಹೇಳಿಕೊಡುತ್ತೀರಾ?" ತುಳಸೀದಾಸರು ಅವನ ಕಡೆಗೆ ಅನುಕಂಪದ ದೃಷ್ಟಿಯನ್ನು ಬೀರಿ ಹೇಳಿದರು: "ಆಗಬಹುದು, ಭಗವಂತನನ್ನು ಅರ್ಚಿಸುವ ಮಾನಸಪೂಜೆ ಎಂಬ ಕ್ರಮವಿದೆ. ಎಲ್ಲ ಸಮರ್ಪಣೆಯೂ ಕೇವಲ ಮನಸ್ಸಿನಲ್ಲಿಯೇ. ನಿನಗೆ ಒಂದು ಪೈಸೆ ಖರ್ಚಿಲ್ಲ, ಸುವರ್ಣ ಸಿಂಹಾಸನದಲ್ಲಿ ನಿನ್ನ ಶ್ರೀರಾಮನನ್ನು ಪ್ರತಿಷ್ಠಾಪಿಸುವುದು. ಬಗೆ ಬಗೆಯ ಫಲಗಳನ್ನೂ ಸಕ್ಕರೆ ಬೆರೆಸಿದ ಗೋಕ್ಷೀರವನ್ನು ಅರ್ಪಿಸುವುದು. ಎಲ್ಲವೂ ಕೇವಲ ಮಾನಸಿಕ ಕಲ್ಪನೆಯೇ. ಆದುದರಿಂದ ನೀನು ಕೊಂಚವೂ ಜಿಪುಣನಾಗಬೇಕಿಲ್ಲ, ಹಾಲಿಗೆ ಒಂದು ಟೀ ಚಮಚಾ ಸಕ್ಕರೆ ಬೆರೆಸುವುದನ್ನು ಮಾತ್ರ ಮರೆಯಲೇಬಾರದು!" ಹೀಗೆ ತುಳಸೀದಾಸರು ಮಾನಸಪೂಜೆಯ ವಿವರಗಳನ್ನೆಲ್ಲ ಧನಪಾಲನಿಗೆ ತಿಳಿಸಿ ಹೇಳಿದರು.

ತುಳಸಿದಾಸರು ನಿರ್ದೇಶಿಸಿದಂತೆಯೇ ಪೂಜೆ ಮಾಡತೊಡಗಿದ. ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಸಕ್ಕರೆ ತುಂಬಿಸಿ ಇಟ್ಟುಕೊಂಡಿರುತ್ತದ್ದ. ಒಂದು ಟೀ ಚಮಚಾ ಸಕ್ಕರೆಯನ್ನು ಹಾಲಿಗೆ ಬೆರೆಸುವುದನ್ನು ಒಮ್ಮೆಯೂ ಮರೆಯಲಿಲ್ಲ. (ಎಲ್ಲವೂ ಮಾನಸಿಕ ಕಲ್ಪನೆಯಷ್ಟೆಲ್ಲ !) ಹದಿನೈದು ವರ್ಷಗಳು ಕಳೆದವು.

ಒಂದು ದಿನ ಚಮಚವನ್ನು ಎಲ್ಲೋ ಮರೆತುಬಿಟ್ಟಿದ್ದ. ಡಬ್ಬಿಯಿಂದ ನೇರವಾಗಿ ಸಕ್ಕರೆಯನ್ನು ಹಾಲಿಗೆ ಹಾಕಬೇಕಾಯಿತು. ತುಂಬಾ ಸಕ್ಕರೆ ಬಟ್ಟಲಲ್ಲಿ ಬಿದ್ದುಬಿಟ್ಟಿತ್ತು. ತಕ್ಷಣ ಅವನು ತನ್ನ ಕಾಲ್ಪನಿಕ ಬಟ್ಟಲಲ್ಲಿ ಕೈಹಾಕಿ ಹೆಚ್ಚಾದ ಸಕ್ಕರೆಯನ್ನು ಹಿಂತೆಗೆದುಕೊಳ್ಳಲು ಯತ್ನಿಸಿದ. ಆದರೆ ಬಟ್ಟಲಾದರೂ ಎಲ್ಲಿತ್ತು? ಹದಿನೈದು ವರ್ಷಗಳ ನಿರಂತರ ಪೂಜೆಯ ನಂತರವೂ, ಜಿಪುಣತನವು ಧನಪಾಲನನ್ನು ಬಿಡದಿರುವುದನ್ನು ಪ್ರಭು ರಾಮಚಂದ್ರನು ಗಮನಿಸಿಯೇ ಗಮನಿಸಿದ. ಧನಪಾಲನ ಕೈಯನ್ನು ಥಟ್ಟನೆ ಹಿಡಿದು ಹೇಳಿದ – "ಅಯ್ಯೋ, ನಿಜವಾದ ಬಟ್ಟಲೂ ಇಲ್ಲ ನಿಜವಾದ ಸಕ್ಕರೆಯೂ ಇಲ್ಲ! ಹೆಚ್ಚು ಸಕ್ಕರೆ ಬಟ್ಟಲಲ್ಲಿ ಬಿದ್ದಿದ್ದರೆ ಇರಲಿ ಬಿಡು. ಇವೆಲ್ಲ ಬರಿಯ ಕಲ್ಪನೆಯಲ್ಲವೆ?" ಭಗವಂತನ ಹಸ್ತಸ್ಪರ್ಶ ಒಮ್ಮೆ ಆಯಿತೆಂದ ಕೂಡಲೇ ಧನಪಾಲನು ಪರಿವರ್ತಿತನಾಗಿಬಿಟ್ಟ, ತನ್ನ ಮನೆ, ಐಶ್ವರ್ಯ ಎಲ್ಲವನ್ನೂ ತ್ಯಜಿಸಿ ತಪಸ್ಸಿಗೆಂದು ಹಿಮಾಲಯಕ್ಕೆ ತೆರಳಿಬಿಟ್ಟ.

✤ ✤ ✤



## 32. ವೇದಾಂತದ ಜೋಗುಳ

ರಾಣಿ ಮದಾಲಸಾ ವೇದಾಂತ ತತ್ತ್ವದಲ್ಲಿ ಹಾಗೂ ಶಾಸ್ತ್ರಜ್ಞಾನದಲ್ಲಿ ಜನ್ಮತ ಆಳವಾಗಿ ಮುಳುಗಿಹೋಗಿದ್ದಳು. ಅವಳು ಮೊದಲ ಮಗುವನ್ನು ಪಡೆದಾಗ, ತೊಟ್ಟಿಲು ತೂಗುತ್ತಾ ಹೀಗೆ ಹಾಡುತ್ತಿದ್ದಳು:

"ಓ ಮಗುವೆ ನೀನು ಪರಿಶುದ್ಧ, ಪ್ರಕಾಶ ಸ್ವರೂಪ ಪ್ರಾಪಂಚಿಕ ಮಾಯೆಯಿಂದ ನಿರ್ಲಿಪ್ತ. ಈ ಅಜ್ಞಾನದ ನಿದ್ರೆಯನ್ನು ತೊರೆದು ಬಿಡು, ಅದೂ ಮಾಯಾ ಪ್ರಪಂಚದ ಮಾಯೆಯ ಒಂದು ಭಾಗವೇ ಆಗಿದೆ. ಎಚ್ಚರಗೊಳ್ಳು."

ಹೀಗೆ ಹುಟ್ಟಿದಾರಭ್ಯ ತಾತ್ತ್ವಿಕ ಪರಿಕಲ್ಪನೆಗಳಲ್ಲಿಯೇ ಬೆಳೆಸಲ್ಪಟ್ಟ ಮಗುವು. ಬೆಳೆದ ಮೇಲೂ ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತನಾಗದೆ, ಹತ್ತು ವರ್ಷದವನಾಗುತ್ತಿದ್ದಂತೆಯೇ ಕಾಡಿಗೆ ತೆರಳಿ ತೀವ್ರವಾದ ಸಾಧನೆಯಲ್ಲಿ ನಿರತನಾದನು.

ಎರಡನೆಯ ಮಗ ಹುಟ್ಟಿದಾಗ ಮದಾಲಸಾ ಜೋಗುಳ ಹಾಡುತ್ತಿದ್ದುದು ಹೀಗೆ:

''ಓ ಮಗುವೆ, ನೀನು ಪರಿಶುದ್ಧ ಸ್ವರೂಪಿ, ನಿನಗೆ ಯಾವ ಹೆಸರೂ ಇಲ್ಲ. ಕೇವಲ ಒಂದು ಕಾಲ್ಪನಿಕ ನಾಮವನ್ನು ನಿನಗೆ ನಾವು ನೀಡಿದ್ದೇವೆ. ಪಂಚಭೂತಾತ್ಮಕವಾದ ಈ ದೇಹ ನಿನ್ನದಲ್ಲ'' ನೀನು ಅದಕ್ಕೆ ಸೇರಿದವನೂ ಅಲ್ಲ ಏಕಳುವೆ ಕಂದಾ?''

ಕಾಲಕ್ರಮದಲ್ಲಿ ಈ ಮಗನೂ ಮನೆಯನ್ನು ತೊರೆದು ಸಾಧನೆಗೆಂದು ಕಾಡಿಗೆ ಹೊರಟುಹೋದನು. ರಾಜನು ವೃದ್ಧನಾಗುತ್ತಿದ್ದನು. ಆತಂಕಕ್ಕೆ ಒಳಗಾದನು. ಮದಾಲಸಾ ತನ್ನ ಎಲ್ಲ ಮಕ್ಕಳನ್ನೂ ಹೀಗೆ ಫಕೀರರನ್ನಾಗಿ ಮಾಡಿಬಿಟ್ಟರೆ, ರಾಜ್ಯಕ್ಕೆ ಉತ್ತರಾಧಿಕಾರಿಯಾಗಲು ಯಾವ ಮಗನೂ ಉಳಿಯುವುದಿಲ್ಲ ಎಂಬುದೇ ರಾಜನ ಚಿಂತೆ.

ಒಂದಾದರೂ ಮಗುವನ್ನು ಸಿಂಹಾಸನಕ್ಕಾಗಿ ಉಳಿಸಿಕೊಡುವಂತೆ, ವೇದಾಂತವನ್ನು ಉಪದೇಶಿಸದಿರುವಂತೆ ಮದಾಲಸೆಯನ್ನು ಪ್ರಾರ್ಥಿಸಿದನು. ಆಕೆ ಒಪ್ಪಿದಳು.

ತಂದೆಯ ನಂತರ ಅಲರ್ಕ ಎಂಬ ಮಗನು ದೊರೆಯಾದನು. ಒಂದು ದಿನ ಅವನು ತಾಯಿಯನ್ನು ಕೇಳಿದನು: ''ಅಮ್ಮಾ, ನನಗೊಬ್ಬ ಸರಿಯಾದ ಗುರು ಬೇಕಾಗಿದೆ. ಇಂದು ವೇದಾಂತ ಜ್ಞಾನದಲ್ಲಿ ಅತ್ಯಂತ ಶ್ರೇಷ್ಠನಾದ ಗುರು ಯಾರಿದ್ದಾರೆ? ಅವರನ್ನೆಲ್ಲ ಆಶ್ರಯಿಸುತ್ತೇನೆ.'' ಮದಾಲಸಾ ಉತ್ತರಿಸಿದಳು: ''ಭಗವಂತನ ಅವತಾರವೇ ಆದ ದತ್ತಾತ್ರೇಯರೇ ಎಲ್ಲ ಕಾಲಕ್ಕೂ ಶ್ರೇಷ್ಠತಮ ಗುರು. ಆದರೆ ಅವರನ್ನು ಹುಡುಕುವುದೇ ಕಠಿಣ. ಅವರು ಯಾವಾಗಲೂ ಸಂಚರಿಸುತ್ತಲೇ ಇರುತ್ತಾರೆ. ಕೆಲವೊಮ್ಮೆ ಭಿಕಾರಿಯಂತೆ, ಹುಚ್ಚನಂತೆ, ಮದಿರಾ ಪಾನಮತ್ತನಂತೆ ಸೋಗುಹಾಕುತ್ತಾರೆ. ಆದರೆ ಅವರು ಯಾರನ್ನೂ ವಿರೋಧಿ



ಸುವುದಿಲ್ಲ. ಸೂರ್ಯನನ್ನು ಯಾರಾದರೂ ಚಂದ್ರನೇ ಎಂದರೂ ಅವರು ವಿರೋಧಿಸುವುದಿಲ್ಲ. ನಿನಗೆ ನನ್ನ ಅನಂತ ಆಶೀರ್ವಾದವಿದೆ. ಹುಡುಕು ಹೋಗು.''

ಅಲರ್ಕ ತನ್ನೊಡನೆ ಒಂದು ಸಾಧಾರಣ ಕಲ್ಲೊಂದನ್ನು ತೆಗೆದುಕೊಂಡು, ದತ್ತಾತ್ರೇಯರನ್ನು ಹುಡುಕುತ್ತಾ ಎಲ್ಲ ಪವಿತ್ರ ಯಾತ್ರಾ ಸ್ಥಳಗಳಿಗೂ ಧಾರ್ಮಿಕ ಕ್ಷೇತ್ರಗಳಿಗೂ ಸುತ್ತತೊಡಗಿದ. ದತ್ತಾತ್ರೇಯರೇ ಇರಬಹುದು ಎಂಬ ಸಂದೇಹ ಉಂಟಾದ ಪ್ರತಿವ್ಯಕ್ತಿಗೂ ಆ ಕಲ್ಲನ್ನು ತೋರಿಸುತ್ತಾ ಇದು ಏನು ಹೇಳಿ ಎನ್ನುತ್ತಿದ್ದ. ಅದೊಂದು ಸಾಧಾರಣ ಕಲ್ಲು ಎಂದು ಅವರೆಂದರೆ, ಅಲ್ಲವೇ ಅಲ್ಲ ಇದೊಂದು ವಜ್ರ ಅಥವಾ ಚಿನ್ನದ ಗಟ್ಟಿ ಎನ್ನುತ್ತಿದ್ದ! ಇವನೊಬ್ಬ ಶುದ್ಧ ಮೂರ್ಖ ಎಂದು ಜರೆದು ಅವರೆಲ್ಲ ಹೊರಟುಹೋಗುತ್ತಿದ್ದರು. ಕಟ್ಟಕಡೆಗೆ ಅಲರ್ಕ ಒಂದು ದೇವಾಲಯಕ್ಕೆ ಬಂದ. ಅಲ್ಲಿ ಒಂದು ಮೂಲೆಯಲ್ಲಿ ಜನಿವಾರ ಧರಿಸಿದ ಒಬ್ಬ ಬ್ರಾಹ್ಮಣ ಮೌನವಾಗಿ ಕುಳಿತು, ಮೈಯನ್ನು ಅದರಿಂದ ಕೆರೆದುಕೊಳ್ಳುತ್ತಾ ಕುಳಿತಿದ್ದ. ಅಲರ್ಕನು ಅವನನ್ನು ಸಮೀಪಿಸಿ, ಕಲ್ಲನ್ನು ತೋರಿಸಿ, ಇದೊಂದು ವಜ್ರ ಸ್ವಾಮಿಗಳೇ ಎಂದು ಸಮರ್ಥಿಸಿಕೊಂಡಾಗ, ಆ ಬ್ರಾಹ್ಮಣನು, ಹೌದು ಹೌದು ಇದು ವಜ್ರವೇ ಎಂದ. ಮತ್ತೆ ಅಲರ್ಕನು ''ಇಲ್ಲ ಸ್ವಾಮಿ, ನಾನು ತಮಾಷೆಗೆಂದೆ. ಇದು ಒಂದು ಸಾಧಾರಣ ಕಲ್ಲು'' ಎಂದರೆ ಅದಕ್ಕೂ ಆತ ಹೌದು ಎಂದ. ಅಲರ್ಕನಿಗೆ ತನ್ನ ಗುರು ದತ್ತಾತ್ರೇಯರು ದೊರಕಿದರು. ಆತನ ಪಾದಗಳಿಗೆರಗಿ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಬೇಡಿದ. ಮೊದಮೊದಲು ನಿರಾಕರಿಸಿದರೂ ಅಂತ್ಯದಲ್ಲಿ ಬ್ರಾಹ್ಮಣನು ತನ್ನ ನಿಜಸ್ವರೂಪವನ್ನು ತೋರಿ ಅಲರ್ಕನನ್ನು ಶಿಷ್ಯನಾಗಿ ಸ್ವೀಕರಿಸಿದ.

✤ ✤ ✤

# 33. ನೋಟದಲ್ಲಿಯೇ ಹಿಂಸೆ

ಇಂದು ನಿಶ್ಶಸ್ತ್ರೀಕರಣದ ಬಗೆಗೆ ಬೇಕಾದಷ್ಟು ಮಾತು ಕೇಳಬರುತ್ತಿದೆ. ವಾಲ್ಮೀಕಿ ರಾಮಾಯಣದಲ್ಲಿ ಈ ಬಗ್ಗೆ ಒಂದು ಸುಂದರವಾದ ಕಥೆ ಉಂಟು.

ಶ್ರೀರಾಮನು ಹದಿನಾಲ್ಕು ವರ್ಷದ ವನವಾಸಕ್ಕೆ ಹೊರಟಾಗ (ಕೈಕೇಯಿಗೆ ತನ್ನ ತಂದೆ ಕೊಟ್ಟ ಮಾತನ್ನು ನಡೆಸುವುದಕ್ಕಾಗಿ), ಪತ್ನಿ ಸೀತಾದೇವಿ ಹಾಗೂ ಸೋದರ ಲಕ್ಷ್ಮಣ ಸಹ ಅವನನ್ನು ಹಿಂಬಾಲಿಸಿದರು. ರಾಮನು ಒಬ್ಬ ಋಷಿ ಅಥವಾ ಸಂನ್ಯಾಸಿಯಂತೆ ವೇಷಧರಿಸಿದ್ದರೂ ತನ್ನೊಡನೆ ಬಿಲ್ಲು ಬಾಣಗಳನ್ನೂ ತೆಗೆದುಕೊಂಡಿದ್ದ.

ಈ ಆಯುಧಗಳು ನಮ್ಮೊಡನೆ ಬೇಡ ಎಂದು ಸೀತೆ ಪ್ರತಿರೋಧಿಸಿದಳು. ಅವಳು ನೀಡಿದ ಹಲವು ಕಾರಣಗಳಲ್ಲಿ ಒಂದು ಹೀಗಿತ್ತು: ''ಕೇವಲ ನಿಷ್ಕಪಟದಿಂದ ನಾವು ಆಯುಧಗಳನ್ನು ಹೊಂದಿದ್ದರೂ, ತೀರ ಅನಿವಾರ್ಯ ಸಂದರ್ಭದಲ್ಲಿ ಅಲ್ಲದೆ ಅವುಗಳನ್ನು ಉಪಯೋಗಿಸುವುದಿಲ್ಲ ಎಂದು ನಿರ್ಧರಿಸಿದ್ದರೂ, ಅವುಗಳನ್ನು ನೋಡಿದರೂ ಸಾಕು, ನಮಗೇ ತಿಳಿಯದಂತೆ ಅವು ನಮ್ಮನ್ನು ಹಿಂಸೆಗೆ ಪ್ರಚೋದಿಸಿಬಿಡುತ್ತವೆ'' ಎಂದು ತನ್ನ ಮಾತಿನ ಸಮರ್ಥನೆಗಾಗಿ ಸೀತೆ ಒಂದು ಕಥೆಯನ್ನೂ ಹೇಳಿದಳು.



ಒಮ್ಮೆ ಒಬ್ಬ ಮಹಾಋಷಿ ಒಂದು ಕಾಡಿನಲ್ಲಿ ತೀವ್ರವಾದ ತಪಸ್ಸಿಗೆ ತೊಡಗಿದ್ದ. ತನ್ನ ತಪಸ್ಸಿನ ಪ್ರಭಾವದಿಂದ ಈ ಋಷಿ ಇಂದ್ರ ಪದವಿಯನ್ನೇ ಗಿಟ್ಟಿಸಲು ಬಯಸಿದ್ದಾನೆ ಎಂದು ದೇವರಾಜ ಇಂದ್ರನು ಭೀತನಾದ. ಹೀಗಾಗಿ ಆ ಋಷಿಯ ತಪಸ್ಸಿಗೆ ಏನಾದರೂ ವಿಘ್ನ ಉಂಟುಮಾಡಲು ಬಯಸಿದ. ಸಂಚಾರ ಹೊರಟಿದ್ದ ಯೋಧನ ಹಾಗೆ ವೇಷತೊಟ್ಟು ಆ ಋಷಿಯ ಕುಟೀರಕ್ಕೆ ಬಂದ. ಫಳಫಳನೆ ಹೊಳೆವ ಒಂದು ಉದ್ದವಾದ ಕತ್ತಿ ಇಂದ್ರನ ಬಳಿ ಇತ್ತು. ತಾನು ಕೇದಾರನಾಥಕ್ಕೆ ಯಾತ್ರೆ ಹೊರಟಿರುವುದಾಗಿಯೂ, ಹಿಂತಿರುಗಿ ಬರುವವರೆಗೆ ಈ ಖಡ್ಗವನ್ನು ಕುಟೀರದ ವರಾಂಡದಲ್ಲಿ ಇರಿಸಿರಲು ಅನುಮತಿ ನೀಡಬೇಕೆಂದೂ ಪ್ರಾರ್ಥಿಸಿದ. ಋಷಿಯು ತಕ್ಷಣ ಒಪ್ಪಿಕೊಂಡ. ಪ್ರತಿದಿನ ಪೂಜೆಗೆ ಹೂವುಗಳನ್ನು ಬಿಡಿಸಿಕೊಂಡು ಬರಲು ಹೊರಟಾಗ, ನೆಲದ ಮೇಲಿರಿಸಿದ ಹೊಳೆಹೊಳೆವ ಖಡ್ಗವನ್ನೊಮ್ಮೆ ದಿಟ್ಟಿಸಿ ನೋಡುತ್ತಿದ್ದ. ಒಂದು ದಿನ ಅದನ್ನು ಮುಟ್ಟಿ ನೋಡುವ ಆಸೆಯಾಯಿತು. ಅದನ್ನು ಕೈಗಳಲ್ಲಿ ತೂಗಾಡಿಸಿದಾಗ, ಅದರ ತುದಿ ಹರಿತವಾಗಿರುವುದು ಕಂಡಿತು. ಇನ್ನೂ ಕೆಲವು ದಿನ ಹೀಗೆಯೇ ಖಡ್ಗವನ್ನು ನೇವರಿಸುತ್ತಿದ್ದ. ಒಂದು ದಿನ ಪುಷ್ಪ ಸಂಚಯಕ್ಕೆ ಎಂದಿನಂತೆ ಬೆಳಗ್ಗೆ ಹೊರಟಾಗ, ಖಡ್ಗವನ್ನೂ ತೆಗೆದುಕೊಂಡೇ ಹೋದ. ಮರದ ರೆಂಬೆಕೊಂಬೆಗಳನ್ನು ಅದರಿಂದ ಸವರಿ ಹಾಕಿದ. ನಿರಾಯಾಸವಾಗಿ ಖಡ್ಗವನ್ನು ಪ್ರಯೋಗಿಸಬಲ್ಲೆ ಎಂದು ಕಂಡುಕೊಂಡು ಆಶ್ಚರ್ಯಪಟ್ಟ. ಎಲ್ಲಿಗೆ ಹೋದರೂ ಅದನ್ನು ತನ್ನೊಡನೆ ತೆಗೆದುಕೊಂಡು ಹೋಗುವುದು ಅವನಿಗೆ ಅಭ್ಯಾಸವೇ ಆಗಿಬಿಟ್ಟಿತು. ಒಂದು ದಿನ ತನ್ನ ದಾರಿಗೆ ಅಡ್ಡಬಂದ ಬೆಕ್ಕನ್ನು ಕಂಡು ಖಡ್ಗವನ್ನು ಅದರತ್ತ ಬೀಸಿದ. ತಕ್ಷಣ ಅಲ್ಲಿಯೇ ಬೆಕ್ಕು ಸತ್ತು ಬಿದ್ದಿತು. ಒಂದು ಮುಗ್ಧ ಬೆಕ್ಕನ್ನು ಕೊಂದ ಪಾಪದ ಫಲವಾಗಿ ಹಲವಾರು ವರ್ಷಗಳ ಉತ್ಕಟ ತಪದಿಂದ ಆರ್ಜಿಸಿದ ಪುಣ್ಯವು (ಶಕ್ತಿಯು) ನಾಶವಾಗಿಬಿಟ್ಟಿತು. ತನ್ನ ಈ ವ್ಯೂಹರಚನೆಯ ಕೌಶಲಕ್ಕೆ ಇಂದ್ರನು ತನಗೆ ತಾನೇ ಮೈ ಉಬ್ಬಿಸಿದ.

✤ ✤ ✤

# 34. ವಿದ್ಯಾಭ್ಯಾಸಕ್ಕೆ ದುಬಾರಿಯಾದ ಫೀಸು

ಕೌತ್ಸನು ಮಹಾಋಷಿ ವರತಂತುವಿನ ಶಿಷ್ಯ. ಹದಿನೈದು ವರ್ಷಗಳ ಕಾಲ ಗುರುವಿನೊಡನೆ ವಾಸವಿದ್ದು ತನ್ನ ವಿದ್ಯಾಭ್ಯಾಸವನ್ನು ಪೂರೈಸಿದ ನಂತರ, ತಾನು ಕೊಡಬೇಕಾದ ದಕ್ಷಿಣೆ ಎಷ್ಟು ಎಂದು ಗುರುವನ್ನು ಕೇಳಿದ. ಕೌತ್ಸನ ಆರ್ಥಿಕ ಸ್ಥಿತಿ ಏನೇನೂ ಚೆನ್ನಿಲ್ಲ ಎಂಬುದನ್ನು ಅರಿತಿದ್ದ ಗುರು ಅವನಿಂದ ಯಾವುದೇ ದಕ್ಷಿಣೆಯನ್ನು ಸ್ವೀಕರಿಸಲು ಒಲ್ಲದೆ ಹೋದರು. ಏನನ್ನಾದರೂ ಸ್ವೀಕರಿಸಲೇ ಬೇಕೆಂದು ಕೌತ್ಸ ಮತ್ತೆ ಮತ್ತೆ ಒತ್ತಾಯಿಸಿದಾಗ ವರತಂತು ಕುಸಿತರಾಗಿ ಅತ್ಯಂತ ಕಠಿಣವಾದ ಗುರುದಕ್ಷಿಣೆಯನ್ನು ನೀಡಲು ಒತ್ತಾಯಿಸಿದರು: ''ನಾನು ನಿನಗೆ ಬೋಧಿಸಿದ ಹದಿನೆಂದು ವಿವಿಧ ವಿಷಯಗಳಿಗೆ ದಕ್ಷಿಣೆಯಾಗಿ, ಹದಿನಾಲ್ಕು ಕೋಟಿ ಬೆಲೆ ಬಾಳುವ ಚಿನ್ನದ ನಾಣ್ಯಗಳನ್ನು ತಂದುಕೊಡು'' ಎಂದು ಹೇಳಿಬಿಟ್ಟರು. ಕೌತ್ಸನು ಕೊಂಚವಾದರೂ ಹಿಂಜರಿಯಲಿಲ್ಲ. ಗುರುವಿನ ಕಾರುಣ್ಯದಲ್ಲಿ ಅವನಿಗೆ ಪೂರ್ಣವಾದ ಶ್ರದ್ಧೆಯಿತ್ತು. ಹದಿನಾಲ್ಕು ಕೋಟಿ ಬೆಲೆಯ ಚಿನ್ನವನ್ನು ಸಂಗ್ರಹಿಸುವ ಮಾರ್ಗವನ್ನೂ ಅವರೇ ತೋರುತ್ತಾರೆ ಎಂದು ಅವನು ಬಲ್ಲ. ಶ್ರೀರಾಮಚಂದ್ರನ ಮುತ್ತಜ್ಜನಾಗಿದ್ದ ರಘುಮಹಾರಾಜನ ಬಳಿಗೆ, ಗುರುವಿನ ಅಗೋಚರ ಕಾರುಣ್ಯದಿಂದಲೇ ಎಂಬಂತೆ ಬಂದು ನಿಂತ. ದುರದೃಷ್ಟವೆಂಬಂತೆ ಅದೇ ಕಾಲಕ್ಕೆ ರಘುಮಹಾರಾಜನು ಒಂದು ಬಹುದೊಡ್ಡ ವಿಶ್ವಜಿತ್‌ಯಾಗವನ್ನು ನೆರವೇರಿಸಿ



ಸಂಪತ್ತನ್ನೆಲ್ಲ ಪುರೋಹಿತರಿಗೂ ಬ್ರಾಹ್ಮಣರಿಗೂ ದಕ್ಷಿಣೆಯಿತ್ತು ಬರಿಗೈಯಾಗಿ ಬಿಟ್ಟಿದ್ದ.

ಇಂತಹ ಸಂದರ್ಭದಲ್ಲಿಯೂ ರಘು ತನ್ನ ಸ್ಥಿತಿಯನ್ನು ಲೆಕ್ಕಿಸಲೇ ಇಲ್ಲ. ಕೌತ್ಸನು ಒಂದು ರಾತ್ರಿ ತನ್ನೊಡನೆ ಇದ್ದರೆ ಸಾಕು, ಅವನ ಅಪೇಕ್ಷೆ ಪೂರೈಸಲ್ಪಡುತ್ತದೆ ಎಂದು ಭರವಸೆ ನೀಡಿದ. ಅಷ್ಟು ದೊಡ್ಡ ಮೊತ್ತ ದೊರೆಯುವುದು ಧನಪತಿಯಾದ ಕುಬೇರನಲ್ಲಿ ಮಾತ್ರವಾದುದರಿಂದ, ಅವನ ರಾಜಧಾನಿ ಅಲಕಾಪುರಿಯ ಮೇಲೆ ಮರುದಿನವೇ ಧಾಳಿಮಾಡಲು ನಿಶ್ಚಯಿಸಿದ ರಘು, ತನ್ನ ಸೈನ್ಯವನ್ನು ಸನ್ನದ್ಧಗೊಳಿಸಿದ. ರಘುವಿನ ಈ ಯೋಜನೆಯನ್ನು ಅದು ಹೇಗೋ ತಿಳಿದುಕೊಂಡ ಕುಬೇರ, ರಾಜನ ಅಪ್ರತಿಮ ಸಾಹಸವನ್ನೂ ಕೌತ್ಸನ ಬಗೆಗಿನ ಕಾರುಣ್ಯವನ್ನೂ ಅರಿತು ಮೆಚ್ಚಿಕೊಂಡ. ಅದೇ ರಾತ್ರಿ ರಘುವಿನ ಅರಮನೆಯ ಮೇಲೆ ಅಪರಿಮಿತವಾದ ಚಿನ್ನದ ಮಳೆಯನ್ನೇ ಕರೆದುಬಿಟ್ಟ. ಅದೆಲ್ಲವನ್ನೂ ಕೌತ್ಸನೊಡನೆ ಗುರುವಿನ ಆಶ್ರಮಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಹಾರಾಜ ರಘು ಮಾಡಿದ.

ಗುರುಗೀತೆಯಲ್ಲಿ ಹೀಗೆ ಹೇಳಲಾಗಿದೆ: ''ಸಾಕ್ಷಾತ್ ಶಿವನ ಕೋಪದಿಂದಲೂ ಗುರು ತನ್ನ ಶಿಷ್ಯನನ್ನು ರಕ್ಷಿಸುತ್ತಾನೆ. ಆದರೆ ಗುರುವೇ ಕುಪಿತನಾದರೆ ಅವನ ಶಿಷ್ಯನನ್ನು ಮತ್ತಾರೂ ರಕ್ಷಿಸಲಾರರು.'' ಇದರ ಅರ್ಥವೆಂದರೆ, ಅಂಥ ಸಂದರ್ಭದಲ್ಲಿ ಗುರುವು ತಾನೇ ಸೂಕ್ಷ್ಮ ರೀತಿಯಲ್ಲಿ ತನ್ನ ಶಿಷ್ಯನನ್ನು ರಕ್ಷಿಸುತ್ತಾನೆ ಎಂದು. ಈ ಅಂಶವನ್ನು ಸಮರ್ಥಿಸುವ ಒಂದು ಉದಾಹರಣೆ - ಕೌತ್ಸನದು.

✤ ✤ ✤

---

1 ಶಿವೇ ರುಷ್ಟೇ ಗುರುಸ್ತ್ರಾತಾ ಗುರೌರುಷ್ಟೇನಕಶ್ಚನ ।

- ಗುರುಗೀತಾ - 88

## 35. ಮನಸ್ಸಿನೊಡನೆ ಕಠಿಣವಾಗಿ ವರ್ತಿಸಬೇಡ !

ಗಾಜಿಪುರದ ಸ್ವಾಮಿಶರಣಾನಂದರು, ಅತ್ಯಂತ ಉನ್ನತ ಸ್ತರದ ಮಹಾತ್ಮರು, ಆದರೆ ಅಂಧರು. ಬೃಂದಾವನ ಮುಂತಾದ ಹಲವು ಸ್ಥಳಗಳಲ್ಲಿ ಮಾನವ ಸೇವಾ ಸಂಘಗಳನ್ನು ಅವರು ಸ್ಥಾಪಿಸಿದ್ದರು. ಒಮ್ಮೆ ಮಹಾತ್ಮಾ ಗಾಂಧೀಜಿಯವರ ದೀರ್ಘ ಕಾಲೀನ ಜೊತೆಗಾರರಾದ ಸಜ್ಜನರೊಬ್ಬರು ಸ್ವಾಮೀಜಿಯನ್ನು ಕಾಣಲು ಬಂದರು. ಅವರು ಸ್ವಾಮಿ ಶರಣಾನಂದರನ್ನು ಈ ರೀತಿ ಪ್ರಶ್ನಿಸಿದರು: ''ಸ್ವಾಮೀಜಿ, ಯೋಗಾವಾಸಿಷ್ಠ ಮುಂತಾದ ತತ್ವಶಾಸ್ತ್ರಗ್ರಂಥಗಳಲ್ಲಿ ಮನೋನಾಶದ ಬಗೆಗೆ ಪ್ರಸ್ತಾಪಿಸಲಾಗಿದೆ. ಅದನ್ನು ಸಾಧಿಸುವುದು ಹೇಗೆ ? ದಯಮಾಡಿ ವಿವರಿಸಿ.''

ಸ್ವಾಮೀಜಿ : ''ರಾವ್ ರಾವ್! ತಾವು ಗಾಂಧೀಜಿಯವರ ಅನುಯಾಯಿಯಾಗಿದ್ದೀರಿ, ಆದರೂ ಹಿಂಸೆಯ ಬಗೆಗೆ ಮಾತನಾಡುತ್ತೀರಲ್ಲಾ! ಏಕಾದರೂ ತಾವು ಮನಸ್ಸನ್ನು ನಾಶಗೊಳಿಸಬೇಕು ? ಗಾಂಧೀಜಿಯವರ ಪ್ರಮುಖ ಸಿದ್ಧಾಂತವಾದರೂ ಏನು ? ಅಹಿಂಸೆ ಹಾಗೂ ಅಸಹಕಾರ ಅಲ್ಲವೆ ? ಅವುಗಳನ್ನೇ ಇಲ್ಲಿಯೂ ಪ್ರಯೋಗಿಸಿ. ಮನಸ್ಸಿನೊಡನೆ ಸಹಕರಿಸದಿರಿ. ಮನಸ್ಸು ''ಬಾರಯ್ಯೊ ಥಿಯೇಟರ್‌ಗೆ ಹೋಗಿ ಆರ್ಕೆಸ್ಟ್ರಾ ಕೇಳೋಣ'' ಎಂದರೆ ಹೋಗಬೇಡಿ ಅಷ್ಟೇ!

✤ ✤ ✤



## 36. ಯಾವುದೂ ನನ್ನದಲ್ಲ

ಯಾಜ್ಞವಲ್ಕ್ಯರು ಜೀವನ್ಮುಕ್ತ ಸ್ಥಿತಿಯಲ್ಲಿ ನೆಲೆಗೊಂಡಿದ್ದ ಮಹಾಋಷಿ. ಜನಕ ಮಹಾರಾಜನು ಆಳುತ್ತಿದ್ದ ಮಿಥಿಲೆಯ ಹೊರವಲಯದಲ್ಲಿ ಅವರು ವಾಸಿಸುತ್ತಿದ್ದರು. ಪ್ರತಿಸಂಜೆ ಅವರು ವೇದಾಂತ ತತ್ತ್ವವನ್ನು ಕುರಿತು ಸತ್ಸಂಗವನ್ನು ನಡೆಸುತ್ತಿದ್ದರು. ಅವರ ಪ್ರವಚನವನ್ನು ಕೇಳಲು ಅಧ್ಯಾತ್ಮ ವಿದ್ಯೆಯಲ್ಲಿ ಅಪಾರ ಜ್ಞಾನವನ್ನು ಹೊಂದಿದ್ದ ಜನಕನೂ ಸೇರಿದಂತೆ ಹಲವಾರು ಸಂನ್ಯಾಸಿಗಳು ಬರುತ್ತಿದ್ದರು. ಯಾವುದಾದರೂ ರಾಜಕಾರ್ಯ ನಿಮಿತ್ತ ಜನಕನು ಸಕಾಲದಲ್ಲಿ ಬರಲು ಸಾಧ್ಯವಾಗದಿದ್ದರೆ, ಆತನು ಬರುವವರೆಗೂ ಸತ್ಸಂಗವು ಪ್ರಾರಂಭವಾಗುತ್ತಿರಲಿಲ್ಲ. ಈ ಬಗ್ಗೆ ಸಂನ್ಯಾಸಿಗಳು ನಿಂದನೆಯ ಮಾತುಗಳನ್ನಾಡುತ್ತಿದ್ದರು: ಮಹಾ ಬ್ರಹ್ಮಜ್ಞಾನಿಯಾದ ಈ. ಯಾಜ್ಞವಲ್ಕ್ಯರನ್ನು ನೋಡಿ. ಆಶ್ರಮದ ಅವಶ್ಯಕತೆಗಳನೆಲ್ಲ ಪೂರೈಸುತ್ತಿರುವ ಜನಕ ಮಹಾರಾಜನನ್ನು ಒಲೈಸಲು ಅವರೂ ಯತ್ನಿಸುತ್ತಾರೆ.'' ಅವರ ಭಾವನೆಗಳನ್ನು ಅರಿತ ಯಾಜ್ಞವಲ್ಕ್ಯರು, ಜನಕ ಮಹಾರಾಜನು ಅಧ್ಯಾತ್ಮ ಜೀವನವನ್ನು ನಡೆಸುವಂತಹ ಯಾವ ಎತ್ತರದ ಅರ್ಹತೆಯನ್ನು ಪಡೆದಿದ್ದಾನೆ ಎಂಬುದನ್ನು ಸಮರ್ಥಿಸಿ ತೋರಿಸಲು ಬಯಸಿದರು. ಆ ಸಂನ್ಯಾಸಿಗಳಲ್ಲಿ ಯಾರೊಬ್ಬರೂ ಆತನ ಸಮಕ್ಕೆ ಬರಲಾರರು ಎಂದು ತೋರ್ಪಡಿಸುವ ಉದ್ದೇಶ ಅವರದಾಗಿತ್ತು.

ಒಂದು ದಿನ ಸತ್ಸಂಗದ ಸಭೆ ನಡೆಯುತ್ತಿರುವಾಗಲೇ ಒಬ್ಬ ಗ್ರಾಮೀಣ ವ್ಯಕ್ತಿ ಅಲ್ಲಿಗೆ ಓಡಿ ಬಂದು, ಸಂನ್ಯಾಸಿಗಳನ್ನು ಕುರಿತು ಅವರ ಇಡಿಯ ಬಡಾವಣೆ ಬೆಂಕಿಹತ್ತಿ ಉರಿಯುತ್ತಿದೆ ಎಂದು ಕೂಗತೊಡಗಿದ. ಅದನ್ನು ಕೇಳುತ್ತಿದ್ದಂತೆಯೇ ಪ್ರವಚನಕಾರರು ಅನುಮತಿಯನ್ನು ಪಡೆಯದೆಯೇ ಅವರೆಲ್ಲ ತಮ್ಮ ಬಡಾವಣೆಗೆ ದೌಡಾಯಿಸಿದರು. ಆದರೆ ತಮ್ಮ ವಸ್ತುಗಳೆಲ್ಲ-ಎಂದರೆ ಕೆಲವು ಹರಕು ಚಿಂದಿ ಹಾಗೂ ಕೌಪೀನಗಳು ಸುರಕ್ಷಿತವಾಗಿರುವುದನ್ನು ಕಂಡು ಸಮಾಧಾನಗೊಂಡರು. ಬೆಂಕಿ ಹೊತ್ತಿದ ಸುದ್ದಿ ಬರಿಯ ಮಿಥ್ಯೆ ಎಂದು ಅರಿತರು.

ಹಲವು ದಿನಗಳ ನಂತರ ಹೀಗೆಯೇ ಸತ್ಸಂಗವು ನಡೆಯುತ್ತಿರುವಾಗ, ಅರಮನೆಯ ಕಾವಲುಗಾರರು ತುಂಬ ಉದ್ವೇಗ, ಕಳವಳಗಳಿಂದ ಓಡಿಬಂದು, ರಾಜಾ ಜನಕನ ಬಳಿಗೆ ತೆರಳಿ ಪ್ರವಚನಕ್ಕೆ ವ್ಯತ್ಯಯ ಉಂಟಾಗದಂತೆ ಮೆಲುದನಿಯಲ್ಲಿ ಅವನ ಕಿವಿಗಳಲ್ಲಿ ಪಿಸುಗುಟ್ಟಿದರು. ಜನಕನು ಅವರಿಗೆ ತಕ್ಷಣ ಏನೋ ಸೂಚನೆಯಿತ್ತನು. ಅವರು ಹೊರಟು ಹೋದರು. ಸತ್ಸಂಗವು ಇನ್ನೂ ಒಂದು ಗಂಟೆ ಮುಂದುವರೆದು ಮುಕ್ತಾಯಗೊಂಡಿತು. ಯಾಜ್ಞವಲ್ಕ್ಯರು ಲೋಕಾಭಿರಾಮವಾಗಿ, ಅರಮನೆಯ ಕಾವಲುಗಾರರು ಉದ್ವೇಗದಿಂದ ಬಂದಿದ್ದರಲ್ಲಾ ಏನಾದರೂ ಕಳವಳಕಾರಿಯಾದ ಸುದ್ದಿ ಇದೆಯೇ ? ಎಂದು ಕೇಳಿದರು. ಅರಮನೆಯಲ್ಲಿ ಭಾರಿ ಬೆಂಕಿ ಹೊತ್ತಿಕೊಂಡಿದೆ. ಅದು ಅಂತಃಪುರದವರೆಗೂ ಹಬ್ಬಿದೆ ಎಂದು ಅವರು ಹೇಳಿದರಷ್ಟೇ! ಎಂದು ನಿರುದ್ವೇಗದಿಂದ ಹೇಳಿದನು. ಬೆಂಕಿ ಆರಿಸಲು ಯಾವ ಯತ್ನವನ್ನೂ ಮಾಡಲಿಲ್ಲ. ಈ ತಣ್ಣನೆಯ ಉತ್ತರವನ್ನು ಕೇಳಿದ ಮಹರ್ಷಿ ಚಕಿತರಾದರು. ''ಜನಕ ಮಹಾರಾಜ, ನಿನ್ನ ಆಪ್ತರಾದ ರಾಣಿಯರು, ಮಕ್ಕಳು ಬಂಧುಗಳು ಹಾಗೂ ಅರಮನೆ ಎಲ್ಲವೂ ಅಗ್ನಿಗೆ ಆಹುತಿಯಾಗುತ್ತಿದೆ ಎಂಬ ಸುದ್ದಿಯನ್ನು ಕೇಳಿದ



ಮೇಲೆಯೂ ಸತ್ಸಂಗದಲ್ಲಿ ಒಂದು ಗಂಟೆ ಶಾಂತವಾಗಿ ಕುಳಿತಿದ್ದೀಯಲ್ಲಾ! ಎಂತಹ ಅಚ್ಚರಿ ಇದು ಹೇಗಾದರೂ ನಿನಗೆ ಸಾಧ್ಯವಾಯಿತು'' ಎಂದರು.

ಜನಕನು ನೀಡಿದ ಉತ್ತರ ಲೋಕಪ್ರಸಿದ್ಧವಾಗಿದೆ.

''ನಾನು ಏನನ್ನೂ ಹೊಂದಿಲ್ಲ, ಯಾವುದೂ ನನ್ನದಲ್ಲಿ, ನನ್ನ ಸಂಪತ್ತು ಅನಂತವಾಗಿದೆ ಎಂದು ಮಾತ್ರ ಹೇಳಬಲ್ಲೆ. ಮಿಥಿಲಾನಗರವೇ ಸುಟ್ಟು ಬೂದಿಯಾದರೂ, ನನ್ನದು ಎಂಬುದು ಏನೂ ನಾಶವಾಗದು.''

✤ ✤ ✤

1. ಅನಂತಂಬತ ಮೇ ವಿತ್ತಂ ಯಸ್ಯ ಮೇ ನಾಸ್ತಿಕಿಂಚನ । ಮಿಥಿಲಾಯಾಂ ಪ್ರದೀಪ್ತಾಯಾಂ ನಮೇ ಕಿಂಚಿತ್ ಪ್ರಣಶ್ಯತಿ ॥

# 37. ಶಾಂತವಾಗಿದ್ದಾಗ ಹೋರಾಡು !

ಹಿಮಾಚಲ ಪ್ರದೇಶದಲ್ಲಿ ಅಕ್ಕಪಕ್ಕದ ರಾಜ್ಯಗಳಿಗೆ ಸೇರಿದ ರಾಮ್ ಮತ್ತು ಶ್ಯಾಮ್ ಎಂಬ ಇಬ್ಬರು ದೊರೆಗಳಿದ್ದರು. ಅವರ ಎರಡು ಕುಟುಂಬಗಳಲ್ಲೂ ತಲೆಮಾರುಗಳಿಂದ ಬದ್ಧದ್ವೇಷ. ಅದು ಎಷ್ಟುವರ್ಷಗಳಿಂದ ಹಾಗೂ ಏತಕ್ಕಾಗಿ ಎಂಬುದು ಯಾರಿಗೂ ತಿಳಿಯದು. ಆದರೆ ಮುಖತಃ ಎಂದೂ ಭೇಟಿಯಾಗದ ಆ ಇಬ್ಬರು ಅರಸರು ಪರಸ್ಪರ ದ್ವೇಷವನ್ನು ಮುಂದುವರೆಸಿಕೊಂಡು ಬಂದರು. ಅದಕ್ಕೆ ಯಾವ ನಿರ್ದಿಷ್ಟ ಕಾರಣವೂ ಇರಲಿಲ್ಲ. ಒಮ್ಮೆ ರಾಮ್ ಕಾಡಿಗೆ ಬೇಟೆಗೆಂದು ಹೋದಾಗ, ಅದೇ ಉದ್ದೇಶದಿಂದ ಅಲ್ಲಿಗೆ ಬಂದಿದ್ದ ಶ್ಯಾಮನೊಡನೆ ದೈವಯೋಗದಿಂದ ಭೇಟಿಯಾಯಿತು. ಅಂತರ್ಬೋಧೆಯಿಂದ ಅವರಿಬ್ಬರೂ ಪರಸ್ಪರ ಗುರುತಿಸಿಕೊಂಡುಬಿಟ್ಟರು. ಇಬ್ಬರೂ ತಮ್ಮ ತಮ್ಮ ಖಡ್ಗವನ್ನು ಹಿಡಿದು, ಕುದುರೆಗಳ ಬೆನ್ನೇರಿ ಕುಳಿತಿದ್ದರು. ಒಬ್ಬರನ್ನೊಬ್ಬರು ಕಾಣುತ್ತಿದ್ದಂತೆಯೇ ಖಡ್ಗ ಹಿರಿದು ಪರಸ್ಪರ ಹೋರಾಟಕ್ಕೆ ತೊಡಗಿದರು. ಈ ಕಾದಾಟದ ನಡುವೆ ಶ್ಯಾಮನು ಕುದುರೆಯಿಂದ ಜಾರಿ, ಖಡ್ಗವೂ ಕೈಯಿಂದ ದೂರ ಹಾರಿಹೋಗಿ ಕೆಳಗೆ ಬಿದ್ದುಬಿಟ್ಟನು. ರಾಮ್ ಹೀಗೆ ಕೆಳಗೆ ಬಿದ್ದ ದೊರೆಯ ಮೇಲೆ ಹಾರಿ ಕುಳಿತು ಅವನನ್ನು ಕತ್ತರಿಸಿಕೊಲ್ಲಲೆಂದು ಖಡ್ಗವನ್ನು ಮೇಲೆತ್ತಿದನು. ಅದೇ ಕ್ಷಣದಲ್ಲಿ ಕೆಳಗೆ ಬಿದ್ದಿದ್ದ ಶ್ಯಾಮನು ತನ್ನೆಲ್ಲ ಶಕ್ತಿಯನ್ನೂ



ಒಟ್ಟುಗೂಡಿಸಿಕೊಂಡು ರಾಮನ ಕಣ್ಣುಗಳ ಮೇಲೆ ರಿಕಾಪಿನಿಂದ ಬಾರಿಸಿದನು. ರಾಮನ ಕಣ್ಣುಗಳು ಕ್ರೋಧದಿಂದ ಕೆಂಪಾದವು. ಆದರೆ ಅವನು ತನ್ನ ಖಡ್ಗವನ್ನು ದೂರಕ್ಕೆ ಎಸೆದು ಅವನ ಎದೆಯ ಮೇಲಿಂದ ಇಳಿದು ಹೇಳಿದನು : ''ನಾವು ಬೇರೊಂದು ದಿನ ಭೇಟಿಯಾಗಿ ನಮ್ಮ ಅದೃಷ್ಟವನ್ನು ತೀರ್ಮಾನಿಸಿಕೊಳ್ಳೋಣ. ನೆಮ್ಮದಿಯಿಂದ ಮನೆಗೆ ಹೋಗು!'' ಹಿಂತಿರುಗಲು ಬೆನ್ನು ಮಾಡುತ್ತಿದ್ದಂತೆಯೇ ಶ್ಯಾಮನು ಅವನ ವಸ್ತ್ರವನ್ನು ಹಿಡಿದುಕೊಂಡು ಹೇಳಿದನು : ''ನಾವು ಪರಸ್ಪರ ಸ್ಥಾನಗಳನ್ನು ಬದಲಾಯಿಸಿಕೊಂಡಿದ್ದರೆ, ಒಂದೇ ಏಟಿಗೆ ನಿನ್ನನ್ನು ಖಡ್ಗದಿಂದ ಮುಗಿಸಿಬಿಡುತ್ತಿದ್ದೆ. ಖಂಡಿತಾ ಹೀಗೆ ನಿನ್ನನ್ನು ಬಿಟ್ಟು ಬಿಡುತ್ತಿರಲಿಲ್ಲ.'' ಸೋದರ ರಾಮ್, ನೀನು ಏಕಾದರೂ ನನ್ನನ್ನು ಬಿಟ್ಟುಬಿಟ್ಟೆ ದಯವಿಟ್ಟು ತಿಳಿಸಿ ಹೇಳು, ಎಲ್ಲ ಸಂದರ್ಭಗಳೂ ನಿನಗೇ ಅನುಕೂಲಕರವಾಗಿದ್ದವಲ್ಲಾ !'' ರಾಮ್ ಉತ್ತರಿಸಿದ: ''ಸೋದರನೇ, ಕೋಪಗೊಂಡಾಗ ಎಂದೂ ನೀನು ಹೋರಾಡಬೇಡ'' ಎಂದು ನನ್ನ ಗುರು ಉಪದೇಶಿಸಿದ್ದರು. ನಾನು ಹೋರಾಟಕ್ಕೆ ತೊಡಗಿದ್ದಾಗ, ನಿನ್ನ ಬಗೆಗೆ ನನಗೆ ಯಾವ ದ್ವೇಷವೂ ಇರಲಿಲ್ಲ - ಅದಕ್ಕೆ ಕಾರಣವೂ ಇರಲಿಲ್ಲವಾದುದರಿಂದ, ನನ್ನಲ್ಲಿ ಕೋಪವೂ ಇರಲಿಲ್ಲ. ಆದರೆ ನೀನು ನನ್ನ ಕಣ್ಣುಗಳ ಮೇಲೆ ಹೊಡೆಯುತ್ತಿದ್ದಂತೆಯೇ ನನ್ನ ಅಹಂಗೆ ಪೆಟ್ಟು ಬಿದ್ದಿತು, ನನ್ನೊಳಗೆ ಕೋಪದ ದೊಡ್ಡ ಅಲೆಯೇ ಎದ್ದಿತು. ಕೂಡಲೇ ನನ್ನ ಗುರುವಿನ ಆದೇಶವನ್ನು ನೆನಪು ಮಾಡಿಕೊಂಡೆ.''

ಶ್ಯಾಮನು ರಾಮನನ್ನು ಆಲಂಗಿಸಿ ಪ್ರಾರ್ಥಿಸಿದನು. ''ದಯಮಾಡಿ ನಿನ್ನ ಗುರುವನ್ನು ನನಗೆ ಪರಿಚಯಿಸು. ನಿನ್ನೊಡನೆಯೇ ಬರುತ್ತೇನೆ.''

ಕೋಪವನ್ನು ಸಮಾಧಾನದಿಂದಲೇ ಸೋಲಿಸಬೇಕು.
(ಅಕ್ರೋಧೇನ ಜಯೇತ್ ಕ್ರೋಧಮ್ ।)

✤ ✤ ✤

## 38. ಕರಕುಶಲ ಶಿಲ್ಪಿ

ಇಂದೋರಿನಲ್ಲಿ ಒಂದುಕಾಲದಲ್ಲಿ ಗೋವಿಂದ ಎಂಬ ಶಿಲ್ಪಿ ಇದ್ದನು. ಹಿಮಾಲಯದ ಮಹಾನ್ ಗುರು ಒಬ್ಬರಿಂದ ಅವನಿಗೆ ಮಂತ್ರೋಪದೇಶ ವಾಗಿದ್ದುದರಿಂದ ಅವನು ಯಾವುದೇ ಮೂರ್ತಿಯನ್ನು ನಿರ್ಮಿಸಲಿ, ಅದರಲ್ಲಿ ಒಂದು ಬಗೆಯ ದೈವಿಕ ಸೌಂದರ್ಯ ಹಾಗೂ ಶಕ್ತಿಯು ಮೂಡಿರುತ್ತಿದ್ದಿತು. ಅದು ಜೀವಂತವಾಗಿರುವಂತೆಯೇ ಭಾಸವಾಗುತ್ತಿದ್ದಿತು. ಶಿಲ್ಪಿಯು ಉತ್ತಮ ಭಕ್ತನಾಗಿದ್ದು ಕೃತಿ ನಿರ್ಮಿಸಿದ ನಂತರ ಜಪಧ್ಯಾನದಲ್ಲಿ ಗಂಟೆಗಟ್ಟಲೆ ನಿರತನಾಗಿರುತ್ತಿದ್ದನು. ಗುರುವಿನ ಅನುಗ್ರಹದಿಂದ ಮುಂದಿನ ಬುಧವಾರ ಅಂತ್ಯಕಾಲ ಸಮೀಪಿಸುತ್ತದೆ ಎಂಬುದು ಅವನಿಗೆ ಅಂತರ್ಬೋಧೆಯಿಂದ ತಿಳಿಯಿತು. ಆಗ ಅವನಿಗಿನ್ನೂ ನಲವತ್ತೈದು ವರ್ಷ, ಅಷ್ಟು ಬೇಗ ಸಾಯುವ ಅಪೇಕ್ಷೆಯೂ ಅವನಿಗಿರಲಿಲ್ಲ.

ಒಂದೇ ಬಗೆಯ ಏಳು ಮೂರ್ತಿಗಳನ್ನು ನಿರ್ಮಿಸಿ ಆ ಶಿಲ್ಪಿ ಅವುಗಳ ಮಧ್ಯೆ ತಾನೂ ನಿಂತುಕೊಂಡನು. ಎಲ್ಲ ಸೂಕ್ಷ್ಮ ವಿವರಗಳಲ್ಲಿಯೂ ಅವು ಅನುರೂಪವಾಗಿದ್ದು ಎಳ್ಳಷ್ಟೂ ವ್ಯತ್ಯಾಸ ಗೋಚರವಾಗುತ್ತಿರಲಿಲ್ಲ. ಎಲ್ಲ ಮೂರ್ತಿಗಳ ಮೊಗದಲ್ಲಿಯೂ ಮಂದಹಾಸ, ಧ್ಯಾನಮಗ್ನವಾಗಿರುವಂತೆ ಅರ್ಧಮುಚ್ಚಿದ ಕಣ್ಣುಗಳು.



ತನ್ನನ್ನು ಸ್ಪರ್ಶಿಸದೆ ಆ ಮೂರ್ತಿಗಳಲ್ಲಿ ಯಾವುದೊಂದನ್ನು ಯಾರಾದರೂ ಸ್ಪರ್ಶಿಸಿದರೂ ಅಂಥವನ ತಲೆ ತಕ್ಷಣ ಹಾರಿಹೋಗುವಂತಹ ಮಂತ್ರವನ್ನೂ ಪ್ರಯೋಗಿಸಿದನು.

ಮೃತ್ಯುದೇವತೆ ಯಮಧರ್ಮರಾಜನು, ಶಿಲ್ಪಿಯ ಮರಣದ ದಿನ ತಾನೇ ಬಂದನು. ಶಿಲ್ಪಿಯು ಅತ್ಯಂತ ಚತುರನಾಗಿದ್ದಂತೆಯೇ ಚಾಣಾಕ್ಷನೂ ಆಗಿದ್ದನೆಂದು ಯಮನು ಕೇಳಿ ತಿಳಿದಿದ್ದನು. ಒಂದೇ ಬಗೆಯಲ್ಲಿದ್ದ ಎಂಟು ಮೂರ್ತಿಗಳನ್ನು ಕಂಡು ಅವನು ಬೆರಗಾದನು. ಅವುಗಳ ಮೇಲೆ ಪ್ರಯೋಗವಾಗಿದ್ದ ಮಂತ್ರವನ್ನೂ ಅರಿತನು. ತನ್ನೆಲ್ಲ ದೈವೀ ಶಕ್ತಿಯಿಂದಲೂ ಯಾವುದು ಶಿಲ್ಪ ಯಾರು ಶಿಲ್ಪಿ ಎಂದು ತೀರ್ಮಾನಿಸುವುದು ಯಮಧರ್ಮನಿಗೆ ಸಾಧ್ಯವಾಗಲಿಲ್ಲ. ಶಿಲ್ಪಿಯ ಕರಕುಶಲತೆಯ ಬಗೆಗೆ ಮೆಚ್ಚುಗೆ ಅವನ ಕಣ್ಣುಗಳಲ್ಲಿ ಹೊರಹೊಮ್ಮಿತು. ಕೈಗಳಿಂದ ಚಪ್ಪಾಳೆ ತಟ್ಟುತ್ತಾ, ''ವಹವಾ ! ಅದ್ಭುತ ಕೌಶಲ್ಯ. ಆದರೆ ಒಂದು ಮುಖ್ಯವಾದ ನ್ಯೂನತೆಯನ್ನು ಮರೆತಿರುವಂತಿದೆ !'' ಎಂದನು. ಈ ಆಕ್ಷೇಪಣೆಯನ್ನು ಕೇಳುತ್ತಿದ್ದಂತೆಯೇ ನಿಜವಾದ ಶಿಲ್ಪಿಯು ಆ ಮೂರ್ತಿಗಳ ಸಾಲಿನಿಂದ ಹೊರಬಂದು – ''ಶಿಲ್ಪದ ವಿಷಯ ನಿನಗೇನು ಗೊತ್ತು? ಇದರಲ್ಲಿ ಏನು ದೋಷವಿದೆ ಹೇಳು'' ಎಂದು ಬಿಟ್ಟನು. ಯಮಧರ್ಮರಾಜನು ಶಿಲ್ಪಿಯ ಕೈಗಳನ್ನು ಹಿಡಿದುಕೊಂಡು, ತುಂಟ ನಗೆ ಬೀರುತ್ತಾ : ''ಸ್ವಾಮಿಗಳೇ, ನಿಮ್ಮ ಈ 'ಅಹಂ' ಎನ್ನುವುದೊಂದೇ ನಿಜವಾದ ದೋಷ. ನಿಮಗಾಗಿ ಕಾದಿರುವ ಅಪಾಯವನ್ನು ಮರೆತು, ನಿಮ್ಮನ್ನು ನೀವು ತೋರಿಸಿಕೊಂಡಿರಿ'' ಎಂದನು.

ಮನುಷ್ಯನು ಪಡೆದಿರುವ ಎಲ್ಲ ಉತ್ತಮ ಗುಣಗಳನ್ನೂ ಕೆಡಿಸಲು ಕೊಂಚ ''ಅಹಂ'' ಸಾಕು !

✤ ✤ ✤

## 39. ರಾಮನಾಮದ ಬೆಲೆ ಎಷ್ಟು ?

ಮದನ್, ಮೈಸೂರಿನ ಪ್ರಖ್ಯಾತ ವಕೀಲ. ಬಾಲ್ಯದಿಂದಲೇ ಅವನು ಯಾವ ದೇವರನ್ನೂ ನಂಬುತ್ತಿರಲಿಲ್ಲ. ಶಾಸ್ತ್ರಗಳನ್ನೂ ಒಪ್ಪುತ್ತಿರಲಿಲ್ಲ. ಸಂತರು, ಮಹಾತ್ಮರುಗಳಿಂದ ಯಾವಾಗಲೂ ದೂರವೇ ಇರುತ್ತಿದ್ದ. ಅವನ ನೆರೆಮನೆಯವನಾದ ವರನ್ ವೃತ್ತಿಯಲ್ಲಿ ಒಬ್ಬ ಮಲ್ಲ (ಬಾಕ್ಸರ್), ಆದರೆ ದೊಡ್ಡ ದೈವಭಕ್ತ, ರಾಮನಾಮ ಜಪದಲ್ಲಿ ಅವನಿಗೆ ಅಪಾರ ಶ್ರದ್ಧೆ. ಮದನನನ್ನು ಕಂಡರೆ ಅವನಿಗೆ ತುಂಬ ಪ್ರೀತಿ. ಬದುಕಿನಲ್ಲಿ ಒಮ್ಮೆಯಾದರೂ ರಾಮನಾಮ ಅವನ ನಾಲಗೆಯಲ್ಲಿ ಬರಲಿ ಎಂದು ಅವನ ಉತ್ಕಟ ಅಪೇಕ್ಷೆ. ಒಂದು ದಿನ ಅವರಿಬ್ಬರೂ ಉದ್ಯಾನವನದಲ್ಲಿ ಸಂಧಿಸಿದರು. ವರನ್ ಅವನ ಕೈಗಳನ್ನು ಥಟಕ್ಕನೆ ಬಿಗಿಯಾಗಿ ಹಿಡಿದು ಕೆನ್ನೆಗೆ ಬಲವಾಗಿ ಬಾರಿಸಿ "ಈ ರಾಮನಾಮವನ್ನು ಒಮ್ಮೆ ಹೇಳು. ಇಲ್ಲದಿದ್ದರೆ ಬಡಿದು ಮುದ್ದೆ ಮಾಡಿ ಬಿಡುತ್ತೇನೆ ನೋಡು!" ಎಂದು ಬೆದರಿಸಿದ. ಮದನನೂ ಮೊಂಡತನದಿಂದ "ಖಂಡಿತ ಹೇಳುವುದಿಲ್ಲ. ಖಂಡಿತ ಹೇಳುವುದಿಲ್ಲ" ಎಂದ. ವರನ್ ಅವನನ್ನು ನೆಲಕ್ಕೆ ಅಪ್ಪಳಿಸಿ, ಎದೆಯ ಮೇಲೆ ಕುಳಿತು, ಕುತ್ತಿಗೆಯನ್ನು ಅಮುಕುತ್ತಾ ಗರ್ಜಿಸಿದ : "ರಾಮನಾಮ ಹೇಳುತ್ತೀಯೋ ಇಲ್ಲವೋ !" ಪುನಃ ಮದನ ಪ್ರತಿಭಟಿಸುತ್ತಾ : "ನೀನು ಬೇಕಾದ್ದು ಮಾಡು ಎಂದಿಗೂ ರಾಮನ ಹೆಸರನ್ನು ನಾನು ಉಚ್ಚರಿಸುವುದಿಲ್ಲ ಎಂದು ಈಗಾಗಲೇ ಹೇಳಲಿಲ್ವಾ?" ಎಂದು ಬಿಟ್ಟ.



ಆ ಮಲ್ಲ ತಕ್ಷಣ ತನ್ನ ಹಿಡಿತವನ್ನು ಸಡಿಲಿಸಿ, ಅವನನ್ನು ಅಪ್ಪಿಮುದ್ದಿಡುತ್ತಾ ಹೇಳಿದ : "ಅಂತೂ ರಾಮನಾಮವನ್ನು ಹೇಳಿಯೇ ಬಿಟ್ಟೆ. ನನಗೆ ಅಷ್ಟು ಸಾಕು. ಆದರೆ ನನ್ನ ಮಾತು ಕೇಳು : ನೀನು ಯಾವಾಗಲಾದರೂ ಈಗತಾನೇ ಹೇಳಿದ ರಾಮನಾಮವನ್ನು ನನಗೆ ಪ್ರತಿಯಾಗಿ ನೀಡು ಇಲ್ಲವೇ ಮಾರಿಬಿಡು ಎಂದರೆ, ಖಂಡಿತಾ ಅದಕ್ಕೆ ಒಪ್ಪಬೇಡ."

ಹಲವು ವರ್ಷಗಳ ನಂತರ ಮದನ ಸಾವಿಗೆ ಈಡಾದ. ಅವನನ್ನು ಯಮನ ನ್ಯಾಯಾಲಯಕ್ಕೆ ಕರೆದೊಯ್ಯಲಾಯಿತು. ಯಮ ಅವನನ್ನು ಎಚ್ಚರಿಸಿ ಬುದ್ಧಿ ಹೇಳುತ್ತಾ : "ನೀನೊಬ್ಬ ಶುದ್ಧ ಮೂರ್ಖ. ದೇವರಲ್ಲಿ ನಿನಗೆ ನಂಬಿಕೆಯಿಲ್ಲ. ಈ ಜನ್ಮದಲ್ಲಿ ನೀನು ಯಾರಿಗೂ ಒಂದು ಒಳ್ಳೆಯದನ್ನು ಮಾಡಿಲ್ಲ. ನಾನು ನಿನ್ನನ್ನು ನರಕಕ್ಕೆ ದೂಡುತ್ತೇನೆ. ಬಹುಕಾಲ ಅಲ್ಲಿ ನರಳುತ್ತಾ ಬಿದ್ದಿರು" ಎಂದ. ಮದನ ಯಮನನ್ನು ಪ್ರತಿಭಟಿಸಿದ : "ಇಲ್ಲ ಪ್ರಭು, ನಿಮ್ಮ ಲೆಕ್ಕದಲ್ಲಿ ಎಲ್ಲೋ ತಪ್ಪಿದೆ. ನನ್ನ ಜೀವನದಲ್ಲಿ ಒಂದು ಬಾರಿ ನಾನು ರಾಮನಾಮವನ್ನು, ಉಚ್ಚರಿಸಿದ್ದೇನೆ." ಲೆಕ್ಕ ತಪಾಸಣೆ ಮಾಡಿದಾಗ ಮದನನು ಹೇಳಿದುದು ನಿಜ ಎಂದು ಯಮನಿಗೆ ಅರಿವಾಯಿತು. ಮದನನ ಕಡೆಗೆ ತಿರುಗಿ ಯಮನು : "ನಿನ್ನ ಜೀವನದಲ್ಲಿ ನೀನು ಉಚ್ಚರಿಸಿದ ಒಂದು ರಾಮನಾಮಕ್ಕೆ ಪ್ರತಿಯಾಗಿ ಏನು ತೆಗೆದುಕೊಳ್ಳುವೆ?" ಎಂದು ಕೇಳಿದ. ತಕ್ಷಣ ಮದನನಿಗೆ ವರನ್ ಹೇಳಿದುದು ಸ್ಮರಣೆಗೆ ಬಂದಿತು. ಯಮನನ್ನು ಕುರಿತು : "ಶಾಸ್ತ್ರಗಳ ಪ್ರಕಾರ ಒಂದು ರಾಮನಾಮದ ಬೆಲೆ ಏನು ಎಂದು ತಾವೇ ಕಂಡುಕೊಳ್ಳಿ ಪ್ರಭು. ಅದನ್ನು ನನಗೆ ನೀಡಿ ಸಾಕು" ಎಂದ. ಯಮನು ಈ ವಿಷಯದಲ್ಲಿ ಪಂಡಿತೋತ್ತಮರನ್ನು ವಿಚಾರಿಸಿದಾಗ, ರಾಮನಾಮದ ಬೆಲೆಯನ್ನು ಯಾವ ಶಾಸ್ತ್ರವೂ ನಿರ್ಧರಿಸಿ ಹೇಳಿಲ್ಲ ಎಂಬುದು ತಿಳಿಯಿತು. ಯಮ, ಮದನನ್ನು ದೇವರಾಜನಾದ ದೇವೇಂದ್ರನ ಬಳಿ ಕರೆದುಕೊಂಡು ಹೋದ. ಅವನಿಗೂ ರಾಮನಾಮದ ಬೆಲೆ ತಿಳಿದಿರಲಿಲ್ಲ. ನಂತರ ಯಮ ದೇವೇಂದ್ರ ಇಬ್ಬರೂ

ಮದನನ ಜೀವದೊಂದಿಗೆ ಬ್ರಹ್ಮನ ಬಳಿಗೆ ಹೋದರು. ಅನಂತರ ಶಿವನ ಬಳಿಗೆ ಹೋದರು. ಆದರೆ ಮೂಲ ಪ್ರಶ್ನೆಗೆ ಉತ್ತರ ಇವರಿಬ್ಬರಲ್ಲೂ ದೊರೆಯಲಿಲ್ಲ. ಅಂತಿಮವಾಗಿ ವೈಕುಂಠಕ್ಕೆ ತೆರಳಲು ಅವರು ನಿಶ್ಚಯಿಸಿದಾಗ, ಇನ್ನು ಒಂದು ಹೆಜ್ಜೆ ಮುಂದೆ ಇಡಲೂ ನನಗೆ ಸಾಧ್ಯವಿಲ್ಲ ಎಂದು ಮದನ ಮೊಂಡುಬಿದ್ದ. ತೀರ ಅಸಹಾಯಕರಾಗಿ ಅವರು ಮದನನನ್ನು ಒಂದು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು, ಯಮ, ದೇವೇಂದ್ರ, ಬ್ರಹ್ಮ, ಶಿವ ಈ ನಾಲ್ವರೂ ದೇವತೆಗಳು ತಾವೇ ಪಲ್ಲಕ್ಕಿಯನ್ನು ಹೊತ್ತು ಪ್ರಭು ವಿಷ್ಣುವಿನ ಬಳಿ ಹೋದರು. ನಾಲ್ವರು ಪ್ರಮುಖ ದೇವತೆಗಳೂ ಪಲ್ಲಕ್ಕಿ ಹೊತ್ತು ತನ್ನ ಬಳಿಗೇ ಬರುತ್ತಿರುವುದನ್ನು ದೂರದಿಂದ ನೋಡಿದ ವಿಷ್ಣುವು ಯಾರೋ ಗಣ್ಯಾತಿಗಣ್ಯನನ್ನು ಕರೆತರುತ್ತಿದ್ದಾರೆ ಎಂದು ಊಹಿಸಿದ ವಿಷ್ಣುವು, ತಾನೇ ಆತನನ್ನು ಸ್ವಾಗತಿಸಲು ಧಾವಿಸಿದ. ಮದನನಿಗೆ ಕೈನೀಡಿ ಇಳಿಸಿಕೊಂಡ, ತನ್ನ ಸಿಂಹಾಸನದೆಡೆಗೆ ಕರೆತಂದು ತಾನೂ ಕುಳಿತು, ತೊಡೆಯ ಮೇಲೆ ಮದನನ್ನು ಕುಳ್ಳಿರಿಸಿಕೊಂಡ. ರಾಮನಾಮದ ಬೆಲೆಯನ್ನು ದಯಮಾಡಿ ತಿಳಿಸಬೇಕು ಎಂದು ಯಮ ಬ್ರಹ್ಮಾಜಿ ಮೊದಲಾದವರು ವಿಷ್ಣುವನ್ನು ಪ್ರಾರ್ಥಿಸಿದಾಗ, ವಿಷ್ಣುವು ಗಟ್ಟಿಯಾಗಿ ನಕ್ಕು ಹೇಳಿದ : "ಈವರೆಗೆ ನಡೆದುದರಿಂದಲೇ ತಮಗೆ ರಾಮನಾಮದ ಬೆಲೆ ತಿಳಿಯಲಿಲ್ಲವೆ? ನೀವು ನಾಲ್ವರು ದೇವತೆಗಳು ಈತನು ಕುಳಿತ ಪಲ್ಲಕ್ಕಿಯನ್ನು ಹೊತ್ತಿರಿ. ನಾನು ಈತನನ್ನು ಪ್ರೀತಿಯಿಂದ ಆಲಂಗಿಸಿದೆ. ತೊಡೆಯ ಮೇಲೆಯೇ ಕೂರಿಸಿಕೊಂಡೆ. ಇವೆಲ್ಲ ರಾಮನಾಮದ ಮಹಿಮೆಯನ್ನೇ ಸಾರುವ ಸಾಕ್ಷಿಗಳಲ್ಲವೆ? ರಾಮನಾಮದ ಮೌಲ್ಯವು ಅತ್ಯತಿಶಯವಾದುದು, ಅಳತೆಗೆ ಸಿಗದುದು. ಇವನಿಂದ ನೀವುಗಳು ರಾಮನಾಮವನ್ನು ಕೊಳ್ಳಲು ಅಪೇಕ್ಷಿಸಿದಲ್ಲಿ ಆತನು ಕೇಳಿದುದನ್ನೆಲ್ಲ ನೀಡಬೇಕಾಗುತ್ತದೆ."

ಮದನನು ಅತ್ಯಂತ ಹರ್ಷದಿಂದ ಚಪ್ಪಾಳೆ ತಟ್ಟಿದ.



# 40. ದುಬಾರಿ ವಿನಿಮಯ

ಭುವನೇಶ್ವರದ ಸಮೀಪದಲ್ಲಿ ಒಂದು ಹಳ್ಳಿ. ಅಲ್ಲಿಯ ನಿವಾಸಿಗಳೆಲ್ಲರೂ ಭಗವಾನ್ ಕೃಷ್ಣನ ಭಕ್ತರು. ಒಮ್ಮೆ ಪ್ರತಿಯೊಬ್ಬ ಗ್ರಾಮಸ್ಥನಿಗೂ ದುಃಖ ಸಂಕಟಗಳು ಸಹಿಸಲಾರದಷ್ಟಿವೆ ಎಂಬ ಭಾವನೆ ಬೆಳೆದ ಒಂದು ಕಾಲ ಬಂದಿತು. ಅವರ ಭಯ ಹೆಚ್ಚಿಸುವಂತೆ ಪ್ರತಿಯೊಬ್ಬನೂ ತನ್ನ ಸಮೀಪದ ನೆರೆಹೊರೆಯವರು ಎಷ್ಟೋ ಸುಖವಾಗಿದ್ದಾರೆ. ತನಗಿಂತ ತುಂಬ ಕಡಿಮೆ ದುಃಖವನ್ನು ಅನುಭವಿಸುತ್ತಿದ್ದಾರೆ ಎಂಬ ಭ್ರಾಂತಿಗೆ ಒಳಗಾದರು. ಪ್ರತಿಯೊಬ್ಬರೂ ಪ್ರಭು ಕೃಷ್ಣನಿಗೆ ಪ್ರತ್ಯೇಕವಾದ ಅರ್ಜಿ ಕಳುಹಿಸಿ ತಮ್ಮ ದುಃಖದ ಹೊರೆಯನ್ನು ನೆರೆಯವರ ಹೊರೆಯೊಡನೆ ಅದಲು ಬದಲು ಮಾಡಿಕೊಳ್ಳಲು ಅನುಮತಿಸಬೇಕೆಂದು ಪ್ರಾರ್ಥಿಸಿದರು ! ಪ್ರಭು ಕೃಷ್ಣನು ಅವರೆಲ್ಲರಿಗೂ ಒಂದು ಸಂದೇಶ ಕಳಿಸಿ, ಅವರು ತಮ್ಮ ದುಃಖಗಳ ಎಣಿಕೆ ಮಾಡಿ, ಒಂದು ಜಿಪ್ ಹಾಕಿದ ಚೀಲದಲ್ಲಿ ತುಂಬಿ, ಪ್ರತಿಚೀಲದ ಮೇಲೂ ತಮ್ಮ ತಮ್ಮ ಹೆಸರು ಬರೆದು, ತಮ್ಮ ಗ್ರಾಮದಲ್ಲಿನ ಕೃಷ್ಣ ದೇವಾಲಯದಲ್ಲಿ ಅಕ್ಷರಾನುಕ್ರಮಣಿಕೆಯಲ್ಲಿ ಜೋಡಿಸಿಡಬೇಕು ಎಂದು ಆದೇಶಿಸಿದನು. ಹೀಗೆ ಮಾಡಿ ಅವರೆಲ್ಲರೂ ಹೊರಗೆ ಹೋಗಿ, ತಮ್ಮ ಹೆಸರನ್ನು ಕರೆಯುವವರೆಗೂ ಕಾಯಬೇಕು. ಪ್ರತಿಯೊಬ್ಬನಿಗೂ ತನ್ನ ಚೀಲಕ್ಕಿಂತ ಹಗುರವಾದ ಚೀಲವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ನೀಡಲಾಗುತ್ತದೆ ಎಂದು ತಿಳಿಸಲಾಯಿತು.

ಅವರೆಲ್ಲ ಚಾಚೂತಪ್ಪದೆ ಕೃಷ್ಣನ ಆದೇಶವನ್ನು ಪಾಲಿಸಿದರು. ದೇವಾಲಯದಿಂದ ಹೊರಗೆ ಬರುವಾಗ, ತಮ್ಮ ಚೀಲಕ್ಕಿಂತ ಹಗುರವಾದದ್ದು ಎಂದು ತಾವು ಭಾವಿಸಿದ ಚೀಲವನ್ನೇ ತೆಗೆದುಕೊಂಡು ಬಂದರು.

ಕೆಲವು ದಿನಗಳ ನಂತರ ಅವರು ಕಂಡುಕೊಂಡದ್ದೇನೆಂದರೆ, ತಾವು ವಿನಿಮಯ ಮಾಡಿಕೊಂಡ ಚೀಲ ವಸ್ತುತಃ ತಮ್ಮ ಚೀಲಕ್ಕಿಂತಲೂ ಭಾರವಾಗಿದೆ ಎಂದು. ಪುನಃ ಅವರು ಕೃಷ್ಣನ ಮೊರೆಹೊಕ್ಕು ತಾವು ತಂದ ಭಾರದ ಚೀಲವನ್ನು ಹಿಂತಿರುಗಿಸಿ ತಮ್ಮ ಮೊದಲಿನ ಹಗುರವಾದ ಚೀಲವನ್ನೇ ಪಡೆದುಕೊಳ್ಳಲು ಅನುಮತಿಸಬೇಕೆಂದು ಕೋರಿದರು. ಅವರ ಪ್ರಾರ್ಥನೆ ಇನ್ನಷ್ಟು ಮತ್ತಷ್ಟು ಉತ್ಕಟವಾಗುವವರೆಗೂ ಕೃಷ್ಣನು ಕಾಯಿಸಿದನು. ಆವರೆಗೆ ಅವರ ಕೋರಿಕೆಯನ್ನು ಮನ್ನಿಸಲೇ ಇಲ್ಲ. ಪ್ರಭು ಕೃಷ್ಣನ ಎದುರು ಗಟ್ಟಿಯಾಗಿ ರೋದಿಸುತ್ತಾ ಪ್ರತಿದಿನ ಗಂಟೆಗಟ್ಟಲೆ ಪ್ರಾರ್ಥಿಸತೊಡಗಿದರು. ತಮ್ಮ ಮೂರ್ಖತನದ ಹಿಂದಿನ ಕೋರಿಕೆಗಾಗಿ ಕ್ಷಮಿಸಬೇಕೆಂದು ಗೋಗರೆದರು. ಕಟ್ಟಕಡೆಗೆ ಪ್ರಭುವು ಸಂತುಷ್ಟನಾಗಿ, ಎಲ್ಲರೂ ತಮ್ಮ ತಮ್ಮದೇ ದುಃಖದ ಚೀಲವನ್ನು ಪಡೆದುಕೊಳ್ಳುವಂತೆ ಏರ್ಪಡಿಸಿದನು. ಈಗ ಅವರು ತಮ್ಮ ಪ್ರಾರ್ಥನೆ-ಧ್ಯಾನವನ್ನು ಮತ್ತಷ್ಟು ಕಲಿತ ಮೇಲೆ, ದಿನದಿನವೂ ತಮ್ಮ ದುಃಖದ ಭಾರ ಕಡಿಮೆಯಾಗುತ್ತಿರುವುದನ್ನು ಕಂಡುಕೊಂಡರು. ಎಲ್ಲರಿಗೂ ಇದರಿಂದ ಸಂತೋಷ ಉಂಟಾಯಿತು.

ಜಾಹಿ ವಿಧಿ ರಖೇರಾಮ್
ತಾಹಿ ವಿಧಿ ರಹಿಯೇ ॥

(ರಾಮನು ನಿಮ್ಮನ್ನು ಯಾವ ಸ್ಥಿತಿಯಲ್ಲಿ ಇರಿಸಿರುವನೋ ಅದೇ ಸ್ಥಿತಿಯಲ್ಲಿ ಇದ್ದುಬಿಡಿ. ಅದೇ ಸ್ಥಿತಿಯಲ್ಲಿ ಸಂತೋಷವಾಗಿರಿ. ಪ್ರಭುವಿನ ಇಚ್ಛೆಯನ್ನು ಒಪ್ಪಿಕೊಳ್ಳುವುದೇ ಸಂತೋಷದ ಕೀಲಿಕೈ).

✤ ✤ ✤



# 41. ಈ ಮಂದಹಾಸ ಬೇರೆ ಬಗೆಯದು

ಅಂಡಮಾನ್ ದ್ವೀಪದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಭಯಂಕರ ಖೈದಿ ಶೈಲು. ಅದೆಷ್ಟು ಮಂದಿ ತನಗೆ ಪ್ರಿಯರಾಗಿದ್ದ ಹೆಂಗಸರನ್ನೂ ಬಾಲಕಿಯರನ್ನೂ ಅತನು ಕ್ರೂರವಾಗಿ ಹತ್ಯೆ ಮಾಡಿದ್ದನೋ ! ತನಗೆ ಬಲಿಯಾದ ದುರ್ದೈವಿಗಳ ಕಡೆಯ ಕ್ಷಣದ ಭಯಭರಿತ ರೋದನ, ಬೆದರಿದ ಕಣ್ಣುಗಳು, ಪುಸಲಾಯಿಸುವ ಕಣ್ಣುಗಳು, ಅಸಹಾಯಕವೂ ವಿಫಲವೂ ಆದ ಹಸ್ತಗಳು. ಈ ಯಾವುದೂ ತನ್ನ ಹೃದಯದ ಯಾವ ಒಂದು ತಂತಿಯನ್ನೂ ಮೀಟದ, ಸ್ಪಂದಿಸಲಾಗದ ಕ್ರೂರತೆ. ಇವುಗಳನ್ನು ಈಗಲೂ ಸೆರೆಮನೆಯ ಹಜಾರದಲ್ಲಿ ನಡೆದಾಡುವಾಗ ಶೈಲು ವಿವರವಾಗಿ ನೆನಪು ಮಾಡಿಕೊಳ್ಳಬಲ್ಲ. ಅಪ್ಸರೆಯರ ಪ್ರಲೋಭನೆಗೊಳಿಸುವ ಕಡೆಗಣ್ಣ ನೋಟಕ್ಕೆ ಮಾರುಹೋದ ವಿಶ್ವಾಮಿತ್ರನೇ ಮೊದಲಾದ ಋಷಿಗಳಿಗಿಂತ ತಾನು ಅದೆಷ್ಟು ದೊಡ್ಡವನು !

ಅತ್ಯಂತ ಕ್ರೂರಿಯಾದ ಅಪರಾಧಿ ಎಂಬ ಕಾರಣದಿಂದಲೇ ಅವನನ್ನು ಅಂಡಮಾನ್ ದ್ವೀಪಕ್ಕೆ ಕಳುಹಿಸಲಾಗಿತ್ತು. ಈ ಸೆರೆಮನೆಯ ಅಭೇದ್ಯ ಗೋಡೆಗಳನ್ನು ಯಾವನೂ ಲಂಘಿಸಲಾರ, ಒಮ್ಮೆ ಅದರ ಒಳಗೆ ಪ್ರವೇಶಿಸಿದವನು ಎಂದೆಂದೂ ಜೀವಂತವಾಗಿ ಹಿಂತಿರುಗಿ ಬರಲಾರ ಎಂಬ ಖ್ಯಾತಿ ಈ ಅಂಡಮಾನ್‌ಗೆ ಇದ್ದಿತು. ಶೈಲುವಿಗೆ ಹತ್ತೆ ಮಾಡುವ ಯಾವ

ಪೂರ್ವಕಾರಣವೂ ಇರಲಿಲ್ಲ. ಕೊಲೆ ಮಾಡುವುದು ಅವನಿಗೆ ಕೇವಲ ಒಂದು ಚಟವಾಗಿತ್ತು. ಅದನ್ನು ಒಂದು ಕುಶಲಕಲೆಯಂತೆ ಚೊಕ್ಕವಾಗಿ ಮಾಡಿಬಿಡುತ್ತಿದ್ದ! ತುಕ್ಕು ಹಿಡಿದ ಡಬ್ಬಾಗಳು, ಒಣಗಿದ ಎಲೆಗಳು, ಮರದ ರೆಂಬೆ ಕೊಂಬೆಗಳು ಮುಂತಾದವನ್ನು ಪೇರಿಸಿದ್ದ ಸೆರೆಮನೆಯ ಒಂದು ಮೂಲೆಯ ಕಡೆಗೆ ಅಡ್ಡಾಡುವುದೇ ಅವನ ಹಗಲು ಸಂಚಾರದ ಕಾರ್ಯಕ್ರಮ! ಅದೆಷ್ಟೋ ವರ್ಷಗಳಿಂದ ಹೀಗೆ ಗುಡ್ಡದಂತೆ ಗುಪ್ಪೆಯಾದ ಮೂಲೆಯನ್ನು ಯಾರೂ ಗುಡಿಸಿ ಶುದ್ಧ ಮಾಡಿರಲೇ ಇಲ್ಲ. ಇದ್ದಕ್ಕಿದ್ದಂತೆ ಒಮ್ಮೆ ತನ್ನ ಹಾದಿಯಲ್ಲಿ ನಿಶ್ಚಲನಾಗಿ ನಿಂತುಬಿಟ್ಟ. ಆ ಎಲೆಗಳ ನಡುವೆ ಒಂದು ದುರ್ಬಲವಾದ ಹೆಣ್ಣು ಮಗು - ಅದೇ ತಾನೇ ಹುಟ್ಟಿದುದು - ನಕ್ಷತ್ರದಂತೆ ಹೊಳೆವ ಕಣ್ಣುಗಳನ್ನು ಪಿಳಕಿಸುತ್ತ ಬಿದ್ದುಬಿಟ್ಟಿದೆ ! ಪಕ್ಕದಲ್ಲಿನ ಮಹಿಳೆಯರ ವಾರ್ಡಿನ ಯಾರೊ ಹೆಣ್ಣು ಯಾರೋ ಜೈಲು ಸೇವಕನಿಗೆ ಬಸಿರಾಗಿ ಹಡೆದು ಈ ಕೊಳಕು ರಾಸಿಯ ಮೇಲೆ ಎಸೆದ ಪಾಪದ ಫಲ ಈ ಮಗು. ತನ್ನ ವಿಶ್ರಾಂತಿ ಜೀವನದಲ್ಲಿ ಬಹುದಿನ ಅನಂತರ ಕಂಡುಕೊಂಡ ಬೇಟೆಯ ಮಿಗ ಇದು. ಶೈಲೂವಿನ ಮುಖದ ನೆರಿಗೆಗಳು ಗಡುಸಾದವು. ಒಂದು ಕ್ರೂರ ನಗೆ ಅವನ ತುಟಿಗಳ ಮೇಲೆ ಆಡಿತು. ಒಂದು ಭಯಂಕರ ಸಂತಸ - ತನ್ನ ಬಲಿಪಶುವನ್ನು ಲಾಲಸೆಯಿಂದ ನೋಡುತ್ತಾ ತನ್ನ ಅದೃಷ್ಟದ ಬಗೆಗೆ ನಾಲಗೆಯಲ್ಲಿ ನೀರು ಸುರಿಸುವಾಗಿನ ಸಂತಸದಂತಹ ಹುಲಿಯ ಖುಷಿ - ದಿಂದ ಅವನ ಕಣ್ಣುಗಳನ್ನು ತುಂಬಿತುಳುಕಿತು.

ಶೈಲು ತನ್ನ ಬೂಟುಗಾಲನ್ನು, ಕುಶಲ ಮಾಸ್ಟರನು ಪುಟ್ಟ ಪ್ರಾಣಿಯ ಗಂಟಲನ್ನು ಹಿಡಿಯುವಾಗ ತೋರುವ ನಿಖರತೆಯಂತೆ ಮೇಲೆತ್ತಿದ. ಒಂದು-ಒಂದೇ ಒಂದು ಹೊಡೆತ. ಬಲಿಪಶು ಮುದ್ದೆಯಾಗಿ ಬಿದ್ದುಬಿಡುತ್ತದೆ. ಆಗಲೇ ಅವನು ಶಿಶುವೊಂದರ ನೀಳವಾದ, ಮುದ್ದಾದ ಕೊರಳನ್ನು ಕಂಡಿದ್ದು.



ಅದು ಅವನನ್ನು ಉತ್ತೇಜಿಸಿತು. ತನ್ನ ಪ್ಯಾಂಟಿನ ಜೇಬಿನಲ್ಲಿದ್ದ, ಈ ಮೊದಲು ಅದೆಷ್ಟೋ ಕೊರಳುಗಳಿಗೆ ಉರುಳಾಗಿ ಸಾವಿನ ಆಲಿಂಗನವನ್ನು ನೀಡಿದ್ದ ನೈಲಾನ್ ದಾರವನ್ನು ಶೈಲು ನೆನಪಿಸಿಕೊಂಡ. ಈ ಕಾರಣದಿಂದಲೇ ಅವನು ''ಕೊರಳು ಹಿಸುಕ'' ಎಂದೇ ಖ್ಯಾತನಾಗಿದ್ದ. ಅನಿಶ್ಚಿತತೆಯ ಆ ಒಂದು ಕ್ಷಣದಲ್ಲಿ, ಶೈಲು, ಆ ಪುಟ್ಟ ಜೀವ ಕಣ್ಣು ತೆರೆದು ನೇರವಾಗಿ, ನಿರ್ಭಯವಾಗಿ ತನ್ನನ್ನೇ ನೋಡುತ್ತಿರುವುದನ್ನು ಗಮನಿಸಿದ. ಮೆಲ್ಲನೆ ಒಂದು ಮೃದು ಮಂದಹಾಸ ಆ ಮಗುವಿನ ಮುಖದಲ್ಲಿ ಸುಳಿಯಿತು. ಹಾಗೆ ನಗೆ ಬೀರುವಾಗ ಅದು ತನ್ನ ಕೆಂದುಟಿಗಳನ್ನು ಸ್ವಲ್ಪವೇ ತೆರೆಯಿತು. ಶೈಲು ಮಂತ್ರ ಮುಗ್ಧನಾಗಿ, ನಿಶ್ಚಲನಾಗಿಬಿಟ್ಟ. ಪ್ರಭು ನಟರಾಜನಂತೆ ಒಂದು ಕಾಲನ್ನು ಮೇಲೆತ್ತಿಯೇ ಇದ್ದ. ನಂಬಲೇ ಆರದಂತೆ ಮಗುವನ್ನೇ ನೆಟ್ಟನೋಟದಿಂದ ನೋಡತೊಡಗಿದ. ನಗುನಗುವ ಆ ಮಗುವಿನ ಕಣ್ಣುಗಳಲ್ಲಿ ನಿರ್ಭಯವಾದ, ನಿರ್ಮಲವಾದ ಪ್ರೀತಿಯ ಆಮಂತ್ರಣವಿದ್ದಿತು. ಆ ಶಿಶುವಿನ ಕಣ್ಣುಗಳ ಆಳದಿಂದ ಅಪರಿಮಿತವಾದ, ಬೇಷರತ್ತಾದ, ಪ್ರೀತಿ ಹಾಗೂ ದೈವೀಕಾರುಣ್ಯದ ಹೊಳೆ ಹರಿದು ಬರುತ್ತಿತ್ತು. ಶೈಲು ಮಗುವಿನ ಪಕ್ಕದಲ್ಲಿ ಕುಳಿತು ತನ್ನ ಕಿರುಬೆರಳನ್ನು ಅದರ ಬಾಯಲ್ಲಿ ಆಟವೆಂಬಂತೆ ಇರಿಸಿದ. ಮಗು ಅದನ್ನು ಲೋಚಲೊಚನೆ ಚೀಪತೊಡಗಿತು. ಅದು ತುಂಬ ಹಸಿದಿದೆ ಎಂದು ಶೈಲುವಿಗೆ ಅರಿವಾಯಿತು. ತಾನು ಸೆರೆಮನೆಯಲ್ಲಿ ಬಂದಿಯಾದುದರಿಂದ, ಹಾಲು ಅವನಿಗೆ ದುರ್ಲಭವಾಗಿತ್ತು. ಅವನ ತಟ್ಟೆಯಲ್ಲಿ ಊಟದ ಗಂಜಿಯಲ್ಲಿ ಮಿಕ್ಕಿದ ಸ್ವಲ್ಪ ತಿಳಿ ಉಳಿದಿದ್ದುದನ್ನು ನೆನಪಿಸಿಕೊಂಡ. ತನ್ನ ಕೋಣೆಗೆ ಬೇಗನೆ ಓಡಿ ಅದನ್ನು ತೆಗೆದುಕೊಂಡು ಬಂದ. ಗಂಜಿಯಲ್ಲಿ ತನ್ನ ಬೆರಳನ್ನು ಅದ್ದಿ ಮಗುವಿಗೆ ಚೀಪಲು ಬಿಟ್ಟ. ಅನೈಚ್ಛಿಕವಾಗಿ ತಾನು ಮಾಡುತ್ತಿರುವ ಈ ಎಲ್ಲ ಕಾರ್ಯಗಳ ಹಿಂದಿನ ಭಾವನೆಗಳನ್ನು ಅವನು ತಿಳಿಯಲಾರದೆ ಹೋದ. ಅವನು ತನಗೆ ತಾನೇ ಹೊಸಬನಾಗಿ ತೋರಿದ. ತನಗೆ ಏನಾಗಿ ಹೋಯಿತು. ಏಕೆ, ಎಂಬುದನ್ನು

ಅರ್ಥಮಾಡಿಕೊಳ್ಳಲಾಗಲಿಲ್ಲ. ಮೃದುತೆ ಹಾಗೂ ಕಾರುಣ್ಯ ಅವನ ಶಬ್ದ ಪ್ರಪಂಚದ ಆಚೆಿನ ಭಾವಗಳು. ತನ್ನ ಕೋಣೆಗೆ ಹಿಂತಿರುಗಿ, ತನ್ನದೇ ಹಾಸಿಗೆಯಿಂದ ಒಂದಿಷ್ಟು ಬಟ್ಟೆಯನ್ನು ಹರಿದುಕೊಂಡ, ಅದರೊಳಗಿನ ಹತ್ತಿಯನ್ನು ಸ್ವಲ್ಪ ತೆಗೆದುಕೊಂಡ. ಎಲ್ಲವನ್ನೂ ಮಗುವಿನ ಬಳಿಗೆ ಕೊಂಡೊಯ್ದ. ರಾತ್ರಿಯ ಚಳಿಯಿಂದ ಮಗುವನ್ನು ರಕ್ಷಿಸಲು ಅವುಗಳಿಂದ ಮಗುವನ್ನು ಬೆಚ್ಚಗೆ ಹೊದಿಸಿದ. ರಾತ್ರಿ ಪಾಳಿಯ ವೇಳೆ ತನ್ನ ರೂಮಿನ ಬೀಗ ಹಾಕುವ ಹೊತ್ತು ಬೇಗ ಬೇಗ ಹಿಂತಿರುಗಿದ.

ಮರುದಿನ ಅವನು ಮಗುವಿನ ಬಳಿ ಬರುವುದರಲ್ಲಿ ಸಾಕಷ್ಟು ತಡವಾಯಿತು. ಬೆಳಗಿನ ಕವಾಯತು, ಉಪಹಾರಗಳ ನಂತರವಷ್ಟೇ ಅವನನ್ನು ಹೊರಗೆ ಬಿಡುತ್ತಿದ್ದುದು. ತನ್ನ ತಗಡಿನ ಡಬ್ಬಿಯಲ್ಲಿ ಒಂದಿಷ್ಟು ತೆಳುವಾದ ಗಂಜಿಯನ್ನು ತಂದು ಮಡಿಚಿದ ಎಲೆಯಲ್ಲಿ ಸ್ವಲ್ಪ ಸ್ವಲ್ಪವೇ ಕುಡಿಸತೊಡಗಿದ. ತನ್ನ ಗುಪ್ತ ಸ್ಥಳಕ್ಕೆ ಅವನು ಬಂದಾಗ ಹಲವಾರು ಹಕ್ಕಿಗಳು ಮಗುವಿನ ಸುತ್ತ ಕುಳಿತಿದ್ದು, ತಾನು ಬರುತ್ತಿದ್ದುದನ್ನು ಕಂಡು ಹಾರಿಹೋದದ್ದನ್ನು ನೋಡಿ ಅಚ್ಚರಿಪಟ್ಟ. ಎರಡನೇ ಆಶ್ಚರ್ಯವೆಂದರೆ ಮಗು ಒಮ್ಮೆಯೂ ಅಳದೆ ಇದ್ದುದು. ಹಾಗೇನಾದರೂ ಅತ್ತಿದ್ದರೆ, ಸೆರೆಮನೆಯ ಕಾವಲುಗಾರರ ಪಡೆಯ ವಾರ್ಡರ್‌ಗಳ ಗಮನ ಅತ್ತಲೇ ಹರಿಯುತ್ತಿತ್ತು. ಎರಡನೆಯ ದಿನ ತನ್ನದೇ ಕೋಟಿನ ಅಂಚು ಕಟ್ಟಿದ್ದ ಲಿನನ್ ಬಟ್ಟೆಯನ್ನು ಹರಿದು ತರಲು ಸಾಧ್ಯವಾಯಿತಲ್ಲದೆ ಹಿಂದಿನ ದಿನದ ಕೊಳೆಯಾದ ಬಟ್ಟೆಯನ್ನು ತೆಗೆದು ಅದನ್ನು ಬದಲಾಯಿಸಲು ಶಕ್ಯವಾಯಿತು. ಬಿಡುವು ದೊರೆತಾಗಲೆಲ್ಲ ಮಗುವಿನೊಡನೆ ಕಳೆಯುತ್ತಾ, ಅದನ್ನು ಆಡಿಸುತ್ತಾ, ಕಾಲ ಕಳೆಯತೊಡಗಿದ. ಹಕ್ಕಿಗಳೂ ಸಹ ಕಾಲಕ್ರಮದಲ್ಲಿ ಹತ್ತಿರ ಬಂದು ಗುಂಪುಗೂಡುವಂತಾಯಿತು. ಅವನ ತಲೆಯ ಮೇಲೆ ತೊಡೆಯ ಮೇಲೆ, ಭುಜದ ಮೇಲೆ, ಅವು ಕುಳ್ಳಿರುತ್ತಿದ್ದವು. ಮಗುವನ್ನು ಗಂಟೆಗಟ್ಟಲೆ ನೋಡುತ್ತಾ ಅವು ಖುಷಿ



ಪಡುತ್ತಿದ್ದವು. ತಾನು ಎಂಟು ವರ್ಷದ ಬಾಲಕನಾಗಿದ್ದಾಗ ಕಲಿತಿದ್ದ ಒಂದು ಹಿಂದೀ ದ್ವಿಪದಿ ಶೈಲೂಗೆ ನೆನಪಾಯಿತು. "ಭಗವಂತನ ರಕ್ಷಕಹಸ್ತಗಳು ಒಬ್ಬನ ಮೇಲಿದ್ದರೆ, ಯಾರಿಂದಲೂ ಅವನನ್ನು ಕೊಲ್ಲಲಾಗುವುದಿಲ್ಲ."

ಸುಮಾರು ಒಂದು ವಾರದ ನಂತರ, ಒಂದು ದಿನ ಶೈಲೂ ಮಗುವಿನ ಬಳಿಗೆ ಬಂದಾಗ, ಅದು ತೀವ್ರ ಜ್ವರದಿಂದ ಬಳಲುತ್ತಿರುವುದನ್ನು ಕಂಡ. ಮೈ ಬೆಂಕಿಯಂತೆ ಸುಡುತ್ತಿತ್ತು. ಕಣ್ಣುಗಳು ಮುಚ್ಚಿಹೋಗಿದ್ದವು. ಮುಖ ಬಾಡಿಹೋಗಿತ್ತು. ಏನು ಮಾಡಬೇಕೆಂದು ಅವನಿಗೆ ತಿಳಿಯಲಿಲ್ಲ. ತಾನು ಮಗುವಾಗಿದ್ದಾಗ, ತನ್ನ ತಾಯಿ ಮೊಣಕಾಲು ಬಾಗಿಸಿ ಕೆಲವು ಪ್ರಾರ್ಥನೆಗಳನ್ನು ತನ್ನಿಂದ ಹೇಳಿಸುತ್ತಿದ್ದುದು ಇದ್ದಕ್ಕಿದ್ದಂತೆ ಅವನಿಗೆ ನೆನಪಾಯಿತು. ಮಗುವಿನ ಪಕ್ಕದಲ್ಲಿ ಕುಳಿತುಕೊಂಡ. ಅವನ ಬಾಯಿಂದ ನಿರರ್ಗಳವಾಗಿ ಸ್ವಲ್ಪ ಮಾರ್ಪಡಿಸಿದ ಪ್ರಾರ್ಥನೆ ಉಕ್ಕಿ ಬಂದಿತು:

"ಓ ಪ್ರಭುವೆ, ನೀನು ಇರುವುದೇ ನಿಜವಾದಲ್ಲಿ ನನ್ನ ನೆರವಿಗೆ ಧಾವಿಸಿ ಬರಲು ಇದು ಸುಸಮಯ. ಇಂಥ ಅರ್ಹ ಸಂದರ್ಭದಲ್ಲೂ ನಿನ್ನ ಕಾರುಣ್ಯವನ್ನು ತೋರ್ಪಡಿಸದಿದ್ದರೆ ನೀನು ಕರುಣಾಮಯನೆಂದು ಯಾರು ನಂಬುತ್ತಾರೆ? ನನಗಾಗಿ ನಾನು ಏನನ್ನೂ ಬೇಡುತ್ತಿಲ್ಲ. ಹುಟ್ಟಿನಿಂದಲೇ ದುರ್ವಿಧಿಯನ್ನು ಅನುಭವಿಸುತ್ತಿರುವ ಈ ಮುಗ್ಧ ಮಗುವನ್ನು ದಯಮಾಡಿ ಉಳಿಸು. ಈ ಮಗುವಿಗೆ ಪ್ರತಿಯಾಗಿ ನನ್ನ ಪ್ರಾಣವನ್ನೇ ತೆಗೆದುಕೊಂಡರೂ ನಾನು ಆಕ್ಷೇಪಿಸುವುದಿಲ್ಲ. ಆದುದರಿಂದ ದಯಮಾಡಿ ನನಗೆ ಸಹಾಯ ಮಾಡು ದೇವರೇ!"

ಶೈಲು ಅಸಹಾಯಕನಾಗಿ ರೋದಿಸುತ್ತಲೇ ಇದ್ದ. ಇದ್ದಕ್ಕಿದ್ದಂತೆ ಅವನ ಹಿಂದಿನಿಂದ ಒಂದು ಧ್ವನಿ ಕೇಳ ಬಂದಿತು. "ಬಾಬು, ಎಷ್ಟು ಹೊತ್ತು ಈ ಮಗುವನ್ನು ಹೀಗೆ ನೋಡಿಕೊಳ್ಳಬಲ್ಲಿರಿ?" ಶೈಲೂ ಹಿಂತಿರುಗಿ ನೋಡಿದಾಗ ಜೈಲಿನ ವಾರ್ಡನ್ ಒಬ್ಬ ತನ್ನ ಹಿಂದೆ ನಿಂತು ಮಗುವನ್ನೇ ನೋಡುತ್ತಿರುವುದನ್ನು

ಕಂಡ. ಒಂದು ಕ್ಷಣ ಅವನು ವ್ಯಗ್ರನಾಗಿ ಆ ವಾರ್ಡನ್‌ನ ಕೊರಳು ಕತ್ತರಿಸಿ ಬಿಡಲು ಯೋಚಿಸಿದ. ಆದರೆ ಅದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ವಾರ್ಡನ್ ಒಬ್ಬ ವೃದ್ಧ. ಅವನ ಹಣೆಯ ಮೇಲೆ ಕುಂಕುಮದ ಚಿಹ್ನೆ ಇದ್ದಿತು. ಅವನ ಕಣ್ಣುಗಳು ದಯೆಯಿಂದ ಕೂಡಿದ್ದವು. ಶೈಲುವಿನ ಮನದಲ್ಲಿನ ಹೊಯ್ದಾಟವನ್ನು ತಿಳಿದ ವಾರ್ಡನ್ ಬೇಗನೆ ತನ್ನ ವಿವರಣೆ ನೀಡಿದ. ''ಚಿಂತಿಸ ಬೇಡಿ, ಬಾಬು. ನಾನು ನಿಮ್ಮನ್ನು ಬಿಟ್ಟುಕೊಡುವುದಿಲ್ಲ. ಮೂವತ್ತು ವರ್ಷಗಳ ಮೊದಲು ನನ್ನ ಹೆಂಡತಿ ಒಂದು ಮಗುವಿಗೆ ಜನ್ಮವಿತ್ತಿದ್ದಳು. ಆದರೆ ತಾಯಿ–ಮಗು ಇಬ್ಬರೂ ವಿಧಿವಶರಾದರು. ಈ ಮಗು ಜ್ವರ ಪೀಡಿತವಾಗಿದೆ. ಇದರ ಚಿಕಿತ್ಸೆ ನೀವು ಮಾಡಲಾರಿರಿ. ನನ್ನ ಚೀಲದಲ್ಲಿ ಇದನ್ನು ಕದ್ದೊಯ್ಯುತ್ತೇನೆ. ಡಾಕ್ಟರ್ ಬಳಿಗೆ ತೆಗೆದುಕೊಂಡು ಹೋಗುತ್ತೇನೆ. ನನ್ನ ಅಣ್ಣನ ಮಗುವೆಂದು ಇದನ್ನು ಬೆಳೆಸುತ್ತೇನೆ. ಇತ್ತೀಚೆಗೆ ವಿಧವೆಯಾದ ನನ್ನ ಅತ್ತಿಗೆ ನನ್ನೊಡನೆ ಇರುತ್ತಾಳೆ. ಮಗುವಿನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾಳೆ. ಆಗಾಗ ಮಗುವನ್ನು ನನ್ನೊಡನೆ ಇಲ್ಲಿಗೆ ಕರೆತರುತ್ತೇನೆ. ನಿಮ್ಮ ವಿರಾಮದ ವೇಳೆಯನ್ನು ನೀವು ಅದರೊಡನೆಯೇ ಕಳೆಯಬಹುದು.'' ಶೈಲುವಿನ ಕಣ್ಣುಗಳಿಂದ ಕಂಬನಿ ಕೋಡಿವರಿಯಿತು. ವಾರ್ಡನ್ನಿನ ಪಾದಗಳಿಗೆ ನಮಸ್ಕರಿಸಿದನು.

ಒಬ್ಬ ಕ್ರೂರಿಯಾದ ಕೊಲೆಪಾತಕನ ಹೃದಯವನ್ನೂ ಕ್ಷಣಮಾತ್ರದಲ್ಲಿ ಪರಿವರ್ತಿಸುವ ಭಗವಂತನ ರೀತಿನೀತಿಯನ್ನು ಅರ್ಥಮಾಡಿಕೊಳ್ಳುವುದು ಯಾರಿಗೆ ಸಾಧ್ಯ? ತಿರಸ್ಕೃತ ಮಗುವಿಗೂ ಹೀಗೆ ಅವನು ಆಸರೆ ನೀಡಬಲ್ಲ ! ಶಾಸ್ತ್ರಗ್ರಂಥಗಳಲ್ಲಿ ದೇವೀ ಮಾತೆಯನ್ನು ತನ್ನ ಒಂದು ಕೈಯಲ್ಲಿ, ಹಾದಿ ತಪ್ಪಿದ ತುಂಟಮಕ್ಕಳನ್ನು ಹಿಡಿದು ತರುವ ಪಾಶವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಸದಾ ಕರುಣಾಮಯಿಯಾದ ಆಕೆಯ ಕೃಪೆಗೆ ಪಾತ್ರರಾಗದವರು ಯಾರೊಬ್ಬರೂ ಇಲ್ಲ. ಅವಳಿಗೆ ಜಯ ಜಯ !

✤ ✤ ✤